

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 4 ಸೋಮವಾರ 2024

ಸಂಪುಟ: 44 | ಸಂಚಿಕೆ: 316 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ

ಎಸ್.ಎಂ.ಕೃಷ್ಣ, ಜಾವಗಲ್ ಶ್ರೀನಾಥ್, ಪ್ರೊ.ಭಾಷ್ಯಂ ಸ್ವಾಮೀಜಿ, ಎಂ.ಆರ್. ಸೀತಾರಾಮ್‌ಗೆ ಗೌರವ ಡಾಕ್ಟರೇಟ್

- ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಪದವಿ ಪ್ರದಾನ
- ಪದವಿ ಪಡೆದವರಲ್ಲಿ ಮಹಿಳೆಯರೇ ಮೇಲುಗೈ
- 100 ಮಂದಿಗೆ ಪಿಹೆಚ್.ಡಿ

ಮೈಸೂರು, ಮಾ.3(ಬಿಎಲ್‌ಯು)– ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಭಾನುವಾರ ಅರ್ಥಪೂರ್ಣ ಹಾಗೂ ಅದ್ದೂರಿಯಿಂದ ನಡೆಯಿತು. ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಸೇರಿದಂತೆ ನಾಲ್ವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಅಕ್ಷರದಿಂದ ಬದುಕು ಕಟ್ಟಿಕೊಳ್ಳುವವರಿಗೆ ಪದವಿ, ಸ್ನಾತಕೋತ್ತರ ಪದವಿ ನೀಡಲಾಯಿತು. ಜೊತೆಗೆ ಸಂಶೋಧನಾ ಪ್ರಬಂಧ ಮಂಡಿಸಿದವರಿಗೆ ಪಿಹೆಚ್.ಡಿ ಪ್ರದಾನ ಮಾಡಲಾಯಿತು. ಈ ವೇಳೆ 6 ದಶಕಗಳ ರಾಜಕಾರಣದಿಂದ ಕರ್ನಾಟಕದ ಅಭಿವೃದ್ಧಿಗೆ ತಮ್ಮದೆ ಆದ ಅಮೂಲ್ಯ ಕೊಡುಗೆ ನೀಡಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಸಂಸ್ಕೃತ ಪಾಂಡಿತ್ಯ ಹೊಂದಿರುವ ಮೈಸೂರಿನ ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ, ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನಿರ್ದೇಶಕ ಎಂ.ಆರ್.ಸೀತಾರಾಮ್ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಭಾನುವಾರ ನಡೆದ 104 ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್(ಎಡದಿಂದ ಕುಳಿತಿರುವವರು), ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನಿರ್ದೇಶಕ ಎಂ.ಆರ್.ಸೀತಾರಾಮ್, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಮೈಸೂರಿನ ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. (ಎಡದಿಂದ ನಿಂತಿರುವವರು) ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್, ಕುಲಸಚಿವ(ಪರೀಕ್ಷಾಂಗ) ಪ್ರೊ.ಕೆ.ಎಂ.ಮಹದೇವನ್ ಅವರನ್ನು ಕಾಣಬಹುದು.

ಮೈಸೂರು ಎಕ್ಸ್‌ಪ್ರೆಸ್ ಎಂದೇ ಪ್ರಖ್ಯಾತರಾಗಿರುವ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಅವರನ್ನು ಕಳೆದ ಬಾರಿಯೇ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿತ್ತು. ಆದರೆ ಅಂದು ಅವರು ಆಗಮಿಸದ ಕಾರಣ ಇಂದಿನ 104 ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲರು ಜಾವಗಲ್ ಶ್ರೀನಾಥ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಬಾರಿ 19,992 (ಶೇ.61.99) ಮಹಿಳೆಯರು ಹಾಗೂ 12,257 (ಶೇ.38) ಪುರುಷರು ಸೇರಿದಂತೆ 32,249 ಅಭ್ಯರ್ಥಿಗಳಿಗೆ ವಿವಿಧ ಪದವಿಗಳನ್ನು

● 6ನೇ ಪುಟಕ್ಕೆ

ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದ ಮತ್ತಷ್ಟು ಸಚಿತ್ರ ವರದಿ ಪುಟ–7


ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವದ ಸಚಿತ್ರ ವರದಿ ಪುಟ–9

ಇಬ್ಬರು ಮಕ್ಕಳ ಕೊಂದು ತಾನೂ ಆತ್ಮಹತ್ಯೆಗೆ ಶರಣಾದ ತಾಯಿ


ಬೇಗೂರು ಬಳಿ ಮನಕಲಕುವ ಘಟನೆ



ಜ್ಯೋತಿ



ಬಾಂಧವ್ಯ



ಮಾನಸ

ಮೈಸೂರು, ಮಾ.3–ಗೃಹಿಣಿಯೋರ್ವರು ತನ್ನ ಇಬ್ಬರು ಮಕ್ಕಳನ್ನು ನೇಣು ಬಿಗಿದು ಹತ್ಯೆಗೈದ ನಂತರ ತಾನೂ ನೇಣಿಗೆ ಶರಣಾದ ಹೃದಯವಿದ್ರಾವಕ ಘಟನೆ ಗುಂಡ್ಲುಪೇಟೆ ತಾಲೂಕು ಬೇಗೂರು ಸಮೀಪದ ಹೊರೆಯಾಲ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಗ್ರಾಮದ ಯೋಗೇಶ್ ಎಂಬುವರ ಪತ್ನಿ ಜ್ಯೋತಿ(29) ಎಂಬಾಕೆಯೇ ತನ್ನ ಮಕ್ಕಳಾದ ಬಾಂಧವ್ಯ(7) ಮತ್ತು ಮಾನಸ (3) ಅವರನ್ನು ಹತ್ಯೆಗೈದು ತಾನೂ ನೇಣಿಗೆ ಶರಣಾದವರಾಗಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಮೊದಲು ಇಬ್ಬರು ಮಕ್ಕಳನ್ನು ನೇಣು ಹಾಕಿ ಹತ್ಯೆಗೈದ ನಂತರ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪ್ರಾಥಮಿಕ ವರದಿಗಳಿಂದ ತಿಳಿದು ಬಂದಿದೆ. ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ಪತಿ ಸಂಜೆ 5 ಗಂಟೆ ಸುಮಾರಿಗೆ ಮನೆಗೆ ಹಿಂತಿರುಗಿದಾಗ ಘಟನೆ ಬೆಳಕಿಗೆ ಬಂದಿದೆ. ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಎಸ್ಪಿ ಪದ್ಮಿನಿ ಸಾಹು,

● 6ನೇ ಪುಟಕ್ಕೆ

ಮೈಸೂರಲ್ಲಿ ಪ್ರತ್ಯೇಕ ಅಪಘಾತ: ಮೂವರ ಸಾವು



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಸಂಭವಿಸಿದ ಸ್ಥಳಕ್ಕೆ ಡಿಸಿಪಿ ಜಾಹ್ನವಿ ಹಾಗೂ ಸಂಚಾರ ಎಸಿಪಿ ಪರಶುರಾಮಪ್ಪ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಮಾ.3(ಎಸ್‌ಬಿಡಿ)– ಮೈಸೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ವಿದ್ಯಾರ್ಥಿ ಸೇರಿದಂತೆ ಮೂವರು ಸಾವನ್ನಪ್ಪಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಿದ್ದಲಿಂಗಪುರದ ಬಳಿ ಭಾನುವಾರ ಬೆಳಗ್ಗೆ ಕಾರು ಡಿಕ್ಕಿ ಹೊಡೆದು ಕಳಸ್ತವಾಡಿ ನಿವಾಸಿ ರಮೇಶ್(48) ಸ್ಥಳದಲ್ಲೇ ಮೃತಪಟ್ಟಿದ್ದು, ಕೆಆರ್‌ಎಸ್ ರಸ್ತೆಯಲ್ಲಿನ ಜಿಲ್ಲಾಸ್ಪತ್ರೆ ಬಳಿ ಶನಿವಾರ ತಡರಾತ್ರಿ ಡಿವೈಡರ್‌ನ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬಿ.ಎಂ.ಶ್ರೀನಗರದ ಸಚಿನ್(16) ಹಾಗೂ ಜನಾರ್ಧನ್(25) ಸಾವನ್ನಪ್ಪಿದ್ದಾರೆ.

ಪ್ರಕರಣ 1: ಸಿದ್ದಲಿಂಗಪುರದ ಬಳಿಯ ಸಾರಥಿ ಫ್ಯಾಮಿಲಿ ಡಾಬಾದಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದ ರಮೇಶ್ ರಸ್ತೆ ದಾಟುವಾಗ ಭಾನುವಾರ ಬೆಳಗ್ಗೆ 10 ಗಂಟೆ ಸಮಯದಲ್ಲಿ ಬೆಂಗಳೂರು ಕಡೆಯಿಂದ ಬರುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ರಮೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಕ್ಸ್‌ಪ್ರೆಸ್‌ವೇನಲ್ಲಿ ಅಳವಡಿಸಿರುವ ಫೆನ್ಸಿಂಗ್ ಅನ್ನು ಈ ಮೊದಲೇ ಯಾರೋ ತುಂಡರಿಸಿರುವ ಜಾಗದಲ್ಲೇ ರಮೇಶ್, ಎದುರು ಬದಿಯ

● 6ನೇ ಪುಟಕ್ಕೆ





ಮೈಸೂರು ಮಿತ್ರ ಸೋಮವಾರ 4 ಮಾರ್ಚ್ 2024

ಅಂಚೆ ನೌಕರರ ಸಂಘ ಬಲಿಷ್ಠವಾಗಿದ್ದು, ಬೇರೆ ಸಂಘಟನೆಗಳ ಬೆಂಬಲದ ಅಗತ್ಯವಿಲ್ಲ

40ನೇ ದ್ವೈವಾರ್ಷಿಕ ಅಧಿವೇಶನದಲ್ಲಿ ವಲಯ ಪ್ರತಿನಿಧಿ ಹೇಳಿಕೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘದ 40ನೇ ದ್ವೈವಾರ್ಷಿಕ ಅಧಿವೇಶನ ನಡೆಯಿತು.

ಮೈಸೂರು, ಮಾ.3(ಜಿಎ)–ಅಖಿಲ ಭಾರತ ಅಂಚೆ ನೌಕರರ ಸಂಘದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ 40ನೇ ದ್ವೈವಾರ್ಷಿಕ ಅಧಿವೇಶನ ಭಾನುವಾರ ನಡೆಯಿತು.

ಅಧಿವೇಶನವನ್ನು ಮೈಸೂರು ವಲಯ ಪ್ರತಿನಿಧಿ ಬೇಬಿ ಜೋಸಫ್, ಸಂಘದ ಉಪಾಧ್ಯಕ್ಷ ಸೈಯದ್ ಜಮೀಲ್, ಮಾಜಿ ಅಧ್ಯಕ್ಷ ಹೆಚ್.ಜಿ.ರಾಜು, ಮಾಜಿ ಕಾರ್ಯದರ್ಶಿಗಳಾದ ಹೆಚ್.ಎಸ್.ನಾಗರಾಜ್, ಜಿ.ಗುರುಸ್ವಾಮಿ ಉದ್ಘಾಟಿಸಿದರು.

ನಂತರ ಮೈಸೂರು ವಲಯ ಪ್ರತಿನಿಧಿ ಬೇಬಿ ಜೋಸಫ್ ಮಾತನಾಡಿ, ದೇಶದಲ್ಲಿ ನಮ್ಮ ಸಂಘಟನೆ ಬಹಳಷ್ಟು ಬಲಶಾಲಿಯಾಗಿದ್ದು, ನಮಗೆ ಯಾವುದೇ ಸಂಘಟನೆಗಳ ಬೆಂಬಲದ ಅಗತ್ಯವಿಲ್ಲ. ಆದರೆ, ಕೆಲವು ಸಂಘಟನೆಗಳು ನಮಗೆ ಇಂದು ಅರ್ಧ ದಿನ ರಜೆ ನೀಡುತ್ತಿರುವುದಕ್ಕೆ ನಾವು ಕಾರಣ, ನಾವು ಮನವಿ ನೀಡಿದ್ದಕ್ಕೆ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ನಮ್ಮ ಹೋರಾಟದ ಶ್ರಮದಿಂದ ಎಲ್ಲಾ ಸೌಲಭ್ಯಗಳು ದೊರೆಯುತ್ತಿವೆಯೇ ಹೊರತು ಬೇರೆ ಯಾರಿಂದಲೂ ಅಲ್ಲ ಎಂದರು.

ಇದೇ ರೀತಿ ನಮ್ಮೊಳಗೆ ಬೇರೆ ಬೇರೆ ಸಂಘಟನೆಗಳನ್ನು ತರಬೇಡಿ. ಇದ್ದರಿಂದ ಕೆಲವರು ಬ್ಲಾಕ್‌ಮೇಲ್ ಮಾಡುತ್ತಾರೆ. ಇದೇ ರೀತಿ ನಮ್ಮನ್ನು ತುಳಿಯುವವರನ್ನು ಬೆಂಬಲಿಸಿಕೊಂಡು ಬಂದರೆ ಮುಂದಿನ ದಿನಗಳಲ್ಲಿ ಕಷ್ಟಕರವಾಗಲಿದೆ ಎಂದ ಅವರು, ಅಧಿವೇಶನದಲ್ಲಿ 3ನೇ ವರ್ಗದ ಸಂಘಟನೆ ಅಮಾನ್ಯ ಮಾಡಿರುವುದನ್ನು ರದ್ದು ಮಾಡಬೇಕೆಂದು ಆಗ್ರಹಿಸಿ, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ನಡೆಯುವ ಸಮಾವೇಶದಲ್ಲಿ ಚರ್ಚಿಸಲು ನಿರ್ಧರಿಸಿರುವುದಾಗಿ ತಿಳಿಸಿದರು.

ಈ ವೇಳೆ ಸಂಘದ ಅಭಿವೃದ್ಧಿಗೆ ಶ್ರಮಿಸಿದ ಉಪಾಧ್ಯಕ್ಷ ಸೈಯದ್ ಜಮೀಲ್, ಮಾಜಿ ಅಧ್ಯಕ್ಷ ಹೆಚ್.ಜಿ.ರಾಜು, ಮಾಜಿ ಕಾರ್ಯದರ್ಶಿಗಳಾದ ಹೆಚ್.ಎಸ್.ನಾಗರಾಜ್, ಜಿ.ಗುರುಸ್ವಾಮಿ ಅವರನ್ನು ಅಭಿನಂದಿಸಲಾಯಿತು. ವಿಭಾಗೀಯ ಕಾರ್ಯದರ್ಶಿ ಮತ್ತು ವಲಯ ಕಾರ್ಯಾಧ್ಯಕ್ಷರಾದ ಹೆಚ್.ಸುಂದರಯ್ಯ, ಖಜಾಂಚಿ ಎಂ.ಎನ್.ಗಿರಿಧರ್ ಮತ್ತು ಕಾರ್ಯಕಾರಿಣಿ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಎಚ್‌ಐವಿ, ಏಡ್ಸ್ ಮುಕ್ತ ರಾಷ್ಟ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಕರೆ




ಮೈಸೂರು,ಮಾ.3–ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಶನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ಮೈಸೂರು, ಐಸಿಟಿಸಿ ವಿಭಾಗ, ಇಎಸ್‌ಐ ಆಸ್ಪತ್ರೆ, ಮೈಸೂರು, ಜಿಲ್ಲಾ ಆಸ್ಪತ್ರೆ ಮೈಸೂರು, ಎನ್ ಜೆ ಆಸ್ಪತ್ರೆ ಮೈಸೂರು, ಪ್ರಾಥಮಿಕ ಆರೋಗ್ಯ ಕೇಂದ್ರ, ಕುಂಬಾರಕೊಪ್ಪಲು ಇವರ ವತಿಯಿಂದ ಮೈಸೂರಿನ ಬಸವನಗುಡಿ ಪಾರ್ಕ್ ಹೆಬ್ಬಾಳು ಇಲ್ಲಿ ಸಮುದಾಯ ಆಧಾರಿತ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಚ್‌ಐವಿ ಏಡ್ಸ್ ಕಾಯಿಲೆಯನ್ನು 2030ರ ಒಳಗೆ ನಿರ್ಮೂಲನೆ ಮಾಡಬೇಕಾಗಿ ಮೈಸೂರು ಜನತೆಗೆ ಕರೆ ನೀಡಿ, ತಾವು ಸಹ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಇದೇ ವೇಳೆ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಹುಟ್ಟುಹಬ್ಬ ಆಚರಿಸಲಾಯಿತು.

ಶಿಬಿರದಲ್ಲಿ 700ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಈ ಆರೋಗ್ಯ ಶಿಬಿರದಲ್ಲಿ ವಿವಿಧ ಇಲಾಖೆ ತಜ್ಞ ವೈದ್ಯರು ಆಗಮಿಸಿ ಸಾರ್ವಜನಿಕರಿಗೆ ಉಚಿತವಾಗಿ ಚಿಕಿತ್ಸೆ ನೀಡಿದರು. ಬಿಪಿ,ಶುಗರ್, ಎಚ್‌ಐವಿ, ತಂಬಾಕು, ಗ್ಯಾಸ್ಟ್ರೋ ಎಂಟರಾಲಜಿ ಮೂಳೆ ತಪಾಸಣೆ, ಸ್ತ್ರೀ ರೋಗ ತಪಾಸಣೆ, ಆಭಾ ಮತ್ತು ಇ ಶ್ರಮ್ ಕಾರ್ಡುಗಳನ್ನು ಮತ್ತು ಔಷಧೋಪಚಾರಗಳನ್ನು ಉಚಿತವಾಗಿ ಪಡೆದುಕೊಂಡರು. ಡಾ.ಅಮರನಾಥ್, ಡಾ.ಶಿವಕುಮಾರ್, ಡಾ.ಚಂದ್ರಕಲಾ, ಡಾ.ರಮ್ಯಾ, ಡಾ.ಶೃತಿ ಎನ್.ಜಿ ಆಸ್ಪತ್ರೆಯ ಡಾ.ಮನು ಪ್ರಕಾಶ್, ಡಾ.ಸತೀಶ್ ದುರ್ಗೇಶ್, ಡಾ.ಸಿಂಧು ಲಕ್ಷ್ಮೀ ಡಿ, ಡಾ.ಮಮತಾ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ಸವಿತಾ ವಸುಮತಿ, ಗೀತಾ, ಪುಟ್ಟರಾಜು, ಸಿದ್ದೇಶ್ವರಪ್ಪ ನಾಗೇಂದ್ರ ಪ್ರಸಾದ್, ಹರೀಶ್ ಅಮರ್‌ನಾಥ್, ದೇವರಾಜ್, ಇಎಸ್‌ಐ, ಎನ್.ಜಿ ಆಸ್ಪತ್ರೆ, ಕುಂಬಾರಕೊಪ್ಪಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬೆಂಕಿಗಾಹುತಿಯಾದ ಕಾರು



ಮೈಸೂರು, ಮಾ.3(ಎಸ್‌ಬಿಡಿ)–ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಕಾರು ಕೆಲ ಸಮಯದ ಬಳಿಕ ಬೆಂಕಿಗಾಹುತಿಯಾಗಿ ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ಮೈಸೂರಿನ ರಿಂಗ್ ರಸ್ತೆಯಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಕಾರಿನಲ್ಲಿದ್ದ ಕುವೆಂಪುನಗರ ಎಂ ಬ್ಲಾಕ್‌ನ ಚಂದ್ರು ಹಾಗೂ ನೇಹಾ ದಂಪತಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅಪಘಾತ ನಡೆದ ಕೂಡಲೇ ಅವರು ಕಾರಿನಿಂದಿಳಿದು ಆಸ್ಪತ್ರೆಗೆ ತೆರಳಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಾನುವಾರ ಬೆಳಗ್ಗೆ 11 ಗಂಟೆಯಲ್ಲಿ ಚಂದ್ರು ಹಾಗೂ ನೇಹಾ ಹೋಂಡಾ ಸಿಟಿ ಕಾರಿನಲ್ಲಿ ದಟ್ಟಗಳ್ಳಿ ಕಡೆಗೆ ಹೋಗುತ್ತಿದ್ದಾಗ ಸಾ.ರಾ.ಕನ್ವೆಷನ್ ಹಾಲ್ ಎದುರು ಕಾರಿನ ಟೈರ್ ಸ್ಫೋಟಗೊಂಡಿದೆ. ಈ ವೇಳೆ ಕಾರು ನಿಯಂತ್ರಿಸುವುದಕ್ಕಾಗಿ ಚಂದ್ರು ತಕ್ಷಣ ಹ್ಯಾಂಡ್ ಬ್ರೇಕ್ ಹಾಕಿದ್ದಾರೆ. ಪರಿಣಾಮ ಪಕ್ಕಕ್ಕೆ ಸರಿದು ಡಿವೈಡರ್ ಮೇಲತ್ತಿ ಹಿಮ್ಮುಖವಾಗಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿದೆ.

ಘಟನೆಯಲ್ಲಿ ಸಣ್ಣಪುಟ್ಟ ಗಾಯಗಳಾಗಿದ್ದ ಇಬ್ಬರನ್ನೂ ಸಾರ್ವಜನಿಕರು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ. ಅಷ್ಟರಲ್ಲಿ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು ಕೆಲವೇ ನಿಮಿಷಗಳಲ್ಲಿ ಬೆಂಕಿ ಜ್ವಾಲೆ ಆವರಿಸಿದೆ. ವಿಷಯ ತಿಳಿದ ಕೃಷ್ಣರಾಜ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಅಗ್ನಿಶಾಮಕ ದಳದ ನೆರವಿನೊಂದಿಗೆ ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ವಿದ್ಯುತ್ ಕಂಬ ಜಖಂಗೊಂಡಿದೆ.

ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಜಾಹ್ನವಿ, ಸಂಚಾರ ಎಸಿಪಿ ಪರಶುರಾಮಪ್ಪ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಕೃಷ್ಣರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮೊಹಮ್ಮದ್ ಇರ್ಷಾದ್, ಸಬ್‌ಇನ್ಸ್‌ಪೆಕ್ಟರ್ ಅಶ್ವಿನಿ, ಸಿಬ್ಬಂದಿ ನಾಗರಾಜ್, ಭಜಂತ್ರಿ ಈಶಪ್ಪ ರವಿ ಮತ್ತಿತರರು ಸಂಚಾರಕ್ಕೆ ಅಡ್ಡಿಯಾಗದಂತೆ ಪರಿಸ್ಥಿತಿ ನಿಭಾಯಿಸಿದರು. ಈ ಸಂಬಂಧ ಕೆ.ಆರ್. ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ದೆಹಲಿಯಲ್ಲಿ ಮಾ.6ರಂದು ರೈತರ ಚಳವಳಿ; 10ರಂದು ದೇಶದಾದ್ಯಂತ ರೈಲು ತಡೆ

ಚಂಡೀಗಢ, ಮಾ.3– ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಕಾನೂನು ಖಾತರಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿರುವ ರೈತರು ಇದೇ 6ರಂದು ದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ. ಅಲ್ಲದೆ, ಇದೇ 10ರಂದು ದೇಶದಾದ್ಯಂತ ನಾಲ್ಕು ಗಂಟೆ ರೈಲು ತಡೆ ನಡೆಸಲು ನಿರ್ಧರಿಸಿದ್ದಾರೆ.

ಈ ಪ್ರತಿಭಟನೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಮತ್ತು ರೈತ ಕಾರ್ಮಿಕರು ಪಾಲ್ಗೊಳ್ಳಬೇಕು ಎಂದು ರೈತ ಮುಖಂಡರಾದ ಸರವಣ ಸಿಂಗ್ ಪಂಢೇರ ಮತ್ತು ಜಗಜಿತ್ ಸಿಂಗ್ ದಲ್ಲೆವಾಲ್ ಅವರು ಭಾನುವಾರ ಕರೆ ನೀಡಿದ್ದಾರೆ.

ಖನೌರಿಯಲ್ಲಿ ಹರಿಯಾಣದ ಭದ್ರತಾ ಸಿಬ್ಬಂದಿಯೊಂದಿಗಿನ ಘರ್ಷಣೆಯಲ್ಲಿ ಇತ್ತೀಚೆಗೆ ಮೃತಪಟ್ಟ ರೈತ ಶುಭಕರಣ್ ಸಿಂಗ್ ಅವರ ಸ್ವಗ್ರಾಮವಾದ ಬಠಿಂಡಾ ಜಿಲ್ಲೆಯ ಬಲ್ಲೋಹ್‌ನಲ್ಲಿ ಈ ಇಬ್ಬರೂ ನಾಯಕರು ರೈತರನ್ನು ಉದ್ದೇಶಿಸಿ ಮಾತನಾಡಿದರು.

ಟ್ರ್ಯಾಕ್ಟರ್ ಟ್ರಾಲಿಗಳಲ್ಲಿ ತಲುಪಲು ಸಾಧ್ಯವಾಗದ ದೂರದ ರಾಜ್ಯಗಳ ರೈತರು, ರೈಲುಗಳಲ್ಲಿ ಮತ್ತು ಇತರ ಸಾರಿಗೆ ವ್ಯವಸ್ಥೆಯ ಮೂಲಕ ಇದೇ 6ರಂದು ದೆಹಲಿ ತಲುಪಬೇಕು. ಟ್ರ್ಯಾಕ್ಟರ್ ಟ್ರಾಲಿಗಳಿಲ್ಲದೆ ಬರುವ ರೈತರಿಗೆ ಸರ್ಕಾರವು ದೆಹಲಿ ಪ್ರವೇಶಿಸಲು ಅನುಮತಿ ನೀಡುತ್ತದೆಯೇ ಎಂಬುದು ಆಗ ಸ್ಪಷ್ಟವಾಗಲಿದೆ ಎಂದರು.

4 ಗಂಟೆ ರೈಲು ತಡೆ: ಮಾರ್ಚ್ 10ರಂದು ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ದೇಶಾದ್ಯಂತ ರೈಲು ತಡೆ ಪ್ರತಿಭಟನೆ ನಡೆಸಲಾಗುವುದು ಎಂದು ಪಂಢೇರ ವಿವರಿಸಿದರು.

ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿಯಿಂದ ನಾಳೆ ಬೆಂಗಳೂರಲ್ಲಿ ಸಮ್ಮೇಳನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಂಗಳಮೂರ್ತಿ ಮಾತನಾಡಿದರು.

ಮೈಸೂರು, ಮಾ.3(ಜಿಎ)– ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಮಾ.5ರಂದು ಬೆಂಗಳೂರಿನ ವಸಂತನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ 5ನೇ ರಾಜ್ಯಮಟ್ಟದ ಜಾಗೃತ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ರಾಜ್ಯ ಪದಾಧಿಕಾರಿ ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಸರ್ಕಾರಿ ನೌಕರರಿಗಾಗಿ ಮೂರು ಸಂಘಟನೆಗಳಿವೆ. ಅದಲ್ಲಿ 1.10 ಲಕ್ಷ ಮಂದಿ ಎಸ್‌ಸಿ, ಎಸ್‌ಟಿ ನೌಕರರು ಇದ್ದಾರೆ. ಇವರು ಸಾಮಾನ್ಯ ನೌಕರರಿಗಿಂತ ಹೆಚ್ಚು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ನೆರವಿಗೆ ರಾಜ್ಯದ ಯಾವುದೇ ಸಂಘಟನೆಗಳು ಬಂದಿಲ್ಲ. ಈ ಹಿನ್ನೆಲೆಯಲ್ಲಿ ಸಮನ್ವಯ ಸಮಿತಿ ಆರಂಭವಾಗಿದ್ದು, ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಪಾಧಿಕಾರಿಗಳಿದ್ದಾರೆ. ನಮ್ಮ ಎಲ್ಲಾ ಸಮಸ್ಯೆಗಳ ಬಗ್ಗೆ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸಮಾವೇಶ ಮಾಡಿ ಸರ್ಕಾರದ ಗಮನ ಸೆಳೆಯುತ್ತೇವೆ ಎಂದರು.

ಅದರಂತೆ ಮಾ.5ರಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ಉರಿಲಿಂಗ ಪೆದ್ದಿಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ಹೆಚ್.ಮುನಿಯಪ್ಪ, ಕೆ.ಎನ್.ರಾಜಣ್ಣ, ಪ್ರಿಯಾಂಕ ಖರ್ಗೆ, ಸಂತೋಷ್ ಲಾಡ್ ಆಗಮಿಸಲಿದ್ದಾರೆ ಎಂದರು.

ಮಧ್ಯಾಹ್ನ 2ಗಂಟೆಗೆ 'ಸಂವಿಧಾನದ ಆಶಯಗಳು: ನೌಕರರ ಮತ್ತು ಅಧಿಕಾರಿಗಳ ಜವಾಬ್ದಾರಿ' ಕುರಿತು ನಿವೃತ್ತ ನ್ಯಾಯಾಧೀಶ ಹೆಚ್.ಎನ್.ನಾಗಮೋಹನ್ ದಾಸ್ ವಿಷಯ ಮಂಡನೆ ಮಾಡಲಿದ್ದಾರೆ. ನಿವೃತ್ತ ಅಧಿಕಾರಿ ಹೊರತಂದಿರುವ 'ದಲಿತರ ಆರ್ಥಿಕತೆ : ಸಮಸ್ಯೆ–ಸವಾಲು' ಪುಸ್ತಕವನ್ನು ಖ್ಯಾತ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಪದಾಧಿಕಾರಿ ಪುಟ್ಟಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಡಾ.ಮಂಗಳಮೂರ್ತಿ ಪ್ರಧಾನ ಕಾರ್ಯದರ್ಶಿ ಕುಮಾರಸ್ವಾಮಿ ಉಪಸ್ಥಿತರಿದ್ದರು.



ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮೈಸೂರು ವಿವಿ ವತಿಯಿಂದ ನಡೆದ 2023–24ನೇ ಸಾಲಿನ ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತ ಕ್ರೀಡಾಪಟುಗಳೊಂದಿಗೆ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್ ಹಾಗೂ ಬೋಧಕ, ಬೋಧಕೇತರರನ್ನು ಚಿತ್ರದಲ್ಲಿ ಕಾಣಬಹುದು.

ಅಮೆರಿಕಾ ವಾಸಿ ಭಾರತೀಯ ಎದುರಿಸುವ ಸವಾಲುಗಳ ಕುರಿತಾದ 'ಕ್ರಿಮ್ಸನ್ ಫಾಲ್' ಕೃತಿ ಬಿಡುಗಡೆ



ಲೇಖಕರಾದ ಸ್ವಾತಿ ಚಂದಾ ಮತ್ತು ನರೇಂದ್ರ ದೇಸಿರಾಜು ರಚಿತ 'ಕ್ರಿಮ್ಸನ್ ಫಾಲ್' ಕೃತಿಯನ್ನು ಚಲನಚಿತ್ರ ವಿಮರ್ಶಕಿ ಹಾಗೂ ಲೇಖಕಿ ಮೈಥಿಲಿ ರಾವ್ ಬಿಡುಗಡೆ ಮಾಡಿದರು. ಅಂಕಣಕಾರ ಡಾ.ಜಾವೀದ್ ನಯೀಮ್, ಮೈಸೂರು ಬುಕ್ ಕ್ಲಬ್ಸ್ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಸಂಚಾಲಕಿ ಪಿ.ಅನುರಾಧಾ, ವಾಸ್ತುಶಿಲ್ಪಿ ರಾಮಕೃಷ್ಣ ರಾವ್, ಸಂಚಾಲಕಿ ಹರ್ಷಿದಾ ಹರಿಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಮಾ.3(ಎಂಕೆ)– ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯರ ದೈನಂದಿನ ಜೀವನ, ಎದುರಿಸುವ ಸವಾಲುಗಳ ಕುರಿತಾದ 'ಕ್ರಿಮ್ಸನ್ ಫಾಲ್'(ಎ ರೋನಿ ಅಂಡ್ ಜೋ ಮಿಸ್ಟ್ರಿ) ರಹಸ್ಯ ಕಥನವನ್ನು ಲೋಕಾರ್ಪಣೆಗೊಳಿಸಲಾಯಿತು.

ನಗರದ ಯಾದವಗಿರಿಯಲ್ಲಿರುವ ಸಂಕಲ್ಪ ಸೆಂಟರ್ ಪಾರ್ಕ್‌ನಲ್ಲಿ ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ 'ತಾರಾ ಡೀ' ಕಾವ್ಯನಾಮದಲ್ಲಿ ಲೇಖಕರಾದ ಸ್ವಾತಿ ಚಂದಾ ಮತ್ತು ನರೇಂದ್ರ ದೇಸಿರಾಜು ರಚಿತ 'ಕ್ರಿಮ್ಸನ್ ಫಾಲ್' ಕೃತಿಯನ್ನು ಚಲನಚಿತ್ರ ವಿಮರ್ಶಕಿ ಹಾಗೂ ಲೇಖಕಿ ಮೈಥಿಲಿ ರಾವ್ ಬಿಡುಗಡೆ ಮಾಡಿ, ಲೇಖಕರಿಗೆ ಶುಭಕೋರಿದರು.

ಬಳಿಕ ನಡೆದ ಸಂವಾದದಲ್ಲಿ ಮಾತನಾಡಿದ 'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ಡಾ.ಕೆ.ಜಾವೀದ್ ನಯೀಮ್, ಭಾರತದ ಯುವ ಐಟಿ ಉದ್ಯೋಗಿಗಳನ್ನು ಒಳಗೊಂಡ ವಾಷಿಂಗ್ಟನ್ ಡಿಸಿಯ ಸುತ್ತ ನಡೆದ ಕೊಲೆ ರಹಸ್ಯವು ರೋಮಾಂಚಕ ಮತ್ತು ಕುತೂಹಲಕಾರಿಯಾಗಿದೆ. ಭಾರತದಿಂದ ಅಮೆರಿಕಾಗೆ ತೆರಳಿ ಅಲ್ಲಿಯೇ ನೆಲೆಸಿರುವವರ ಜೀವನ ಆಧಾರಿತ ಕೃತಿ ಇದಾಗಿದೆ. ಅಮೆರಿಕಾದಲ್ಲಿ ಐಟಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವ ಭಾರತೀಯರು ಯಾವೆಲ್ಲಾ ಸವಾಲುಗಳನ್ನು ಎದುರಿಸುತ್ತಾರೆ ಎಂಬುದರ ಬಗ್ಗೆ ಬೆಳಕು ಚೆಲ್ಲಲಾಗಿದೆ. ಇತ್ತೀಚೆಗಂತೂ ಅಮೆರಿಕಾದಲ್ಲಿ ವೀಸಾ ಪಡೆಯುವುದೇ ಕಷ್ಟವಾಗಿದೆ. ವೀಸಾ ಮುಂದುವರೆಸಲಾಗದಂತಹ ಒತ್ತಡದಲ್ಲಿದ್ದು, ವಿಚಿತ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದರು.

ವೀಸಾ ದೊರೆಯದ ಕಾರಣದಿಂದಾಗಿ ಎಷ್ಟೋ ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಮೆರಿಕಾ ದುಬಾರಿ ಜೀವನ ಶೈಲಿಯಲ್ಲಿ ಎಷ್ಟೇ ಸಂಪಾದನೆ ಮಾಡಿದರೂ ಕಷ್ಟವೇ. ಅತಿಯಾದ ಕೆಲಸದಿಂದ ವಿಶ್ರಾಂತಿ ಪಡೆಯುವುದೇ ಕಡಿಮೆ. ಅಮೆರಿಕಾ ಆಸೆಯಲ್ಲಿ ತೆರಳುವ ಯುವಕರು ತಮ್ಮ ಪೋಷಕರಿಗೆ ಸುಳ್ಳು ಹೇಳಿಕೊಂಡೇ ಕಾಲಕಳೆಯುವುದು ಸಹಜವಾಗಿದೆ. ಕೆಲಸ ಕಳೆದುಕೊಂಡರೆ ಮೂರು ತಿಂಗಳ ಅವಧಿಯಲ್ಲಿ ಅದೇ ರೀತಿಯ ಕೆಲಸಕ್ಕೆ ಸೇರಿಕೊಳ್ಳಬೇಕು. ಇಲ್ಲವಾದರೆ ವಾಪಸ್ ಕಳುಹಿಸಲಾಗುತ್ತದೆ ಎಂದು ಅಮೆರಿಕಾದಲ್ಲಿ ಪರಿಸ್ಥಿತಿಯ ಕುರಿತು ತಿಳಿಸಿಕೊಟ್ಟರು.

ಅಮೆರಿಕಾಗೆ ಹೋಗಿ ವೇಗವಾಗಿ ದುಡಿದು ಸಂಪಾದನೆ ಮಾಡುತ್ತೇನೆ ಎಂಬುದು ಬಹಳ ಕಷ್ಟ, ಆದಾಗ್ಯೂ ಅಮೆರಿಕಾದಲ್ಲೇ ನೆಲೆ ಕಂಡುಕೊಳ್ಳುತ್ತೇವೆ ಎನ್ನುವವರಿಗೆ ಧೈರ್ಯದ ಜೊತೆಗೆ ತಾಳ್ಮೆಯೂ ಇರಬೇಕಾಗುತ್ತದೆ. ಎಂಬುದನ್ನು ಕೃತಿಯಲ್ಲಿ ತಿಳಿಸಲಾಗಿದೆ ಎಂದರು. ಮೈಸೂರು ಬುಕ್ ಕ್ಲಬ್ಸ್ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಸಂಚಾಲಕಿ ಪಿ.ಅನುರಾಧಾ, ವಾಸ್ತುಶಿಲ್ಪಿ ರಾಮಕೃಷ್ಣ ರಾವ್, ಸಂಚಾಲಕಿ ಹರ್ಷಿದಾ ಹರಿಕುಮಾರ್ ಮತ್ತಿತರರಿದ್ದರು.

ಇಂದು ಹಂಸ ವಸತಿ ನಿಲಯ ಉದ್ಘಾಟನೆ

ಮೈಸೂರು, ಮಾ.3(ಬಿಎಲ್‌ಯು)–ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೋಸ್ಟಲ್ ಟ್ರೈನಿಂಗ್ ಸೆಂಟರ್‌ನಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಮಹಿಳಾ ವಸತಿ ನಿಲಯದ ಕಟ್ಟಡದ ಉದ್ಘಾಟನಾ ಸಮಾರಂಭ ಮಾ.4ರಂದು ನಡೆಯಲಿದೆ. ಹಂಸ ಎಂಬ ಹೆಸರಿನ ಮಹಿಳಾ ವಸತಿ ನಿಲಯವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದು, ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉಪಸ್ಥಿತರಿರುವರು. ಪೋಸ್ಟಲ್ ಟ್ರೈನಿಂಗ್ ಸೆಂಟರ್‌ನಲ್ಲಿ ನಿರ್ಮಾಣವಾಗಿರುವ ನೂತನ ಮಹಿಳಾ ವಸತಿನಿಲಯದಿಂದ ತರಬೇತಿಗೆ ಆಗಮಿಸುವವರಿಗೆ ಬಹಳ ಅನುಕೂಲವಾಗಲಿದೆ.

ಪಿಎಚ್.ಡಿ ಪದವಿ



ಮೈಸೂರು, ಮಾ. 3–ಡಾ. ಎಂ.ಆರ್.ಗಂಗಾಧರ್ ಅವರ ಮಾರ್ಗದರ್ಶನದಲ್ಲಿ ಎಂ.ಲೋಕೇಶ್ ಅವರು ಮಾನವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮೈಸೂರು,ಮಾ.3–ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಷನ್‌ನಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆಯಲು ಇಚ್ಛಿಸುವ ಆಕಾಂಕ್ಷಿಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಪರೀಕ್ಷೆಯನ್ನು ಮಾ.10ರಂದು ಬೆಳಗ್ಗೆ 10.30ರಿಂದ 12ರವರೆಗೆ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಮಾ.3ರಿಂದ 8ರವರೆಗೆ ಸಂಜೆ 5 ಗಂಟೆ ಒಳಗೆ ಹೆಸರನ್ನು https://www.krishiksarvodayafoundationmysuru.com ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಈ ಆನ್‌ಲೈನ್ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಶುಲ್ಕ ರಿಯಾಯಿತಿ ಮತ್ತು ಪ್ರತಿಭಾವಂತ ಅಭ್ಯರ್ಥಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ಮಾಹಿತಿಗಾಗಿ ಮುಖ್ಯ ಶೈಕ್ಷಣಿಕ ಸಂಯೋಜಕ ಡಾ.ಜಿ.ಗೋವಿಂದರಾಜು, ಶೈಕ್ಷಣಿಕ ಸಂಯೋಜಕಿ ಎಂ.ವಿ.ಜ್ಯೋತಿ ಅವರನ್ನು ಕಚೇರಿಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದು. (ದೂ.ಸಂ.– 8296031570/ 9945752592 /0821–2301564)

ನಾಳೆ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳು

ಮೈಸೂರು,ಮಾ.3– ಯಾದವಗಿರಿ 3ನೇ ಮುಖ್ಯ ರಸ್ತೆ, (ಆಕಾಶವಾಣಿ ಹಿಂಭಾಗ) ಇಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಾ.5ರಂದು ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. **ವೇಷಭೂಷಣ ಸ್ಪರ್ಧೆ:** (ವಿಷಯ: ಭಾರತೀಯ ಸಂಸ್ಕೃತಿ), **ಆಶುಭಾಷಣ ಸ್ಪರ್ಧೆ:** (ವಿಷಯ: ಜೀವನ ಮೌಲ್ಯಗಳು), **ಗಾಯನ ಸ್ಪರ್ಧೆ:** (ವಿಷಯ: ಭಕ್ತಿಗೀತೆ, ಭಾವಗೀತೆ, ಜಾನಪದಗೀತೆ), **ಆಟೋಟಗಳು:** ಬಿಂದಿ ಹಚ್ಚುವುದು, ಬಕೆಟ್‌ಗೆ ನೀರು ತುಂಬುವುದು, ಮೌಲ್ಯಧಾರಿತ ಹೌಸಿ ಆಟ. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ನೀಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9448368019, 7975785643 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.3.2024 ಸೋಮವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.


■ **ಮಿನಿಸ್ಟ್ರಿ ಆಫ್ ಕಮ್ಯೂನಿಕೇಷನ್ ದಿಪಾರ್ಟ್‌ಮೆಂಟ್ ಆಫ್ ಪೋಸ್ಟಲ್:** ಹಂಸ ಮಹಿಳಾ ಹಾಸ್ಟೆಲ್ ಕಟ್ಟಡ ಲೋಕಾರ್ಪಣೆ, ಉಪಸ್ಥಿತರು: ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಪೋಸ್ಟಲ್ ಟ್ರೈನಿಂಗ್ ಸೆಂಟರ್ ಕ್ಯಾಂಪಸ್, ನಜರ್‌ಬಾದ್, ಬೆಳಗ್ಗೆ 9.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಸಾಮಾಜಿಕ ಬಹಿಷ್ಕಾರ ಮತ್ತು ಅಂತರ್ಗತ ನೀತಿಯ ಅಧ್ಯಯನ ಕೇಂದ್ರ, ಐಸಿಎಸ್‌ಎಸ್‌ಆರ್:** ಕರ್ನಾಟಕದಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಕಾರ್ಯಕ್ಷಮತೆಯ ಮೌಲ್ಯಮಾಪನ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ: ಮೈಸೂರು ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ (ನಿವೃತ್ತ) ಪ್ರೊ.ಎಂ.ಇಂದಿರಾ, ಮುಖ್ಯ ಅತಿಥಿ: ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಅಧ್ಯಕ್ಷತೆ: ಮೈಸೂರು ವಿವಿಯ ಸಿಎಸ್‌ಎಸ್‌ಇಐಪಿಯ ನಿರ್ದೇಶಕ ಡಾ.ಸಿದ್ದರಾಜು, ಸ್ಥಳ: ಮಾನವಶಾಸ್ತ್ರ ವಿಭಾಗದ ಸೆಮಿನಾರ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 11 ಗಂಟೆಗೆ


■ **ಅರಿವು ಸಂಸ್ಥೆ:** 12ನೇ ವಾರ್ಷಿಕೋತ್ಸವ ಅಂಗವಾಗಿ ಅರಿವು ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರಿಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ನವೋ ಯೋಗ ಭವನ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಶ್ರೀ ಅನಿರುದ್ಧಾಚಾರ್ ಪಾಂಡು ರಂಗಿ ಅವರಿಂದ 'ಪದ್ಮ ಪುರಾಣ' ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಜಯಾ ರಾಜಶೇಖರ್, 6.15–ಗೀತಾರಾಧನ 6.35. /6.10–ಅಂಚೆ ಅಂಕನ" ಆಕಾಶವಾಣಿ ಅಂಕಣ, ಪ್ರಾಯೋಜಿತ ಬಾನುಲಿ ಸರಣಿ, 6.40–ಪದಸಂಸ್ಕೃತಿ–ಡಾ.ಶ್ರೀಧರ ಹೆಗಡೆ ಭದ್ರನ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು–ಅಜಯ್ ವಾರಿಯರ್, 9.05–ನೆನಪಿನಂಗಳ ಹಿರಿಯ ನೃತ್ಯ ಕಲಾವಿದೆ ಮೂಗೂರು ಜೇಜಮ್ಮ ಅವರೊಂದಿಗೆ ಉಷಾ ದಾತಾರ್ ನಡೆಸಿದ್ದ ಸಂವಾದ, 10–ಎನ್.ಭಾರತಿ–ವೀಣಾವಾದನ, 12.30–ದೇವರನಾಮ–ಸಿ.ವಿಜಯಲಕ್ಷ್ಮಿ ಶರ್ಮ, ಆರ್.ವೇದವಲ್ಲಿ, 12.45–ನಮ್ಮ ಆರೋಗ್ಯ–ಸ್ಥೂಲಕಾಯದ ಬಗ್ಗೆ ಅರಿವು ಮೂಡಿಸುವ ವಿಶ್ವ ದಿನ ಕುರಿತು ಮಾಹಿತಿ ನೀಡಲಿದ್ದಾರೆ–ಡಾ.ಶಶಿಕಿರನ್ ಕೆ.ಬಿ. ಮತ್ತು ಡಾ.ತೃಪ್ತಿ ಎಸ್., 1.20–ಭಾವಗೀತೆಗಳು–ವೀಣಾ ಶ್ರೀನಿವಾಸ್, 3.–ಕೆ.ವಿ.ಕೃಷ್ಣ ವೀಣಾವಾದನ, 4–ಮಹಿಳಾರಂಗ–ಡಾಕ್ಟರ್ ಸಮಯ. ವಿಷಯ: ಮಹಿಳೆಯರನ್ನು ಕಾಡುವ ಫೈಬ್ರಾಯ್ಡ್ ಹಾಗೂ ಬಿಳಿಸೆರಗು ಸಮಸ್ಯೆಗಳು. ಭಾಗವಹಿಸುವವರು ಡಾ.ಜ್ಯೋತಿ ಉಮೇಶ್, 4.45–ಹಿಂದಿ ಪಾಠ– ಕಿಶೋರ್ ಎಂ.ಕಾಕಡೆ, 6–ಅಂಚೆ–ಅಂಕನ ಆಕಾಶವಾಣಿ ಅಂಕಣ– ಪ್ರಾಯೋಜಿತ ಬಾನುಲಿ ಸರಣಿ, 6.50–ಕೃಷಿರಂಗ "ಹಣ್ಣು ಹೊನ್ನು" ಟೊಮ್ಯಾಟೆ ಬೆಳೆಯ ಸಮಗ್ರ ಕೀಟ ರೋಗ ನಿರ್ವಹಣೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ಡಾ.ಜಿ.ಕೆ.ಸುದರ್ಶನ್ ಹಾಗೂ ಡಾ.ಜಿ.ಪಿ.ಮುತ್ತುರಾಜ್, 9.30–ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ", ಭಾಗವಹಿಸುವವರು–ಅನಾಥ ಮೃತ ಶರೀರಗಳ ಬಂಧು ಮೈಸೂರಿನ ಅಯೂಬ್ ಅಹ್ಮದ್ ಪ್ರಸ್ತುತಿ: ಅಬ್ದುಲ್ ರಶೀದ್, 10.30–ಸವಿನೆನಪು




ಮೈಸೂರಿನ ವಿಜಯನಗರದಲ್ಲಿರುವ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರ ನಿವಾಸಕ್ಕೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಭಾನುವಾರ ಸೌಹಾರ್ದ ಭೇಟಿ ನೀಡಿದ್ದರು. ಇದೇ ವೇಳೆ ಎಸ್.ಎಂ.ಕೃಷ್ಣ ಮತ್ತು ಡಾ.ಎಂ.ಸಿ.ಸುಧಾಕರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಮರಿತಿಬ್ಬೇಗೌಡ ಮತ್ತು ಅವರ ಧರ್ಮಪತ್ನಿ ವಿಜಯಾ ಮರಿತಿಬ್ಬೇಗೌಡ, ಇವರ ಪುತ್ರ ಆರ್ಯನ್‌ಗೌಡ, ಪುತ್ರಿಯರಾದ ವೈಭವ, ಅನನ್ಯ, ಮರಿತಿಬ್ಬೇಗೌಡರ ಅಣ್ಣನ ಮಗ ಉಪನ್ಯಾಸಕ ಮನು, ಮುಖಂಡರಾದ ಕೀಲಾರ ಜಯರಾಮ್, ಪ್ರಭಾಕರ್ ಮತ್ತಿತರರು ಹಾಜರಿದ್ದರು.











ನಕ್ಕರೆ ಅದೇ ಸ್ವರ್ಗ

ಸೊಸೆ : ಅತ್ತೆ ನಾನು ಕಪ್ಪಾಗಿದ್ದೀನ?
ಅತ್ತೆ : ಇಲ್ಲಮ್ಮ
ಸೊಸೆ : ಮತ್ತೆ ನಾನು ದಪ್ಪ ಇದ್ದೀನಾ?
ಅತ್ತೆ : ಇಲ್ವಲ್ಲಮ್ಮ
ಸೊಸೆ : ನನ್ನ ಮೂತಿ ಸೊಟ್ಟಗಿದ್ಯಾ?
ಅತ್ತೆ : ಇಲ್ವಲ್ಲಮ್ಮ
ಸೊಸೆ : ನಾನು ಗಂಯ್ಯಾಳಿ ತರ ಮಾತಾಡ್ತೀನಾ?
ಅತ್ತೆ : ಅಯ್ಯೋ ಇಲ್ಲ ತಾಯಿ, ಯಾರಂದ್ರು ಹಾಗಂತ
ಸೊಸೆ : ಪಕ್ಕದ ಮನೆ ಶಾರದಮ್ಮ ಅಂತಾರೆ
ನೀನು ನಿನ್ನ ಅತ್ತೆ ಥರನೇ ಅಂತ

ಮೈಸೂರು ಮಿತ್ರ

ಸೋಮವಾರ, 4 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........


'ಪಾಠವನ್ನು ಕಲಿಸಿ ಪರೀಕ್ಷೆ ಇಡುವುದು ವಿದ್ಯೆ,
ಪರೀಕ್ಷೆ ಇಟ್ಟು ಪಾಠ ಕಲಿಸುವುದು ಜೀವನ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಪ್ಪಿಗಿಂತ ರುಚಿ ಇಲ್ಲ / ತಾಯಿಗಿಂತ ಬಂಧುವಿಲ್ಲ

ನಿಮ್ಮ ಪತ್ರಗಳು

ಗುಡಿಸಲಿನಲ್ಲಿ ಅರಳಿದ ಗುಲಾಬಿ

ಮಾನ್ಯರೆ,



ಗುಡಿಸಲಿನಲ್ಲಿ ಹುಟ್ಟಿ ಅರಳಿದ ಗುಲಾಬಿಯಂತೆ ನಮ್ಮ ನೆಚ್ಚಿನ ಅಧಿಕಾರಿ, ನಾಯಕ ನಟ ಕೆ.ಶಿವರಾಮ್ ಅವರು ಕಡು ಬಡತನದಲ್ಲಿ ಹುಟ್ಟಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಕಷ್ಟ ಸುಖ, ನೋವು ನಲಿವು, ದುಃಖ ದುಮ್ಮಾನಗಳನ್ನು ಅನುಭವಿಸಿ ಬೆಳೆದಂತಹ ಮಹಾನ್ ಪ್ರತಿಭೆ.

ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ಐಎಎಸ್ ಪರೀಕ್ಷೆಯನ್ನ ಪಾಸ್ ಮಾಡಿದ ಮೊದಲ ಕನ್ನಡಿಗ ಎಂಬ ಕೀರ್ತಿಗೆ ಪಾತ್ರರಾಗಿದ್ದ ಕೆ.ಶಿವರಾಮ್ ಅವರು ಐಎಎಸ್ ಅಧಿಕಾರಿಯಾಗಿ ಆಯ್ಕೆಯಾಗಿ ತಮ್ಮ ಅಧಿಕಾರಾವಧಿಯಲ್ಲಿ ನೊಂದವರ ಪರ ಗಟ್ಟಿ ಧ್ವನಿಯಾಗಿ ಅಪಾರ ಸೇವೆ ಸಲ್ಲಿಸಿ ಜನಮನದಲ್ಲಿ ಶಾಶ್ವತವಾಗಿ ನೆಲೆಸಿರುವ ನಾಯಕ.

ಅಧಿಕಾರಿಯಾಗಿ ಹೋದ ಕಡೆಯಲ್ಲೆಲ್ಲ ತಮ್ಮ ದಕ್ಷ ಆಡಳಿತದ ಮೂಲಕ ಜನಸೇವೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಸೂರಿಲ್ಲದವರಿಗೆ ಸೂರು ಒದಗಿಸುತ್ತಾ, ಅಕ್ಷರ ವಂಚಿತರಾದವರಿಗೆ ಅಕ್ಷರ ಕಲಿಸುತ್ತಾ, ಭೂ ರಹಿತರಿಗೆ ಭೂಮಿ ಒದಗಿಸುತ್ತಾ ಹೀಗೆ ಒಬ್ಬ ಅಧಿಕಾರಿಯಾಗಿ ಮಂತ್ರಿ ಮಹೋದಯರುಗಳು ಮಾಡಲಾಗದಷ್ಟು ಕೆಲಸವನ್ನು ತಮ್ಮ ಅಧಿಕಾರಾವಧಿಯಲ್ಲಿ ಮಾಡುವ ಮೂಲಕ ದೇಶಕ್ಕೆ ಮಾದರಿ ಅಧಿಕಾರಿಯಾಗಿ ಹೊರ ಹೊಮ್ಮಿದ್ದರು.

ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾಗಿದ್ದ ವೇಳೆಯಲ್ಲಿ ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿದ್ದರು. ಅದಕ್ಕೆ ನಿದರ್ಶನವೆಂಬಂತೆ ದಲಿತ ಸಮುದಾಯದ ವಿದ್ಯಾರ್ಥಿಗಳು ಇರುವ ಹಾಸ್ಟೆಲ್‌ಗಳಿಗೆ ಭೇಟಿ ಕೊಟ್ಟು ಅವರ ಸಮಸ್ಯೆಗಳನ್ನು ಖುದ್ದು ಆಲಿಸಿ, ವಿದ್ಯಾರ್ಥಿಗಳಿಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದು ಇತಿಹಾಸ. ಹಾಗೆಯೇ ವಸತಿ ರಹಿತರಿಗೆ ವಸತಿಗಳನ್ನು ಒದಗಿಸಿದ್ದು, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಸಾಕಷ್ಟು ಆಟೋಗಳನ್ನು ಕೊಡಿಸಿ ಅವರೆಲ್ಲ ಸ್ವಯಂ ಉದ್ಯೋಗಿಗಳಾಗಲು ಕಾರಣೀಭೂತರಾಗಿದ್ದರು. ನಂತರದ ದಿನಗಳಲ್ಲಿ ದಾವಣಗೆರೆಗೆ ಜಿಲ್ಲಾಧಿಕಾರಿಯಾಗಿ ಹೋದಾಗಲಂತೂ ಬೀದಿಬೀದಿ ಸುತ್ತಿ ಜನರ ಸಮಸ್ಯೆಗಳನ್ನು ಆಲಿಸಿ ಮತ್ತಷ್ಟು ನೊಂದವರ ಪರ ಕೆಲಸ ಕಾರ್ಯಗಳನ್ನ ಮಾಡಿ ರಿಯಲ್ ಹೀರೋ ಆಗಿ ಜನರೆದೆಯಲ್ಲಿ ಶಾಶ್ವತವಾಗಿ ಉಳಿದು ಬಿಟ್ಟಿದ್ದರು. ದೀನ ದಲಿತರು, ಬಡವರು, ವಿದ್ಯಾರ್ಥಿಗಳು ಹೀಗೆ ಸಾಕಷ್ಟು ನೊಂದವರ ಪರ ಗಟ್ಟಿ ಧ್ವನಿಯಾಗಿ ಗುರುತಿಸಿಕೊಂಡಿದ್ದ ಕೆ.ಶಿವರಾಮ್ ಅವರು ಸ್ವತಃ ತಾವೇ ಕೆಲವು ಸಂದರ್ಶನಗಳಲ್ಲಿ ನಾನು ಗುಡಿಸಲಿನಿಂದ ಬಂದಿದ್ದಕ್ಕೆ, ಗುಡಿಸಲಿನವರಿಗೆ ಕೆಲಸ ಮಾಡಲು ಸಾಧ್ಯವಾಗಿದ್ದು ಎಂದು ಹೆಮ್ಮೆಯಿಂದ ಹೇಳಿಕೊಂಡಿರುವುದನ್ನ ನಾವೆಲ್ಲ ಕಾಣಬಹುದು.

ಸಮಾಜಕಲ್ಯಾಣ ಇಲಾಖೆಯ ಆಯುಕ್ತರಾದಾಗಲಂತೂ ಸಾಕಷ್ಟು ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೆ ತಂದು ಆ ಮೂಲಕ ದಲಿತ ವಿದ್ಯಾರ್ಥಿಗಳ ಪಾಲಿಗೆ ದಾರಿದೀಪವಾಗಿದ್ದರು. ನರ್ಸಿಂಗ್ ತರಬೇತಿ, ಪ್ಯಾರಾ ಮೆಡಿಕಲ್ ತರಬೇತಿ, ಗಗನಸಖಿಯರ ತರಬೇತಿ ಹಾಗೂ ಪೈಲಟ್‌ಗಳಾಗಲು ಪೈಲಟ್ ತರಬೇತಿ ಹೀಗೆ ಯಾವ ಕ್ಷೇತ್ರ ದಲಿತ ವಿದ್ಯಾರ್ಥಿಗಳ ಪಾಲಿಗೆ ಗಗನಕುಸುಮವಾಗಿತ್ತೋ ಅಂತಹ ಕ್ಷೇತ್ರದಲ್ಲಿ ದಲಿತ ವಿದ್ಯಾರ್ಥಿಗಳು ಸ್ವಾಭಿಮಾನದಿಂದ ಹಾಗೂ ಹೆಮ್ಮೆಯಿಂದ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಕೀರ್ತಿಗೆ ಕೆ.ಶಿವರಾಮ್ ಅವರು ಭಾಜನರಾಗಿದ್ದರು.

ಬಾ ನಲ್ಲೆ ಮಧು ಚಂದ್ರಕೆ ಸಿನಿಮಾದ ಮೂಲಕ ಬೆಳ್ಳಿ ತೆರೆಗೂ ಪಾದಾರ್ಪಣೆ ಮಾಡಿ ಯಶಸ್ವಿಯಾಗಿದ್ದ ಕೆ.ಶಿವರಾಮ್ ಅವರು ತಮ್ಮ ಅಧಿಕಾರವಧಿಯಲ್ಲಿ ಮಾಡಿದ್ದ ಜನಪರ ಕೆಲಸಗಳ ಮೂಲಕ ನಿಜ ಜೀವನದಲ್ಲೂ ರಿಯಲ್ ಹೀರೋ ಆಗಿಯೇ ಉಳಿದು ಬಿಟ್ಟಿದ್ದರು. ಆದರೆ ರಾಜಕೀಯರಂಗ ಪ್ರವೇಶಿಸಿ ಮತ್ತಷ್ಟು ಜನರಪರ ಕೆಲಸ ಮಾಡಬೇಕೆಂಬುದು ಅವರ ಮಹದಾಸೆಯಾಗಿತ್ತು. ಅದು ಹಾಗೆ ಉಳಿದು ಹೋದದ್ದು ನಿಜಕ್ಕೂ ಸಮಾಜಕ್ಕಾದ ದೊಡ್ಡ ನಷ್ಟವೇ ಸರಿ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾಲೂಕು.

ಒಡ್ಗಲ್ ರಂಗನಾಥಸ್ವಾಮಿ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಿ

ಮಾನ್ಯರೆ,

ಶ್ರೀ ಒಡ್ಗಲ್ ರಂಗನಾಥಸ್ವಾಮಿ ಬೆಟ್ಟವು ಭೌಗೋಳಿಕವಾಗಿ ಮಳವಳ್ಳಿ ಮತ್ತು ಟಿ.ನರಸೀಪುರ ತಾಲೂಕುಗಳ ಭಾಗವಾಗಿದೆ. ಇಲ್ಲಿನ ಕೆಲವೆಡೆ ಗುತ್ತಿಗೆದಾರರು ತಮ್ಮ ವ್ಯಾಪ್ತಿಗೂ ಮೀರಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿದೆ. ಬೆಟ್ಟದ ಇತರೆ ಭಾಗಕ್ಕೂ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಸಾಕಷ್ಟು ಬಾರಿ ಸಂಬಂಧಪಟ್ಟ ಇಲಾಖೆಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಅಕ್ರಮ ಕಲ್ಲು ಗಣಿಗಾರಿಕೆ ತಡೆಗಟ್ಟಿ, ಸರ್ಕಾರ ಮತ್ತು ನೈಸರ್ಗಿಕ ಸಂಪತ್ತನ್ನು ರಕ್ಷಿಸಬೇಕಿದ್ದ ಸಂಬಂಧಪಟ್ಟ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸದೇ ಕಣ್ಣುಮುಚ್ಚಿ ಕುಳಿತಂತಿದೆ. ಗುತ್ತಿಗೆದಾರರು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಅಡಿಯಲ್ಲಿ ಪಾಲಿಸಬೇಕಾದ ಯಾವುದೇ ನಿಯಮಗಳನ್ನು ಅನುಸರಿಸದೆ ಕಾಯ್ದೆಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆ.

ತಮ್ಮ ಮನಸ್ಸೋಇಚ್ಛೆ ನೈಸರ್ಗಿಕ ಸಂಪತ್ತನ್ನು ದೋಚುತ್ತಿದ್ದು ಸರ್ಕಾರದ ಬೊಕ್ಕಸಕ್ಕು ನಷ್ಟ ಉಂಟುಮಾಡುತ್ತಿದ್ದಾರೆ. ಒಡ್ಗಲ್ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನ ಸುತ್ತಮುತ್ತ ಅಕ್ರಮ ಗಣಿಗಾರಿಕೆ ಮತ್ತು ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಯಿಂದಾಗಿ ಜಮೀನುಗಳಲ್ಲಿ ವಿಪರೀತ ಧೂಳು ತುಂಬುತ್ತಿದ್ದು ಯಾವ ಬೆಳೆಯನ್ನು ಬೆಳೆಯಲು ಸಾಧ್ಯವಾಗದೇ ರೈತರು ಕಂಗಾಲಾಗಿದ್ದಾರೆ. ಕ್ರಷರ್ ಇರುವ ಸ್ಥಳದಿಂದ ಧೂಳು ಹೊರಕ್ಕೆ ಹೋಗದಂತೆ ತಡೆಗಟ್ಟಲು ಯಾವುದೇ ನಿಯ ಮಾವಳಿ ಪಾಲಿಸದೇ ಇರುವುದರಿಂದ ಧೂಳೂ ಇಲ್ಲಿರುವ ಗ್ರಾಮಗಳಿಗೂ ಆವರಿಸುತ್ತಿದ್ದು ಇಲ್ಲಿನ ಪರಿಸರ ಮತ್ತು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಒಟ್ಟಾರೆ, ಕ್ರಷರ್ ಘಟಕದ ಸುತ್ತಮುತ್ತಲಿನ ಜಮೀನುಗಳಿಗೆ ಹಾಗೂ ಗ್ರಾಮಸ್ಥರಿಗೆ ತುಂಬ ತೊಂದರೆಯಾಗುತ್ತಿದ್ದು ಇನ್ನಾದರೂ ಗಣಿ ಮತ್ತು ಭೂ ವಿಜ್ಞಾನ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಅಕ್ರಮ ಮತ್ತು ಅವೈಜ್ಞಾನಿಕ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಲಿ.

–ಡಾ. ದಿಲೀಪ್ ನರಸಯ್ಯ ಎಂ, ಮೇಟಗಳ್ಳಿ ಅಂಚೆ ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ನಿದ್ರೆಯಂತೆ ಭ್ರಮೆಯಿಂದಲೂ ಎಚ್ಚರಗೊಳ್ಳುತ್ತಿರಬೇಕು!

ಮನುಷ್ಯನನ್ನು ವಾಸ್ತವದ ಸಂಗತಿಗಳಿಗಿಂತ ಹೆಚ್ಚಾಗಿ ಭ್ರಮೆಯಲ್ಲಿನ ಸಂಗತಿಗಳು ಹೆಚ್ಚಾಗಿ ಕಾಡುತ್ತವೆ. ಹೆಚ್ಚು ಆನಂದ ಪಡುವುದು ಹಾಗೂ ಆತಂಕ ಪಡುವುದು ಭ್ರಮೆಯಿಂದಲೇ ಎನ್ನಬಹುದು. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಅತಿಯಾದ ನಿದ್ರೆ ಮಾರಕವಾಗುವಂತೆ ಅತಿಯಾದ ಭ್ರಮೆ ನೈಜ ಬದುಕಿಗೆ ಮಾರಕವಾಗುತ್ತದೆ. ನಿದ್ರೆಯಿಂದ ನಿತ್ಯ ಎಚ್ಚರಗೊಳ್ಳುವಂತೆ ಮನುಷ್ಯ ಭ್ರಮೆಯಿಂದಲೂ ಎಚ್ಚರಗೊಳ್ಳುವ ಅಗತ್ಯವಿದೆ. ಇಲ್ಲವಾದಲ್ಲಿ ಅನೇಕ ಅನಾಹುತಗಳಿಗೆ ಕಾರಣವಾಗಬಹುದು. ವಾಸ್ತವದ ಸಂಗತಿಗಳಿಂದ ಆಗುವ ನೋವು ಏನೇನೂ ಅಲ್ಲ, ಆದರೆ ಭ್ರಮನಿರಸನದಿಂದ ಆಗುವ ನೋವು ಅಷ್ಟಿಷ್ಟಲ್ಲ. ಮನುಷ್ಯನ ಕಲ್ಪನಾ ಶಕ್ತಿ ಅಪಾರವಾದುದು. ಆದರೆ ವಾಸ್ತವದ ಅಡಿಪಾಯದ ಮೇಳೆ ಕಲ್ಪನಾವಿಲಾಸ ನಿರ್ಮಾಣವಾಗಬೇಕು. ಎಷ್ಟೋ ಜನ ವಾಸ್ತವದ ತಳಪಾಯವಿಲ್ಲದೆ ಕಲ್ಪನಾವಿಲಾಸ ನಿರ್ಮಾಣ ಮಾಡುತ್ತಾರೆ. ಅದು ಕೆಲವೇ ಸಮಯದಲ್ಲಿ ಕುಸಿದು ಬೀಳುತ್ತದೆ. ಇದನ್ನು ಅನುಭವಿಸಿದವರು ಸಹ ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಆದ್ದರಿಂದ ಭ್ರಮಾವಲಯದಿಂದ ಹೊರಗೆ ಬಂದು ವಾಸ್ತವ ವಲಯದಲ್ಲಿ ವಿಹರಿಸುವುದು ಆರೋಗ್ಯಕರ ಅಭ್ಯಾಸ.

ನಿದ್ರೆ ಮಾಡುವವರನ್ನು ಸುಲಭವಾಗಿ ಎಚ್ಚರಿಸಬಹುದು, ಆದರೆ ಭ್ರಮೆಯಲ್ಲಿರುವವರನ್ನು ಎಚ್ಚರಿಸುವ ಕೆಲಸ ತುಂಬಾ ಕಠಿಣವಾದುದು. ಯಾವ ವಿಚಾರದಲ್ಲಿ ಭ್ರಮೆಗಳಿರುತ್ತವೆ ಎಂದರೆ ಪ್ರೇಮಿಗಳು ಪರಸ್ಪರ ಪ್ರೀತಿಸುತ್ತಾರೆ ಎಂಬ ಭ್ರಮೆ, ಹೆತ್ತವರು ತಮ್ಮ ಮಕ್ಕಳು ಇಳಿ ವಯಸ್ಸಿನಲ್ಲಿ ನಮ್ಮನ್ನು ನೋಡಿಕೊಳ್ಳುತ್ತಾರೆ ಎಂಬ ಭ್ರಮೆ, ವೈರಿಗಳ ನಡುವೆ ಇರುವ ದ್ವೇಷದ ಭ್ರಮೆ, ಸೆಲೆಬ್ರಿಟಿಗಳಿಗೆ, ರಾಜಕಾರಣಿಗಳಿಗೆ ಅಭಿಮಾನಿಗಳ ಭ್ರಮೆ, ರೋಗಿಗೆ, ವೃದ್ಧರಿಗೆ ಅನುಕಂಪದ ಭ್ರಮೆ, ಹೋರಾಟ ಮಾಡುವವನಿಗೆ ಆವೇಶದ ಭ್ರಮೆ..... ಹೀಗೆ ಅನ್ಯರು ನಮ್ಮ ಕುರಿತು ಹೀಗೆ ಭಾವಿಸಿರಬಹುದು ಎಂಬ ಭ್ರಮೆ ಇರುತ್ತದೆ. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳಲಾಗದು. ಆದರೆ ಬಹುಪಾಲು ಮೇಲ್ಕಂಡ ವಿಷಯಗಳಲ್ಲಿ ಭ್ರಮೆ ಮನುಷ್ಯನಿಗೆ ಒಂದು ರೀತಿಯ ಅಮಲು ಸ್ಥಿತಿ ನಿರ್ಮಾಣ ಮಾಡುತ್ತದೆ. ಆ ಅಮಲು ಸ್ಥಿತಿಯಲ್ಲಿರುವವರು ಏನು ಬೇಕಾದರೂ ಮಾಡಲು ಸಿದ್ಧರಾಗಿರುತ್ತಾರೆ. ಪ್ರೇಮಿಗಳು ಯಾವುದೇ ತ್ಯಾಗಕ್ಕೂ ಸಿದ್ಧನಾಗಿರುತ್ತಾರೆ, ರಾಜಕಾರಣಿಗಳು ಅಭಿಮಾನದ ಭ್ರಮೆಯಲ್ಲಿ ಎಷ್ಟಾದರೂ ಹಣ ಖರ್ಚು ಮಾಡಲು ಸಿದ್ಧರಿರುತ್ತಾರೆ, ವೈರಿಗಳು ದ್ವೇಷದ ಭ್ರಮೆಯಲ್ಲಿ ಯಾವುದೇ ದುಷ್ಕೃತ್ಯಕ್ಕೂ ಸಿದ್ಧರಿರುತ್ತಾರೆ. ಹೀಗೆ ಭ್ರಮಾಲೋಕ ವಾಸ್ತವ ಲೋಕದಲ್ಲಿ ಅಸಹಜವಾದುದನ್ನು ಮಾಡಿಸಿಬಿಡುತ್ತದೆ.

ಸುಂದರ್ ಎಂಬುವವರು ಸನ್ಯಾಸಿಯೊಬ್ಬರ ಬಳಿ ಲೋಕಾಭಿರಾಮವಾಗಿ ಮಾತನಾಡುತ್ತಾ, ತಮ್ಮ ಕುಟುಂಬದ ಸದಸ್ಯರು ತಮ್ಮ ಮೇಲೆ ಅತಿಯಾದ ಪ್ರೀತಿ ಹೊಂದಿದ್ದಾರೆ, ನಾನು ಎಂದರೆ ಪ್ರಾಣ ಬಿಡುತ್ತಾರೆ ಎಂದು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಆಗ ಸನ್ಯಾಸಿಗಳು ಹೇಳುತ್ತಾರೆ, 'ಸುಂದರ್ ನೀವು ವಾಸ್ತವದ ನೆಲೆಗಟ್ಟಿನಲ್ಲಿ ಚಿಂತಿಸಬೇಕು. ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಮೇಲೆ ಅವಲಂಬಿತರಾದ ಕಾರಣ ಒಂದು ಪೊಳ್ಳು ಪ್ರೀತಿ ತೋರುತ್ತಿರುತ್ತಾರೆ. ನೀವು ಅದನ್ನು ನಂಬಿ ಭ್ರಮೆಪಡುತ್ತಾ ಇದೀರಿ ಎನ್ನುತ್ತಾರೆ. ಆ ಮಾತನ್ನು ಸುಂದರ್ ಒಪ್ಪುವುದಿಲ್ಲ. ಆಗ ಸನ್ಯಾಸಿಗಳೂ ಮುಂದುವರಿದು 'ಸುಂದರ್ ಒಂದು ಪರೀಕ್ಷೆ ಏರ್ಪಡಿಸೋಣ, ನೀವು ಸತ್ತ ಹಾಗೆ ನಟಿಸಿ, ನಾನು ಎದ್ದೇಳಿ ಎನ್ನುವವರೆವಿಗೂ ಏಳಬೇಡಿ, ನಂತರ ನೋಡಿ ನಿಮ್ಮ ಕುಟುಂಬ ಸದಸ್ಯರ ಮುಖವಾಡ ಹೇಗೆ ಕಳಚುತ್ತದೆ' ಎಂದು ಎನ್ನುತ್ತಾರೆ.

ಒಂದು ದಿನ ಬೆಳಗ್ಗೆ ಸುಂದರ್ ರಾತ್ರಿ ಮಲಗಿದ್ದವರು ಬೆಳಗ್ಗೆ ಏಳುವುದಿಲ್ಲ, ಸತ್ತಂತೆ ನಟಿಸುತ್ತಾರೆ. ಆಗ ಅವರ ಕುಟುಂಬದವರು ತುಂಬಾ ರೋದಿಸುತ್ತಾರೆ. ಬಂಧುಬಳಗದ ಜನ ಅಂತಿಮ ದರ್ಶನಕ್ಕೆ ಬರುತ್ತಾರೆ. ಸುಂದರ್ ತಾಯಿ 'ಭಗವಂತ ನನ್ನ ಮಗನಿಗೆ ಆಯುಷ್ಯವನ್ನು ಕೊಟ್ಟು, ನನ್ನನ್ನು ಕರೆದುಕೊಳ್ಳಬಾರದೇ?' ಎಂದು ಗೋಳಾಡುತ್ತಿರುತ್ತಾರೆ. ಈ ಸುದ್ದಿ ಸನ್ಯಾಸಿಗಳಿಗೆ ಮುಟ್ಟುತ್ತದೆ. ಅವರು ಸಹ ಅಂತಿಮ ದರ್ಶನಕ್ಕೆ ಸುಂದರ್ ಮನೆಗೆ ಬರುತ್ತಾರೆ. ಸನ್ಯಾಸಿಗಳನ್ನು ಕಂಡಾಕ್ಷಣ ಮನೆಯ ಸದಸ್ಯರ ರೋದನೆ ಇಮ್ಮಡಿಗೊಳ್ಳುತ್ತದೆ. ಎಲ್ಲರೂ ಹೇಗಾದರೂ ಮಾಡಿ ಬದುಕಿಸಿಕೊಡಿ ಎಂದು ಅಂಗಲಾಚುತ್ತಾರೆ. ಆಗ ಸನ್ಯಾಸಿಗಳು ತಮ್ಮ ಜೋಳಿಗೆಯಿಂದ ಒಂದು ಮೂಲಿಕೆಯನ್ನು ತೆಗೆದು, 'ನೋಡಿ ನನ್ನಲ್ಲಿ ಒಂದು ವಿಶೇಷವಾದ ಮೂಲಿಕೆ ಇದೆ, ಇದನ್ನು ನೀರಿನಲ್ಲಿ ಹಾಕಿ ಯಾರು ಸೇವಿಸುತ್ತಾರೋ, ಅವರು ಒಂದು ಗಂಟೆಯೊಳಗೆ ಸಾಯುತ್ತಾರೆ, ಆಗ ಸುಂದರ್ ಬದುಕಿ ಬರುತ್ತಾರೆ. ಯಾರು ಸಿದ್ಧರಿದ್ದೀರಿ ಮುಂದೆ ಬನ್ನಿ ಎನ್ನುತ್ತಾರೆ. ಆಗ ಯಾರೊಬ್ಬರೂ ಮುಂದೆ

ಪ್ರೇಮಿಗಳು ಪರಸ್ಪರ ಪ್ರೀತಿಸುತ್ತಾರೆ ಎಂಬ ಭ್ರಮೆ, ಹೆತ್ತವರು ತಮ್ಮ ಮಕ್ಕಳು ಇಳಿವಯಸ್ಸಿನಲ್ಲಿ ನಮ್ಮನ್ನು ನೋಡಿಕೊಳ್ಳುತ್ತಾರೆ ಎಂಬ ಭ್ರಮೆ, ವೈರಿಗಳ ನಡುವೆ ಇರುವ ದ್ವೇಷದ ಭ್ರಮೆ, ಸೆಲೆಬ್ರಿಟಿಗಳಿಗೆ, ರಾಜಕಾರಣಿಗಳಿಗೆ ಅಭಿಮಾನಿಗಳ ಭ್ರಮೆ, ರೋಗಿಗೆ, ವೃದ್ಧರಿಗೆ ಅನುಕಂಪದ ಭ್ರಮೆ, ಹೋರಾಟ ಮಾಡುವವನಿಗೆ ಆವೇಶದ ಭ್ರಮೆ..... ಹೀಗೆ ಅನ್ಯರು ನಮ್ಮ ಕುರಿತು ಹೀಗೆ ಭಾವಿಸಿರಬಹುದು ಎಂಬ ಭ್ರಮೆ ಇರುತ್ತದೆ. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳಲಾಗದು. ಆದರೆ ಬಹುಪಾಲು ಮೇಲ್ಕಂಡ ವಿಷಯಗಳಲ್ಲಿ ಭ್ರಮೆ ಮನುಷ್ಯನಿಗೆ ಒಂದು ರೀತಿಯ ಅಮಲು ಸ್ಥಿತಿ ನಿರ್ಮಾಣ ಮಾಡುತ್ತದೆ. ಆ ಅಮಲು ಸ್ಥಿತಿಯಲ್ಲಿರುವವರು ಏನು ಬೇಕಾದರೂ ಮಾಡಲು ಸಿದ್ಧರಾಗಿರುತ್ತಾರೆ. ಪ್ರೇಮಿಗಳು ಯಾವುದೇ ತ್ಯಾಗಕ್ಕೂ ಸಿದ್ಧನಾಗಿರುತ್ತಾರೆ, ರಾಜಕಾರಣಿಗಳು ಅಭಿಮಾನದ ಭ್ರಮೆಯಲ್ಲಿ ಎಷ್ಟಾದರೂ ಹಣ ಖರ್ಚು ಮಾಡಲು ಸಿದ್ಧರಿರುತ್ತಾರೆ, ವೈರಿಗಳು ದ್ವೇಷದ ಭ್ರಮೆಯಲ್ಲಿ ಯಾವುದೇ ದುಷ್ಕೃತ್ಯಕ್ಕೂ ಸಿದ್ಧರಿರುತ್ತಾರೆ. ಹೀಗೆ ಭ್ರಮಾಲೋಕ ವಾಸ್ತವ ಲೋಕದಲ್ಲಿ ಅಸಹಜವಾದುದನ್ನು ಮಾಡಿಸಿಬಿಡುತ್ತದೆ.



ಬರುವುದಿಲ್ಲ. ಸುಂದರ್ ಪತ್ನಿ 'ಇದನ್ನು ನನ್ನ ಅತ್ತೆಗೆ ಕೊಡಿ, ಅವರಿಗೆ ವಯಸ್ಸಾಗಿದೆ ಎನ್ನುತ್ತಾಳೆ, ಸುಂದರ್ ತಾಯಿ 'ಇಲ್ಲ ಇದನ್ನು ನನ್ನ ಸೊಸೆಗೆ ಕೊಡಿ, ನಾನು ನನ್ನ ಮೊಮ್ಮಗನ ಮದುವೆ ನೋಡಬೇಕು' ಎನ್ನುತ್ತಾಳೆ. ಕೊನೆಗೆ ಯಾರು ಮುಂದೆ ಬರದ ಕಾರಣ ಶವಸಂಸ್ಕಾರ ಮಾಡುವುದು ಎಂದು ತೀರ್ಮಾನವಾಗುತ್ತದೆ.

ಸುಂದರ್ ಮಂಚದ ಮೇಲೆ ಅಸುನೀಗಿದ್ದರಿಂದ ಅವರ ಶವದ ಕೈಕಾಲುಗಳನ್ನು ಮಡಚಿ ಮನೆಯಿಂದ ಹೊರಗೆ ತೆಗೆಯಲಾಗದು, ಆದ್ದರಿಂದ ಬಾಗಿಲು ಒಡೆಯಿಸಿ ಮಂಚ ಸಹಿತ ಶವವನ್ನು ಹೊರಗೆ ಸಾಗಿಸುವುದು ಎಂದು ಸನ್ಯಾಸಿಗಳು ಹೇಳುತ್ತಾರೆ. ಆಗ ಸುಂದರ್ ತಾಯಿ, 'ಮಂಚವನ್ನು ನಮ್ಮ ಯಜಮಾನರು ಮಾಡಿಸಿಕೊಟ್ಟಿರುವುದು, ಹೇಗಾದರೂ ಮಾಡಿ ಶವದ ಕೈಕಾಲನ್ನು ಮಡಚಿ ಶವ ಸಾಗಿಸಿ ಮಂಚ ಮಾತ್ರ ಮನೆಯಿಂದ ಹೊರಗೆ ತೆಗೆಯುವುದು ಬೇಡ' ಎನ್ನುತ್ತಾಳೆ. ಸುಂದರ್ ಮಡದಿ 'ಅಯ್ಯೋ ಬಾಗಿಲ ಚೌಕಟ್ಟನ್ನು ಮಾತ್ರ ಒಡೆಯಿಸಬೇಡಿ, ಅದನ್ನು ಮುಂದೆ ಸರಿಪಡಿಸುವವರು ಯಾರು, ಶವಕ್ಕೆ ಏನು ಬೇಕಾದರೂ ಮಾಡಿ, ಆದರೆ ಮನೆಯ ಬಾಗಿಲಿಗೆ ಧಕ್ಕೆ ತರಬೇಡಿ' ಎನ್ನುತ್ತಾಳೆ. ಈ ಮಾತನ್ನು ಕೇಳಿದ ಸನ್ಯಾಸಿಗಳು ನಗುತ್ತಾರೆ. ಅಷ್ಟೊತ್ತಿಗೆ ಶವದಂತೆ ನಟಿಸುತ್ತಿದ್ದ ಸುಂದರ್ ಸಹನೆ ಮೀರಿರುತ್ತದೆ. ದಿಢೀರ್ ಎಂದು ಎದ್ದವರೆ, ತಮ್ಮ ಕುಟುಂಬದವರ ಸ್ವಾರ್ಥ ಮನೋಭಾವದ ಕುರಿತು ಮನನೊಂದು ಅವರನ್ನು ನಿಂದಿಸುತ್ತಾರೆ. ನಂತರ 'ಸ್ವಾಮೀಜಿ, ಇದು ಸ್ವಾರ್ಥ ಪ್ರಪಂಚ, ನಾನು ಇಷ್ಟು ದಿನ ಇವರ ಮಾತುಗಳನ್ನು ಕೇಳಿ ಭ್ರಮಾಲೋಕದಲ್ಲಿ ತೇಲುತ್ತಿದ್ದೆ, ನೀವು ವಾಸ್ತವ ಪ್ರಪಂಚದ ಅರಿವನ್ನು ಮೂಡಿಸಿದಿರಿ. ಸ್ವಾರ್ಥಕ್ಕಾಗಿ ನಯವಾದ ಮಾತುಗಳನ್ನು ಆಡುತ್ತಿದ್ದ ಇವರುಗಳ ಮುಖವಾಡ ಇಂದು ಕಳಚಿಬಿತ್ತು. ನಡೀರಿ, ನನಗೆ ಸಂಸಾರ ಸುಖವೇ ಬೇಡ, ನಾನು ಕೂಡ ನಿಮ್ಮೊಟ್ಟಿಗೆ ಮಠದಲ್ಲಿಯೇ ಇರುತ್ತೇನೆ' ಎಂದು ಹೇಳಿ ಹೊರಡುತ್ತಾನೆ.

ಈ ದೃಷ್ಟಾಂತ ಅನೇಕ ರೀತಿ ನೀತಿಪಾಠವನ್ನು ತಿಳಿಸುತ್ತದೆ. ಎಲ್ಲಾ ಕುಟುಂಬಗಳಲ್ಲೂ ಹೀಗೆ ಇರುತ್ತಾರೆ ಎಂದು ಹೇಳುತ್ತಿಲ್ಲ. ಅನೇಕರು ತಮ್ಮ ಹೆತ್ತವರಿಗೆ, ರಕ್ತ ಹಂಚಿಕೊಂಡು ಹುಟ್ಟಿದವರಿಗಾಗಿ ತಮ್ಮ ಅಂಗಾಂಗಗಳನ್ನೇ ಹಂಚಿಕೊಂಡಿದ್ದಾರೆ, ಅನೇಕ ರೀತಿಯ ನೆರವು ನೀಡಿದ್ದಾರೆ. ಆದರೆ ಬಹುಪಾಲು ಜನ ಮುಖವಾಡ ಧರಿಸಿ ನಟಿಸಿ ನಂಬಿಸುತ್ತಾರೆ, ಭ್ರಮೆ ಮೂಡಿಸುತ್ತಾರೆ. ಸಮಯ ಬಂದಾಗ ಮುಖವಾಡ ಕಳಚುತ್ತಾರೆ ಅಷ್ಟೆ.

ಅನ್ಯರಿಗೆ ಭ್ರಮೆ ಹುಟ್ಟಿಸುವುದು ಕೆಲವರಿಗೆ ಖಯಾಲಿ ಆಗಿರುತ್ತದೆ. ಹಿಂದೆ ರಾಜರುಗಳಿಗೆ ಇದ್ದಂತೆ ಇಂದು ರಾಜಕಾರಣಿಗಳು, ಸಿನಿಮಾ ನಾಯಕ/ನಾಯಕಿಯರ ಸುತ್ತ ಹೊಗಳುಭಟರು, ಅಭಿಮಾನಿಗಳು ಅವರನ್ನು ಪೊಳ್ಳು ಮಾತುಗಳಿಂದಲೇ ಉಬ್ಬಿಸುತ್ತಾರೆ. ಆಧಾರರಹಿತ ಲೆಕ್ಕಾಚಾರಗಳನ್ನು ಕೊಟ್ಟು ಅನ್ಯರನ್ನು ಬೆರಗುಗೊಳಿಸುತ್ತಾರೆ. ಕೆಲ ಸಮಯ ಭ್ರಮೆಯಲ್ಲಿ ತೇಲುವಂತೆ ಮಾಡಿಬಿಡುತ್ತಾರೆ. ಇದಕ್ಕೆ ಚುನಾವಣೆ ಒಳ್ಳೆಯ ಉದಾಹರಣೆ. ಅಭ್ಯರ್ಥಿ ಪರ ಎಷ್ಟು ಮತ ಆಗಬಹುದು ಎಂದು ಅಂದಾಜು ಇದ್ದರೂ, ಪರಾಜಿತರಾಗುತ್ತಾರೆ ಎಂದು ತಿಳಿದಿದ್ದರೂ, ಅವುಗಳನ್ನು ಮುಚ್ಚಿಟ್ಟು ಅಭ್ಯರ್ಥಿಗೆ ಇಲ್ಲಸಲ್ಲದ ಅಂಕಿ–ಅಂಶಗಳನ್ನು ನೀಡಿ, ಗೆದ್ದೇ ಗೆಲ್ಲುತ್ತೀರಿ ಎಂದು ಹುಬ್ಬಿಸಿ ಹಗಲುಗನಸು ಕಾಣುವಂತೆ ಮಾಡಿಬಿಡುತ್ತಾರೆ ಹಿಂಬಾಲಕರು. ಚುನಾವಣೆ ಫಲಿತಾಂಶ ಬಂದಾಗ ಎಷ್ಟೋ ಅಭ್ಯರ್ಥಿಗಳು ಠೇವಣಿ ಸಹ ಕಳೆದುಕೊಂಡಿರುತ್ತಾರೆ. ಚುನಾವಣೆ ಪೂರ್ವದಲ್ಲಿ ಇದ್ದ ಹಿಂಬಾಲಕರು, ಅಭಿಮಾನಿಗಳು ಅವರನ್ನು ತೊರೆಯುತ್ತಾರೆ. ಚುನಾವಣೆ ವೆಚ್ಚಕ್ಕೆ ಸಾಲ ಮಾಡಿದ ಅಭ್ಯರ್ಥಿ ತನ್ನ ಇಡೀ ಜೀವಮಾನ ಸಾಲ ತೀರಿಸುವುದರಲ್ಲೇ ಮುಗಿಯುತ್ತದೆ. ಭ್ರಮೆ ಅವರ ಬದುಕನ್ನು ಹೈರಾಣ ಮಾಡಿರುತ್ತದೆ.

ಪ್ರೀತಿ–ಪ್ರೇಮದ ವಿಚಾರದಲ್ಲಿ ಭ್ರಮೆಯಿಂದಲೇ ಮೋಸಹೋಗುವವರು ಅನೇಕ. ಸಹ. ವಾಸ್ತವದ ಸಂಗತಿ ಒಂದು ರೀತಿಯ ಕಹಿ ಔಷಧಿ ರೀತಿ ಇರುತ್ತದೆ. ಅದ ಬಿಟ್ಟು ಭ್ರಮೆಯೆಂಬ ಸಿಹಿಯಾದ ನಶೆ ಏರಿಸುವ ಪಾನೀಯ ಕುಡಿದು ಮತ್ತಿನಲ್ಲಿ ತೇಲುತ್ತಾರೆ. ಕೆಲವೇ ದಿನಗಳಲ್ಲಿ ಮತ್ತು ಇಳಿದ ಮೇಲೆ ವಾಸ್ತವ ಲೋಕವನ್ನು ಜೀರ್ಣಿಸಿಕೊಳ್ಳಲಾಗದೇ ಬೇಸರದಿಂದ ಬದುಕುತ್ತಿರುತ್ತಾರೆ. ಮನುಷ್ಯ ತನ್ನ ಸ್ವಾರ್ಥ ಸಾಧನೆಗೆ ಏನು ಬೇಕಾದರೂ ಸುಳ್ಳು ಹೇಳಿ ನಂಬಿಸುತ್ತಾನೆ. ತನ್ನ ಉದ್ದೇಶ ಈಡೇರಿದ ಮೇಲೆ ತನ್ನ ನಿಜಸಂಗತಿ ಬಿಚ್ಚಿಡುತ್ತಾನೆ. ಅಷ್ಟೊತ್ತಿಗೆ ಸರಿಪಡಿಸಲಾಗದ ಅನಾಹುತಗಳು ನಡೆದು ಹೋಗಿರುತ್ತವೆ. ಇದರ ಅರಿವಿಲ್ಲದೇ ಹದಿಹರೆಯದವರು ಶಿಕ್ಷಣ ಪಡೆದು ತಮ್ಮ ಕಾಲ ಮೇಲೆ ನಿಲ್ಲುವ ಬದಲು ತಿಳಿಗೇಡಿಗಳ ಬಣ್ಣದ ಮಾತಿಗೆ ಮರುಳಾಗಿ ಪ್ರೀತಿ–ಪ್ರೇಮದ ಬಲೆಗೆ ಬಿದ್ದು ತಮ್ಮ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅನೇಕ ಆತ್ಮಹತ್ಯೆಗಳು ಭ್ರಮೆ ನಂಬಿದ ಕಾರಣಕ್ಕೇ ಆಗಿರುತ್ತವೆ.

ಕೆಲವರಿಗೆ ಭ್ರಮೆ ಹುಟ್ಟಿಸುವ ಮಂದಿಯೇ ಮಿತ್ರರಂತೆ, ಸತ್ಯ ಹೇಳುವವರು ಶತೃಗಳಂತೆ ಕಾಣುತ್ತಾರೆ, ಅವರಿಗೆ ಭ್ರಮೆಯೇ ಸ್ವರ್ಗ, ವಾಸ್ತವವೇ ನರಕವಾಗಿರುತ್ತದೆ. ಆ ಕಾರಣಕ್ಕೆ ಭ್ರಮೆ ಹುಟ್ಟಿಸುವವರೊಂದಿಗೆ ಇರಲು ಬಯಸುತ್ತಾರೆ. ಇದಕ್ಕೆ ತದ್ವಿರುದ್ಧವಾದ ಜನರೂ ಇರುತ್ತಾರೆ. ವಾಸ್ತವದಲ್ಲಿ ಅವರು ಸುಖಿಗಳಾಗಿ ಇರಬಹುದಾದರೂ, ಇಲ್ಲಸಲ್ಲದ ಭ್ರಮೆಯಿಂದ ನರಕಯಾತನೆ ಅನುಭವಿಸುತ್ತಿರುತ್ತಾರೆ. ಇಲ್ಲದ ಸಂಪತ್ತನ್ನು ಗಳಿಸುವ ಹುಚ್ಚಿನಲ್ಲಿ ಇರುವ ಸಂಪತ್ತನ್ನು ಅನುಭವಿಸದೇ ಮೂರ್ಖರಾಗಿರುತ್ತಾರೆ. ಅದಕ್ಕೆ ಡಿ.ವಿ.ಜಿ.ಯವರು 'ಇರುವ ಭಾಗ್ಯವ ನನೆದು ಬಾರೆನೆಂಬುದ ಬಿಡು ಹರುಷಕ್ಕಿದೆ ದಾರಿ' ಎಂದು ಹೇಳಿದ್ದಾರೆ.

ಮನುಷ್ಯ ತನಗಿರುವ ಕಲ್ಪನಾಶಕ್ತಿಯನ್ನು ಒಳ್ಳೆಯ ಕನಸು ಕಾಣಲು ಬಳಸಬೇಕು. ಆ ಕನಸನ್ನು ಈಡೇರಿಸಿಕೊಳ್ಳಲು ನಿತ್ಯವೂ ಯತ್ನಿಸಬೇಕು. ಭ್ರಮೆಗೆ ಒಳಗಾಗಿ ವಾಮಮಾರ್ಗದಲ್ಲಿ ಗಳಿಸುವ ಯತ್ನ ಮಾಡಬಾರದು. ಎಷ್ಟೇ ಹಗಲುಗನಸು ಕಂಡರೂ ವಾಸ್ತವದ ಅರಿವು ಇರಲೇಬೇಕು. ಹೊಗಳುಭಟರನ್ನು ದೂರವಿರಿಸಬೇಕು. ಯಾರದೋ ಮಾತು ಕೇಳಿ ತೀರ್ಮಾನ ಮಾಡಬಾರದು. ತಮ್ಮ ಸಾಮರ್ಥ್ಯದ ಮೇಲೆ ನಿಲುವು ತಾಳಬೇಕು. ಅದಕ್ಕೆ ಬದ್ಧರಾಗಿರಬೇಕು. ಭ್ರಮೆ ಎಂಬುದು ನೀರ ಮೇಲಿನ ಗುಳ್ಳೆ ಎಂದು ಭಾವಿಸಬೇಕು.

ಪದ ತಾಂಬೂಲ: ಭ್ರಮೆಯಲ್ಲಿ ಸುಖಿಸಿದವನು ವಾಸ್ತವದಲ್ಲಿ ದುಃಖಿಸಲೇಬೇಕು !

ರಾಷ್ಟ್ರೀಯ ವಿಜ್ಞಾನ ದಿನ: ದಕ್ಷ ಕಾಲೇಜಲ್ಲಿ ವಿಜ್ಞಾನ ವಸ್ತುಪ್ರದರ್ಶನ

ಮೈಸೂರು, ಮಾ.3– ಮೈಸೂರಿನ ದಕ್ಷ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ ವಸ್ತುಪ್ರದರ್ಶನ ಗಮನ ಸೆಳೆಯಿತು.

ಹೂಟಗಳ್ಳಿಯಲ್ಲಿರುವ ದಕ್ಷ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಸ್ತುಪ್ರದರ್ಶನ, ವಿವರಣೆ, ಡಾ.ಸಿ.ವಿ.ರಾಮನ್ ಹೆಸರಿನಲ್ಲಿರುವ ವಿಜ್ಞಾನ ದಿನದ ಮಹತ್ವ ಸಾರುವ ಪಿಪಿಟಿ ಪ್ರದರ್ಶನ ಮತ್ತು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿಜ್ಞಾನ ಮಾದರಿಗಳ ವಸ್ತುಪ್ರದರ್ಶನವನ್ನು ವೀಕ್ಷಿಸಿ ಅದರ ಮಾಹಿತಿ ಪಡೆಯುವ ಮೂಲಕ ಕಾಲೇಜಿನ ಕಾರ್ಯದರ್ಶಿ ಶ್ರೀಮತಿ ಸೋನಿಯಾ ಉಮಾಪತಿ ರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಮೈಸೂರಿನ ದಕ್ಷ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ ವಸ್ತುಪ್ರದರ್ಶನ ಗಮನ ಸೆಳೆಯಿತು.

ಬಳಿಕ ಮಾತನಾಡಿದ ಅವರು, ವಿಜ್ಞಾನ ಬದುಕಿನಲ್ಲಿ ಎಲ್ಲರಿಗೂ ಅಗತ್ಯವಾದುದು. ಪದವಿ ಹಂತದ ವಿದ್ಯಾರ್ಥಿಗಳು ಈ ರೀತಿಯ ವಸ್ತುಪ್ರದರ್ಶನದಿಂದ ವಿಮುಖರಾಗುತ್ತಾರೆ. ಆದರೆ, ವಿಜ್ಞಾನದ ಮಾದರಿಗಳನ್ನು ತಯಾರಿಸುವಲ್ಲಿ ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿಗಳಾದ ನಿಮ್ಮ ಶ್ರಮ ಮತ್ತು ಭಾಗವಹಿಸುವಿಕೆ ಹೆಮ್ಮೆ ತರುತ್ತದೆ ಎಂದು ಸೋನಿಯಾ ಸಂತಸ ವ್ಯಕ್ತಪಡಿಸಿದರು.

ಹೀಗೆ ಬೇರೆ ಬೇರೆ ವಿಷಯಗಳನ್ನೂ ನೀವು ಆಸಕ್ತಿ ಪಟ್ಟು ಕಲಿಯುತ್ತಾ ಹೋದರೆ ನಿಮ್ಮ ಜ್ಞಾನ ಇನ್ನಷ್ಟು ಹೆಚ್ಚುತ್ತದೆ ಎಂದು ಆಶಯ ವ್ಯಕ್ತಪಡಿಸಿದರು.

ದಕ್ಷ ಕಾಲೇಜಿನ ಸಂಶೋಧನ ಕೇಂದ್ರದ ನಿರ್ದೇಶಕ ಡಾ.ಎಂ.ಬಿ.ಮಹೇಶ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಗುತ್ತದೆ. 10 ವರ್ಷದ ಹಿಂದೆ ಇದ್ದ 2ಜಿ ತಂತ್ರಜ್ಞಾನ ಇಂದು 5ಜಿ ಮಟ್ಟಕ್ಕೆ ಬೆಳೆದಿದೆ. ಇದರಿಂದ ನಮಗೆ ಜಗತ್ತು ಸಾಕಷ್ಟು ಹತ್ತಿರವಾಗಿದೆ. ಅಲ್ಲದೆ ಈ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಕೆಳಹಂತದ ನೌಕರಿಯಲ್ಲಿದ್ದವರು ಐಎಎಸ್‌ನಂತಹ ಉನ್ನತ ಮಟ್ಟದ ಪರೀಕ್ಷೆಯನ್ನು ಪಾಸು ಮಾಡಿರುವುದನ್ನು ನಾವು ಕಾಣಬಹುದು ಎಂದು ಮಾಹಿತಿ ನೀಡಿದರು.

ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಚ್.ಸಿ. ಆನಂದ ಮಾತನಾಡಿದರು. ಬಳಿಕ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ ಜರುಗಿತು. ಸಹಾಯಕ ಪ್ರಾಧ್ಯಾಪಕಿಯರಾದ ಅರ್ಪಿತಾ, ಅರ್ಷಿಯಾ ಖಾನಂ, ಪಲ್ಲವಿ ಕುಮಾರ್, ಅಶ್ವಿನಿ ಭಾಗವಹಿಸಿದ್ದರು.


ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಮಾ.3–ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಮಾ.10ರವರೆಗೆ ಅವಧಿ ವಿಸ್ತರಿಸಲಾಗಿದೆ. 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.postmatric.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯ. ಮಾಹಿತಿಗೆ ದೂ.ಸಂ: 0821-2520910 ಸಂಪರ್ಕಿಸಬಹುದು.

ಇಂದು, ನಾಳೆ ಅಂತರ ಕಾಲೇಜುಗಳ ಪುರುಷ, ಮಹಿಳೆಯರ ಬ್ಯಾಡ್‌ಮಿಂಟನ್ ಕ್ರೀಡಾಕೂಟ

ಮೈಸೂರು,ಮಾ.3–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಮತ್ತು ಟೆರೆಷಿಯನ್ ಕಾಲೇಜು ಸಂಯುಕ್ತಾಶ್ರಯದಲ್ಲಿ 2023–24ನೇ ಸಾಲಿನ ಶ್ರೀಮತಿ ಕಲ್ಯಾಣಮ್ಮ ಮತ್ತು ಬಿ.ಬಸವರಾಜು ಹೆಸರಿನಲ್ಲಿ ಮೈಸೂರು ನಗರ ಅಂತರ ಕಾಲೇಜುಗಳ ಪುರುಷ ಮತ್ತು ಮಹಿಳೆಯರ ಬ್ಯಾಡ್‌ಮಿಂಟನ್ ಕ್ರೀಡಾಕೂಟವನ್ನು ಮಾ.4 ಮತ್ತು 5ರಂದು ಮಾನಸ ಗಂಗೋತ್ರಿಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಕ್ರೀಡಾಕೂಟದ ಉದ್ಘಾಟನೆಯನ್ನು ಮಾ.4ರಂದು ಬೆಳಗ್ಗೆ 9.30ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ನೆರವೇರಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ, ರಾಷ್ಟ್ರೀಯ ಖೋ–ಖೋ ಆಟಗಾರ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಬ್ಯಾಡ್‌ಮಿಂಟನ್ ಕ್ರೀಡಾಕೂಟದ ಬಹುಮಾನ ವಿತರಣಾ ಸಮಾರಂಭವನ್ನು ಮಾ.5ರಂದು ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಚಂದ್ರಕುಮಾರ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಲಿದ್ದಾರೆ.

ಕಾಣೆಯಾದ ವ್ಯಕ್ತಿ ಪತ್ತೆಗೆ ಮನವಿ



ಮೈಸೂರು,ಮಾ.3–ಫೆ.25ರಂದು ಸುಮಾರು 31 ವರ್ಷದ ವೆಂಕಟೇಶ್ ಎಂಬ ವ್ಯಕ್ತಿಯು ಕಾಣೆಯಾಗಿದ್ದು, ಮೈಸೂರು ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5.5 ಅಡಿ ಎತ್ತರ, ಭೋವಿ ಜನಾಂಗ, ಎಣ್ಣೆಗೆಂಪು ಮೈ ಬಣ್ಣ, ಕೋಲುಮುಖ, ಸಾಧಾರಣ ಮೈಕಟ್ಟನ್ನು ಹೊಂದಿದ್ದು, ಕಪ್ಪು ಗಡ್ಡ ಮೀಸೆ, ಕಪ್ಪು ತಲೆಕೂದಲು ಹೊಂದಿರುತ್ತಾರೆ. ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಾಗಿದ್ದು, ಅವರ ಮೊ.ಸಂ: 6360012228 ಹಾಗೂ ಆಧಾರ್ ನಂಬರ್:279691707424 ಆಗಿರುತ್ತದೆ. ಮಾಹಿತಿ ತಿಳಿದು ಬಂದಲ್ಲಿ ಮೈಸೂರು ಜಿಲ್ಲೆ ಎಸ್.ಪಿ. ದೂ.ಸಂ: 0821-2520040, ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ: 0821-2444800 ಅಥವಾ ವರುಣ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರ ದೂ.ಸಂ: 0821-2594411, 9480805052 ಸಂಪರ್ಕಿಸಿ ಎಂದು ವರುಣ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ರೇಷ್ಮೆ ಕೇಂದ್ರದಿಂದ ಒಡಂಬಡಿಕೆ



ಮೈಸೂರು,ಮಾ.3(ಎಂಕೆ)– ನವದೆಹಲಿಯಲ್ಲಿ ನಡೆದ ಭಾರತ್ ಟೆಕ್ಸ್ ಎಕ್ಸ್‌ಪೋ–2024ರಲ್ಲಿ ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಎರಡು ಕಂಪನಿಗಳೊಂದಿಗಿನ ಒಡಂಬಡಿಕೆ (ಎಂಒಯು)ಗೆ ಸಹಿ ಹಾಕಿದೆ.

ಚಾಮರಾಜನಗರದ ಅಜೈಮಸ್ ಲೈಫ್ ಸೈನ್ಸ್ ಲಿಮಿಟೆಡ್ ಹಾಗೂ ಕಡಪದ ರೈನ್‌ಬೋ ಆಗ್ರೋಟೆಕ್ ಪ್ರೈವೆಟ್ ಲಿಮಿಟೆಡ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಎರಡು ಕಂಪನಿಗಳು ಖರೀದಿಸಿದವು.

ವಿಜ್ಞಾನಿ ಡಾ.ಕೆ.ಎನ್.ಮಧುಸೂದನ್ ಅಭಿವೃದ್ಧಿಪಡಿಸಿದ ರೇಷ್ಮೆ ಕೃಷಿ ತ್ಯಾಜ್ಯದಿಂದ ಚಿಟಿನ್–ಚಿಟೋಸಾನ್ ಹೊರತೆಗೆಯುವಿಕೆ ತಂತ್ರಜ್ಞಾನ ಹಾಗೂ ವಿಜ್ಞಾನಿ ಡಾ.ಜಿ.ಎಸ್.ಅರುಣಕುಮಾರ್ ಅಭಿವೃದ್ಧಿಪಡಿಸಿದ ಮಿಸ್ಟರ್ ಪ್ರೋ–ರೂಟ್(ಬೇರು) ಕೊಳೆತ ನಿರ್ವಹಣೆಗಾಗಿ ಘನ ಜೈವಿಕ ಸೂತ್ರೀಕರಣ ತಂತ್ರಜ್ಞಾನವನ್ನು ಸಂಸ್ಥೆಯ ನಿರ್ದೇಶಕ ಡಾ.ಎಸ್.ಗಾಂಧಿದಾಸ್ ಹಸ್ತಾಂತರಿಸಿದರು. ಈ ವೇಳೆ ರಾಜ್ಯ ಜವಳಿ ಖಾತೆ ಸಚಿವೆ ದರ್ಶನಾ ವಿಕ್ರಂ ಜರ್ದೋಶಿ, ಜವಳಿ ಇಲಾಖೆ ಕಾರ್ಯದರ್ಶಿ ರಚನಾ ಶಾ, ಜಂಟಿ ನಿರ್ದೇಶಕಿ ಪ್ರಾಜಕ್ತಾ ಎಲ್ ವರ್ಮ, ಕೇಂದ್ರ ರೇಷ್ಮೆ ಮಂಡಳಿ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್, ನಿರ್ದೇಶಕ ಡಾ. ಎಸ್.ಮಥಿರಾ ಮೂರ್ತಿ ಮತ್ತಿತರರಿದ್ದರು.

ಯುವಕ ನಾಪತ್ತೆ



ಮೈಸೂರು, ಮಾ.3– ಯುವಕನೋರ್ವ ಕಾಣೆಯಾಗಿರುವ ಬಗ್ಗೆ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಂಡಕಳ್ಳಿ ಗ್ರಾಮದಲ್ಲಿರುವ ಒಡನಾಡಿ ಸೇವಾ ಸಂಸ್ಥೆ ವಿದ್ಯಾರ್ಥಿ ಶಾರುಕ್ ಅನ್ಸಾರಿ (18) ಕಾಣೆಯಾದವರು. ಈತ ಫೆಬ್ರವರಿ 9ರಂದು ಮಧ್ಯಾಹ್ನ 12.30ರ ಸಮಯದಲ್ಲಿ ಜೆ.ಪಿ.ನಗರಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವನು ವಾಪಸ್ ಬಂದಿರುವುದಿಲ್ಲ ಎಂದು ಮೆಹರ್ ಬಾನು ದೂರು ದಾಖಲಿಸಿದ್ದಾರೆ. ಈತನ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2520040, 2444800, 2444955 ಸಂಪರ್ಕಿಸಲು ಕೋರಲಾಗಿದೆ.

ಮೈಸೂರಲ್ಲಿ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ

ಮೈಸೂರು, ಮಾ.3(ಎಂಟಿವೈ)– ಮಕ್ಕಳನ್ನು ಅಂಗವೈಕಲ್ಯದಿಂದ ಕಾಪಾಡಲು ತಪ್ಪದೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಎಸ್‌ಎಂಟಿ ಹೆರಿಗೆ ಆಸ್ಪತ್ರೆಯಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ, ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿ ಮಾತನಾಡಿದ ಅವರು, ದೇಶದಾದ್ಯಂತ ರಾಷ್ಟ್ರೀಯ ಪಲ್ಸ್ ಪೊಲೀಯೋ ಲಸಿಕಾ ಅಭಿಯಾನ ಆರಂಭಿಸಲಾಗಿದ್ದು, 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಹನಿ ಹಾಕಲಾಗುತ್ತಿದೆ. ಚಿಕ್ಕ ಮಕ್ಕಳು ಅಂಗಾಂಗಳ ನ್ಯೂನತೆಗೆ ಒಳಗಾಗದಂತೆ ನೋಡಿಕೊಳ್ಳಲು ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಪೋಷಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ನಿರ್ಲಕ್ಷ್ಯ ಮಾಡದೆ ಕಡ್ಡಾಯವಾಗಿ ಪೋಲಿಯೊ ಹಾಕಿಸಬೇಕು. ಸಮಾಜದಲ್ಲಿ ಎಲ್ಲ ಮಕ್ಕಳ ಆರೋಗ್ಯದಿಂದ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿಶೇಷಚೇತನ ಮಕ್ಕಳಿಗೆ ಗಾಲಿಕುರ್ಚಿ, ಎಂ.ಆರ್ ಕಿಟ್ ಸಾಮಗ್ರಿಗಳು ಹಾಗೂ ಕಾರ್ಮಿಕ ಇಲಾಖೆಯ ವತಿಯಿಂದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್‌ಗಳನ್ನು



ಮೈಸೂರಿನ ಎಸ್‌ಎಂಟಿ ಆಸ್ಪತ್ರೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಡಿಹೆಚ್‌ಓ ಡಾ. ಪಿ.ಸಿ.ಕುಮಾರಸ್ವಾಮಿ ಇನ್ನಿತರರಿದ್ದಾರೆ.

ಸಚಿವರು ವಿತರಣೆ ಮಾಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, 2023ನೇ ಸಾಲಿನಲ್ಲಿ ವಿಶ್ವದಲ್ಲಿ ಪಾಕಿಸ್ತಾನ ಮತ್ತು ಆಫ್ಘಾನಿಸ್ಥಾನದಲ್ಲಿ ಪೋಲಿಯೋ ಪ್ರಕರಣಗಳು ಕಂಡು ಬಂದಿದ್ದು, ಈ ಎರಡೂ ದೇಶದಲ್ಲಿ ತಲಾ 6 ಪೋಲಿಯೋ ಪ್ರಕರಣಗಳು ದಾಖಲಾಗಿವೆ. ಈ ಹಿನ್ನೆಲೆಯಲ್ಲಿ ಪೋಲಿಯೋ ಲಸಿಕೆ ಅಭಿಯಾನವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಗಿದೆ. ಭಾರತದಲ್ಲಿ 2007ರ ನ.3ರಂದು ವಲಸೆ ಬಂದವರ ಗುಂಪಿನಲ್ಲಿ ಒಂದು ಪ್ರಕರಣ ಪತ್ತೆಯಾಗಿತ್ತು. 2011ರಲ್ಲಿ ಕೊನೆಯ ಪೋಲಿಯೋ ಪ್ರಕರಣ ದಾಖಲಾಗಿತ್ತು. ಆನಂತರ ಯಾವುದೇ ಪ್ರಕರಣವೂ ಪತ್ತೆಯಾಗದ ಹಿನ್ನೆಲೆಯಲ್ಲಿ ಪೋಲಿಯೋ ಮುಕ್ತ ರಾಷ್ಟ್ರವಾಗಿ ಭಾರತ ಹೊರಹೊಮ್ಮಿತ್ತು ಎಂದು ಹೇಳಿದರು.

ಭಾರತವನ್ನು ಪಲ್ಸ್ ಪೋಲಿಯೋ ಮುಕ್ತ ರಾಷ್ಟ್ರವಾಗಿ ಮುಂದುವರೆಸುವ ನಿಟ್ಟಿನಲ್ಲಿ ಮೊದಲ ಸುತ್ತಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಮೈಸೂರು ಜಿಲ್ಲೆಯಲ್ಲಿ 5 ವರ್ಷದೊಳಗಿನ 2,31,354 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

ಅದರಲ್ಲಿ, ಮೈಸೂರು ನಗರದಲ್ಲಿ 88,844, ಮೈಸೂರು ತಾಲೂಕಿನಲ್ಲಿ 27,112, ತಿ.ನರಸೀಪುರ ತಾಲೂಕಲ್ಲಿ 19,080, ನಂಜನಗೂಡು ತಾಲೂಕಲ್ಲಿ 23,813, ಹೆಚ್.ಡಿ.ಕೋಟೆ ತಾಲೂಕಲ್ಲಿ 19,309, ಹುಣಸೂರು ತಾಲೂಕಲ್ಲಿ 18,286, ಪಿರಿಯಾಪಟ್ಟಣ ತಾಲೂಕಲ್ಲಿ 17,878, ಕೆ.ಆರ್.ನಗರ ತಾಲೂಕಲ್ಲಿ 17,032 ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಲಾಗುತ್ತದೆ.

ಇದಕ್ಕಾಗಿ 1,612 ಬೂತ್‌ಗಳನ್ನು ತೆರೆಯಲಾಗಿದೆ. 29 ಟ್ರಾನ್ಸಿಸ್ಟ್ ಪಾಯಿಂಟ್ ತೆರೆಯಲಾಗಿದ್ದು, 316 ಮೇಲ್ವಿಚಾರಕರು ಹಾಗೂ 6,564 ಲಸಿಕೆ ಹಾಕುವ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಎಲ್ಲರೂ ಕಡ್ಡಾಯವಾಗಿ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವಂತೆ ಮನವಿ ಮಾಡಿದರು. ಮೊದಲ ದಿನವಾದ ಇಂದು ಬೂತ್‌ಗಳಲ್ಲಿ ಲಸಿಕೆ ಹಾಕಲಾಗುತ್ತದೆ. 2, 3, 4ನೇ ದಿನದಲ್ಲಿ ಜಿಲ್ಲೆಯಲ್ಲಿರುವ 7,21,471 ಮನೆಗಳಿಗೆ ಭೇಟಿ ನೀಡಿ ಯಾವ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕಿಸಿಲ್ಲ ಎಂದು ತಪಾಸಣೆ ಮಾಡಿ ಲಸಿಕೆ ಹಾಕಲಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ, ಎಂಎಂಸಿ ಮತ್ತು ಆರ್‌ಐ ನಿರ್ದೇಶಕರಾದ ಡಾ.ದಾಕ್ಷಾಯಿಣಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್, ನೋಡೆಲ್ ಅಧಿಕಾರಿ ಡಾ.ವಸಂತ್, ಸಿಹೆಚ್‌ಓ ಡಾ.ವೆಂಕಟೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನ ಕುರಿತ ಸಮ್ಮೇಳನದ ಸಮಾರೋಪ


ಡಾ.ಅಂಬೇಡ್ಕರ್ ಚಿಂತನೆ, ಅಭಿವೃದ್ಧಿ ನೀತಿಗಳು ಇಂದಿಗೂ ಪ್ರಸ್ತುತ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ

ಮೈಸೂರು, ಮಾ.3(ಪಿಎಂ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ಸರ್ವತೋಮುಖ ಅಭಿವೃದ್ಧಿ ನೀತಿಗಳು ಇಂದಿಗೂ ಪ್ರಸ್ತುತ. ನಾವು ಅವರ ಚಿಂತನೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಕಾರ್ಯಗತಗೊಳಿಸಿದರೆ ವೇಗವಾಗಿ ಯಶಸ್ಸಿನತ್ತ ಸಾಗುತ್ತೇವೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು' ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪದ ಸಮಾರಂಭದಲ್ಲಿ ಘನ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಚಿಂತನೆಗಳು ಸುಸ್ಥಿರ ಅಭಿವೃದ್ಧಿ ಮತ್ತು ಅರ್ಥಪೂರ್ಣ ಬದಲಾವಣೆಗೆ ಮಾರ್ಗಸೂಚಿ ಒದಗಿಸುತ್ತವೆ. ಅವರ ತತ್ವ ಮತ್ತು ಮೌಲ್ಯಗಳಿಂದ ಪ್ರೇರಿತರಾಗಿ ಮಾನವ ಹಕ್ಕುಗಳನ್ನು ಎತ್ತಿಹಿಡಿಯಲು, ಸಾಮಾಜಿಕ ನ್ಯಾಯವನ್ನು ಉತ್ತೇಜಿಸಲು ಮತ್ತು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯನ್ನು



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಕುರಿತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಬೇಡ್ಕರ್ ಅವರ ಭಾವಚಿತ್ರ ಮತ್ತು ಬುದ್ಧನ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

ಉತ್ತೇಜಿಸಲು ಪ್ರತಿಯೊಬ್ಬರು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ನಾವೆಲ್ಲರೂ ಒಟ್ಟಾಗಿ ಅಂಬೇಡ್ಕರ್ ಅವರು ತೋರಿಸಿದ ಮಾರ್ಗವನ್ನು ಅನುಸರಿಸೋಣ ಮತ್ತು ದೇಶದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸಲು, ದೇಶದಲ್ಲಿ ಸಾಮಾಜಿಕ ಸಮಾನತೆ ಮತ್ತು ಸಾಮರಸ್ಯವನ್ನು ತರಲು ಮತ್ತು ದೇಶದ ಏಕತೆ ಮತ್ತು ಸಮಗ್ರತೆ ಬಲಪಡಿಸಲು ಶ್ರಮಿಸೋಣ ಎಂದು ಕರೆ ನೀಡಿದರು.

ರಾಷ್ಟ್ರ ನಿರ್ಮಾಣಕ್ಕೆ ಗಣನೀಯ ಕೊಡುಗೆ: ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಕ, ಔದ್ಯಮಿಕ, ಸಾಂವಿಧಾನಿಕ ಮತ್ತು ಸಾಮಾಜಿಕ ಸಮಾನತೆ ಮತ್ತು ಸೌಹಾರ್ದತೆ ಮೊದಲಾದ ಕ್ಷೇತ್ರಗಳಲ್ಲಿ ಅಸಂಖ್ಯಾತ ಕೆಲಸಗಳನ್ನು ಮಾಡುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಗಣನೀಯ ಕೊಡುಗೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

ಅಂಬೇಡ್ಕರ್ ಅವರ ಚಿಂತನೆಗಳನ್ನು ಜನಸಾಮಾನ್ಯರಿಗೆ ಹರಡಲು ಭಾರತ ಸರ್ಕಾರವು ಹತ್ತು ಹಲವು ಯೋಜನೆಗಳನ್ನು ಕಾರ್ಯಗತಗೊಳಿಸಿದೆ. ಅವರಿಗೆ ಸಂಬಂಧಿಸಿದ ಐದು ಪ್ರಮುಖ ಸ್ಥಳಗಳನ್ನು 'ಪಂಚತೀರ್ಥ' ಎಂದು ಘೋಷಿಸಿದೆ. ಜೊತೆಗೆ ಅವರ ಚಿಂತನೆಯನ್ನು ಸರಿಯಾಗಿ ಸಂಶೋಧಿಸಲು ಮತ್ತು ಅರ್ಥಮಾಡಿಕೊಳ್ಳಲು 'ಅಂಬೇಡ್ಕರ್ ಅಂತಾರಾಷ್ಟ್ರೀಯ ಕೇಂದ್ರ'ವನ್ನು ಸ್ಥಾಪಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಬಾಬಾ ಸಾಹೇಬರ ಜನ್ಮಸ್ಥಳ, ಶಿಕ್ಷಣ ಭೂಮಿ, ದೀಕ್ಷಾ ಭೂಮಿ, ಮಹಾ ಪರಿನಿರ್ವಾಣ ಭೂಮಿ ಮತ್ತು ಅಂತ್ಯಕ್ರಿಯೆ ಭೂಮಿಯಲ್ಲಿ ಸ್ಫೂರ್ತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಸಮಾರೋಪ ಭಾಷಣ ಮಾಡಿದ ನವದೆಹಲಿಯ ಜವಾಹರಲಾಲ್ ನೆಹರು ವಿವಿಯ ಸಾಮಾಜಿಕ ಹೊರಗಿಡುವಿಕೆ ಮತ್ತು ಅಂತರ್ಗತ ನೀತಿಯ ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ.ಯಗತಿ ಚಿನ್ನರಾವ್, ಆಧುನಿಕ ಭಾರತದ ನಿರ್ಮಾಣದಲ್ಲಿ ಅಂಬೇಡ್ಕರ್ ಅವರ ಕೊಡುಗೆ ಅಪಾರ. ಅವರ ವಿಚಾರಧಾರೆಗಳು ಇಂದಿಗೂ ದೇಶವನ್ನು ಮುನ್ನಡೆಸುವ ಮಾರ್ಗದರ್ಶಿಯಾಗಿ ನಿಲ್ಲುತ್ತವೆ. ಮಹಿಳೆಯರು, ಕಾರ್ಮಿಕರ ಕುರಿತ ಅವರ ನಿಲುವು ಮಾನವೀಯ ದೃಷ್ಟಿಕೋನದಿಂದ ಕೂಡಿವೆ ಎಂದು ಹೇಳಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ. ಸಿ.ಸುಧಾಕರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಮುಕ್ತ ವಿವಿಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ ಮತ್ತಿತರರು ಹಾಜರಿದ್ದರು.

ಪಲ್ಸ್ ಪೋಲಿಯೋ ; ಮೈಸೂರು ಜಿಲ್ಲೆಯಲ್ಲಿ ಶೇ.97.53ರಷ್ಟು ಪ್ರಗತಿ

ನಿಗದಿತ ಗುರಿ ಹೊಂದಿದ್ದ 2,31,354 ಮಕ್ಕಳ ಪೈಕಿ 2,25,629 ಮಕ್ಕಳಿಗೆ ಲಸಿಕೆ

ಮೈಸೂರು,ಮಾ.3(ಪಿಎಂ)– ಮೈಸೂರು ಜಿಲ್ಲೆಯಲ್ಲಿ ಭಾನುವಾರ ನಡೆದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ನಿಗದಿತ ಗುರಿ ಹೊಂದಿದ್ದ ಒಟ್ಟು 2,31,354 ಮಕ್ಕಳ ಪೈಕಿ 2,25,629 ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಶೇ.97.53ರಷ್ಟು ಪ್ರಗತಿ ಸಾಧಿಸಲಾಗಿದೆ. ಮೈಸೂರು ನಗರ ವ್ಯಾಪ್ತಿಯಲ್ಲಿ 88,844 ಮಕ್ಕಳ ಪೈಕಿ 85,945 ಮಕ್ಕಳಿಗೆ ಲಸಿಕೆ ನೀಡಲಾಯಿತು. ಅಂತೆಯೇ ಮೈಸೂರು ಗ್ರಾಮಾಂತರ ವ್ಯಾಪ್ತಿಯಲ್ಲಿ 27,112 ಮಕ್ಕಳ ಪೈಕಿ 26,295 ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಒಟ್ಟಾರೆ ಮೈಸೂರು ತಾಲೂಕಿನಲ್ಲಿ ಶೇ.96.80ರಷ್ಟು ಪ್ರಗತಿ ಸಾಧಿಸಲಾಯಿತು.

ಅದೇ ರೀತಿ ಟಿ.ನರಸೀಪುರ ತಾಲೂಕಲ್ಲಿ 19,080 ಮಕ್ಕಳ ಪೈಕಿ 18,929 ಮಕ್ಕಳು (ಶೇ.99.21), ನಂಜನಗೂಡು ತಾಲೂಕಲ್ಲಿ 23,813 ಮಕ್ಕಳ ಪೈಕಿ 23,035 ಮಕ್ಕಳು (ಶೇ.96.73), ಹುಣಸೂರು ತಾಲೂಕಲ್ಲಿ 18,286 ಮಕ್ಕಳ ಪೈಕಿ 18,106 ಮಕ್ಕಳು (ಶೇ.99.02), ಹೆಚ್‌ಡಿ ಕೋಟೆ ತಾಲೂಕಲ್ಲಿ 19,309 ಮಕ್ಕಳ ಪೈಕಿ 18,455 ಮಕ್ಕಳು (ಶೇ.95.58), ಪಿರಿಯಾಪಟ್ಟಣ ತಾಲೂಕಲ್ಲಿ 17,878 ಮಕ್ಕಳ ಪೈಕಿ 17,684 ಮಕ್ಕಳು (ಶೇ.98.91), ಕೆಆರ್ ನಗರ ತಾಲೂಕಲ್ಲಿ 17,032 ಮಕ್ಕಳ ಪೈಕಿ 17,180 ಮಕ್ಕಳಿಗೆ (ಶೇ.100.87) ಲಸಿಕೆ ನೀಡಲಾಯಿತು.

ಕೆ.ಆರ್.ಕ್ಷೇತ್ರ: ಗೋಪಾಲ ರಾಜೇ ಅರಸ್ ಬಿಜೆಪಿ ನೂತನ ಅಧ್ಯಕ್ಷ

ಮೈಸೂರು, ಮಾ.3(ಎಸ್‌ಪಿಎನ್)– ಚಾಮುಂಡಿಪುರಂ ವೃತ್ತದಲ್ಲಿರುವ ಶಾರದ ಅನಿಕೇತನ ಸಭಾಂಗಣದಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ನೂತನ ಅಧ್ಯಕ್ಷರಾಗಿ ಗೋಪಾಲರಾಜ್ ಅರಸ್ ಅವರು, ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, ಸಂಸದ ಪ್ರತಾಪಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ಭಾನುವಾರ ಅಧಿಕಾರ ಸ್ವೀಕರಿಸಿದರು.

ನಂತರ ಸಂಸದ ಪ್ರತಾಪಸಿಂಹ ಮಾತನಾಡಿ, ಕೃಷ್ಣರಾಜ ಕ್ಷೇತ್ರ ಕಾರ್ಯಕರ್ತರ ಭದ್ರಕೋಟೆ. ನಗರದಲ್ಲಿ ಅತಿ ಹೆಚ್ಚು ಕಾರ್ಯಕರ್ತರು ಇರುವ ಕ್ಷೇತ್ರ ಹಾಗೂ ಅತಿ ಹೆಚ್ಚು ಮತದಾನ ನಡೆಯುವ ಕ್ಷೇತ್ರವಾಗಿದೆ ಎಂದರು.

ಕೆ.ಅರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಪ್ರತಿ ಮೂರು ವರ್ಷಕ್ಕೊಮ್ಮೆ ಜವಾಬ್ದಾರಿ ಹಸ್ತಾಂತರ ಮಾಡುವುದು ಪಕ್ಷದ ನಿಯಮ. ಕಳೆದ ಹತ್ತಾರು ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ



ಅಧಿಕಾರ ಸ್ವೀಕರಿಸುತ್ತಿರುವ ಗೋಪಾಲರಾಜ್ ಅರಸ್

ನೂತನ ಅಧ್ಯಕ್ಷರಾದ ಗೋಪಾಲರಾಜ್ ಅರಸ್ ತೊಡಗಿಸಿಕೊಂಡಿದ್ದಾರೆ. ಈ ಕ್ಷೇತ್ರದ ಎಲ್ಲಾ ಕಾರ್ಯಕರ್ತರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಮತದಾನ ಮಾಡಿಸುವ ಮೂಲಕ ರಾಜ್ಯಕ್ಕೆ ಮಾದರಿ ಕ್ಷೇತ್ರವನ್ನಾಗಿ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಹಿರಿಯ ಮುಖಂಡರಾದ ವೈ.ವಿ.ರವಿಶಂಕರ್, ಮಾಜಿ ಉಪ ಮೇಯರ್ ಡಾ.ರೂಪ, ಪ್ರಧಾನ ಕಾರ್ಯದರ್ಶಿ ಗಿರಿಧರ್, ಬಿ.ಎಂ.ರಘು, ಉಪಾಧ್ಯಕ್ಷರಾದ ಜೋಗಿ ಮಂಜು, ವಿಶ್ವೇಶ್ವರಯ್ಯ, ಮಾಜಿ ಅಧ್ಯಕ್ಷ ವಡಿವೇಲು, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಜಯರಾಮ್, ಗೋಕುಲ್ ಗೋವರ್ಧನ್, ನಗರಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ, ಸೌಮ್ಯ ಉಮೇಶ್, ಕೆ.ಜೆ.ರಮೇಶ್, ಮ.ವಿ.ರಾಮಪ್ರಸಾದ್, ಛಾಯಾದೇವಿ, ಕಮಲಮ್ಮ, ಸೀಮಾ ಪ್ರಸಾದ್, ಸೌಭಾಗ್ಯ ಮೂರ್ತಿ, ಪಿ.ಟಿ.ಕೃಷ್ಣ, ಜಗದೀಶ್, ಕಿಶೋರ್, ಸಂತೋಷ್, ಸಂದೀಪ್, ಕೀರ್ತಿ ಮುಂತಾದವರಿದ್ದರು.

ಮಂಡ್ಯ ಲೋಕಸಭಾ ಕ್ಷೇತ್ರ

ಬಿಜೆಪಿ–ಜೆಡಿಎಸ್ ಮೈತ್ರಿ ಟಿಕೆಟ್ 100% ನನಗೆ

ಸಂಸದೆ ಸುಮಲತಾ ಅಂಬರೀಶ್ ಆತ್ಮವಿಶ್ವಾಸ

ಮಂಡ್ಯ, ಮಾ.3– ಮಂಡ್ಯ ಲೋಕಸಭೆ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಟಿಕೆಟ್ 100% ನನಗೆ ಎಂದು ಸಂಸದೆ ಸುಮಲತಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಯಾವಾಗ ಅಭ್ಯರ್ಥಿ ಪಟ್ಟಿ ಬರುತ್ತೋ ಅವಾಗ್ಲೆ ನಮ್ಮದು ಕೂಡ ಬರುತ್ತೆ. ದೆಹಲಿಗೆ ಹೋಗುವ ಅವಶ್ಯಕತೆ ಇಲ್ಲ, ನನ್ನ ಬರಲು ಹೇಳಿದ್ರೆ ಮಾತ್ರ ಹೋಗ್ತೀನೆ. ಚುನಾವಣೆಗೆ ತಯಾರಿ ವಿಚಾರ ಯಾವುದೇ ನಿರ್ದಿಷ್ಟ ಪ್ಲಾನ್ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮಂಡ್ಯದಲ್ಲಿ ಮನೆ ಕಟ್ಟುವ ವಿಚಾರವಾಗಿ ಮಾತನಾಡಿದ ಅವರು, ಮಂಡ್ಯದಲ್ಲಿ ನನ್ನ ಮನೆ ಇದೆ. ಅದು ರೆಂಟ್ ಮನೆ. ಮುಂದೆ ಮಂಡ್ಯದಲ್ಲಿ ಮನೆ ಕಟ್ಟುತ್ತೇನೆ. ಇದು ನಮ್ಮ ಮನೆ. ಅಂಬರೀಶ್ ಇದ್ದ ಕಾಲದಿಂದಲೂ ಈ ಮನೆಯಲ್ಲಿ ರೆಂಟ್‌ಗಿದ್ವಿ. ಇದ್ದಿ ಅಂಬರೀಶ್ ಅವರು ಎಲೆಕ್ಷನ್ ಗೆದ್ದವರು. ಸಾರ್ಥ–ದಾರ್ಥ ಗೊತ್ತಿದೆ ಹಾಡಿ.. ಲ್ಯಾಂಡ್ ತೆಗೆದುಕೊಂಡು ಗುದ್ದಲಿ ಪೂಜೆ ಮಾಡಿ ಮನೆ ಕಟ್ಟುವ ಆಸೆ ಇತ್ತು. ಆದ್ರೆ ಅದರಲ್ಲಿ ರಾಜಕಾರಣ ನಡೆಯಿತು. ಮನೆ ಕಟ್ಟುವಾಗ ಅಡೆತಡೆ ಸ್ವಾಭ್ಯಾವ ಕ್ರಿಯೇಟ್ ಮಾಡಿದ್ರು. ನ್ಯೂಟ್ರಲ್ ಆಗೋದು ವಾಸಿ ಅಂತ ಅಂದ್ಕೊಂಡೆ. ದೇವು ಆಶೀರ್ವಾದ ಮಾಡಿದ್ರೆ ಮುಂದೆ ಮನೆ ಕಟ್ಟೋಣ. ನನ ಗಿಂತ ಅಭಿಗೆ ಮಂಡ್ಯದಲ್ಲಿ ಮನೆ ಕಟ್ಟಲು ತುಂಬಾ ಆಸೆ ಇದೆ ಎಂದು ತಿಳಿಸಿದರು.

ಕಳೆದ ಬಾರಿ ನಾನು ನಿಂತಿದ್ದ ಪಕ್ಷೇತರ ಅಭ್ಯರ್ಥಿಯಾಗಿ. ಯಾವುದೇ ಒಂದು ಅನುಭವ ಇಲ್ಲದೆ ಚುನಾವಣೆಗೆ ನಿಂತಿದ್ದೆ. ನನಗೆ ಬೇಕಾದವರು ನಿಮ್ಮ ಜೊತೆ ಇರ್ತೀವಿ ಅಂತ ಗಟ್ಟಿಯಾಗಿ ನಿಂತಿದ್ರು. ಈಗಿನ ಸುದ್ದಿಯ ಬೇರೆ ಇದೆ. ಪಕ್ಷದ ಚಿಹ್ನೆಯಿಂದ ನಿಲ್ಲೆನೇ, ಪಕ್ಷ ಮತ್ತು ಪಕ್ಷದ ಲೀಡರ್ ಏನು ಹೇಳ್ತಾರೆ ನೋಡಬೇಕು. ಇದು ಬೇರೆ ರೀತಿಯಲ್ಲಿ ಚುನಾವಣೆ ನಡೆಯುತ್ತದೆ. ಪ್ರಚಾರ, ಹೋರಾಟ, ಕ್ಯಾಂಪೇನ್ ಡಿಫರೆಂಟ್ ಆಗಿ ಇರುತ್ತೆ. ಯಶ್, ದರ್ಶನ್ ಬಂದ್ರೆ ಬಲ ಇರುತ್ತೆ. ಎಲ್ಲರೂ ಸಪೋರ್ಟ್ ಆಗಿ ಇದ್ದಾರೆ. ನನಗೋಸ್ಕರ ಬರಿ ಸಪೋರ್ಟ್ ಅಲ್ಲ, ತ್ಯಾಗ ಮಾಡಿದ್ರು, ಇಬ್ಬರು ಸೂಪರ್ ಸ್ಟಾರ್‌ಗಳು. 25 ದಿನ ಸ್ವಾರ್ಥ ಇಲ್ಲದೆ ನನ್ನ ಪರ ನಿಂತಿದ್ರು, ಪದೇ ಪದೇ ಎಲ್ಲಾ ಬಿಟ್ಟು ಬನ್ನಿ ಅನ್ನೋದು ಸರಿಯಲ್ಲ. ನನಗೆ ಮನಸ್ಸು ಒಪ್ಪಲ್ಲ. ಯಶ್, ದರ್ಶನ್ ಒಂದೊಂದು ಮೂವಿ ಮಾಡ್ತಿದ್ದಾರೆ. ಅದನ್ನೆಲ್ಲ ಬಿಟ್ಟು ಬನ್ನಿ ಅನ್ನೋದು ಸರಿಯಲ್ಲ. ಅವರು ಬರೋದು ಇದ್ರೆ ಖಂಡಿತವಾಗಿಯೂ ಹಾರ್ಟ್ಲಿ ವೆಲ್‌ಕಮ್. ದೊಡ್ಡ ಶಕ್ತಿಯಾಗಿ ನನಗೆ ಇರುತ್ತೆ ಎಂದು ಹೇಳಿದರು.

ರಾಮೇಶ್ವರಂ ಕೆಫೆ ಬಾಂಬ್ ಬ್ಲಾಸ್ಟ್ ಕುರಿತು ಪ್ರತಿಕ್ರಿಯಿಸಿ, ಇದು ಅತ್ಯಂತ ಭಯಾನಕ ವಿಚಾರ. ಎಲ್ಲರೂ ಸೇರಿ ಖಂಡಿಸಬೇಕು. ಯಾರೂ ಸಮರ್ಥನೆ ಮಾಡೋ ಕೆಲಸ ಮಾಡಬಾರದು. ಅವರಿಗೆ ಕಠಿಣಾತಿ ಕಠಿಣ ಶಿಕ್ಷೆ ಕೊಡಿಸಬೇಕು. ಎಲ್ಲರೂ ಒಂದೇ ಟ್ರ್ಯಾಕ್ ನಲ್ಲಿ ಹೋಗಬೇಕು. ಬೇರೆ ಬೇರೆ ಹೇಳಿಕೆ ಕೊಡೋದು, ಅವರ ಪರವಾದ ರೀತಿಯಲ್ಲಿ ಹೇಳಿಕೆ ಕೊಡೋದು ಮೂರ್ಖತನದ ಮಂಗಳೂರು ಕುಕ್ಕರ್ ಬ್ಲಾಸ್ಟ್ ರೀತಿ ಅಂತಾನೇ ಹೇಳ್ತಾರೆ. ಆದ್ರೆ ಎಲ್ಲರದ್ದೂ ಊಹೆನೆ ಇದೆ. ಪೊಲೀಸರು ಸಹ ಕೆಲಸ ಮಾಡ್ತಿದ್ದಾರೆ. ಅವರನ್ನ ಬೇಗ ಅರೆಸ್ಟ್ ಮಾಡ್ತಾರೆ ಎಂಬ ವಿಶ್ವಾಸ ಇದೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕಿಂತ ಹೆಚ್ಚಾಗಿ, ಉಗ್ರವಾದಿ ಅಥವಾ ಆತಂಕವಾದಿಗಳು ಈ ರೀತಿಯ ಕೃತ್ಯಗಳನ್ನು ಮಾಡಬಹುದು ಎಂಬಂತೆ ಪ್ರೋತ್ಸಾಹವಂತೂ ಬಂದೇ ಬರುತ್ತೆ. ಯಾರೇ ಆದ್ರೂ ಇದನ್ನ ಉತ್ತೇಜನ ನೀಡುವಂತಹ ಹೇಳಿಕೆ ಕೊಡಬಾರದು ಎಂದರು.

ಆದಿಚುಂಚನಗಿರಿಗೆ ಸುಮಲತಾ ಭೇಟಿ



ಸಂಸದೆ ಸುಮಲತಾ ಅವರು ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಾದ ಪಡೆದಿದ್ದಾರೆ. ಲೋಕಸಭಾ ಚುನಾವಣೆ ಅಖಾಡ ಕಾವೇರುತ್ತಿದ್ದಂತೆ, ಸುಮಲತಾ ಅವರು ಮಂಡ್ಯ ಕ್ಷೇತ್ರದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಈ ಹಿಂದೆ ಸುದ್ದಿಗೋಷ್ಠಿಯೊಂದರಲ್ಲಿ ಶ್ರೀಗಳ ಆಶೀರ್ವಾದ ಪಡೆದು ಪ್ರಚಾರ ಆರಂಭಿಸುವುದಾಗಿ ಸುಮಲತಾ ಹೇಳಿದ್ದರು. ಅದರಂತೆ ಇದೀಗ ಮೊದಲಿಗೆ ಕಾಲಭೈರವೇಶ್ವರನಿಗೆ ಪೂಜೆ ಸಲ್ಲಿಸಿದ್ದಾರೆ. ಬಳಿಕ ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿಯಾಗಿ ಸುಮಲತಾ ಆಶೀರ್ವಾದ ಪಡೆದು ಬಂದಿದ್ದಾರೆ.

ಜಿಲ್ಲೆಯಲ್ಲಿ 723 ಪೋಲಿಯೋ ಲಸಿಕಾ ಕೇಂದ್ರಗಳಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ



ಮಗುವಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುತ್ತಿರುವ ಡಿಹೆಚ್‌ಒ. ಡಾ.ಮೋಹನ್.

ಮಂಡ್ಯ,ಮಾ.3– ಜಿಲ್ಲೆಯಲ್ಲಿ ಪ್ರತಿ ವರ್ಷವೂ ಮುನ್ನೆಚ್ಚರಿಕೆ ಕ್ರಮವಾಗಿ ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಒಟ್ಟು 723 ಪೋಲಿಯೋ ಲಸಿಕಾ ಬೂತ್‌ಗಳನ್ನು ತೆರೆದು ಮಕ್ಕಳಿಗೆ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ಡಿಹೆಚ್‌ಒ ಡಾ. ಮೋಹನ್ ತಿಳಿಸಿದರು.

ಭಾನುವಾರ ಹಾಲಹಳ್ಳಿ ಸ್ಲಂ ಬೋರ್ಡ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆ, ಸಂಘ ಸಂಸ್ಥೆಗಳ ಸಹಯೋಗದಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಟ್ಟು 3 ದಿನಗಳ ಕಾಲ ಲಸಿಕಾ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಇಂದು ಪೋಲಿಯೋ ಲಸಿಕೆಯನ್ನು ಬೂತ್‌ಗಳಲ್ಲಿ ಮಕ್ಕಳಿಗೆ ನೀಡಲಾಗುತ್ತಿದೆ. ನಾಳೆ ಮನೆ ಮನೆಗೆ ಭೇಟಿ ನೀಡಿ ಹಳ್ಳಿಗಳಲ್ಲಿ ಹಾಗೂ ನಾಳಿದ್ದು ನಗರ ಪ್ರದೇಶಗಳಲ್ಲಿ ಲಸಿಕೆಯನ್ನು ನೀಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷ ಮೀರಾ ಶಿವಲಿಂಗಯ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನೋಡಲ್ ಅಧಿಕಾರಿ ಡಾ.ಪ್ರಭುದೇವ್, ಆರ್‌ಸಿಹೆಚ್‌ಒ ಡಾ.ಅನಿಲ್ ಕುಮಾರ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಮತ್ತು ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಎಂ.ಎನ್. ಆಶಾಲತಾ, ಡಾ.ಬೆಟ್ಟಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕುಡಿಯುವ ನೀರು, ಹಾಸ್ಟೆಲ್‌ಗೆ ಗುದ್ದಲಿಪೂಜೆ



ಹಲಗೂರು ಹೋಬಳಿಯ ಸಾಗ್ಯ ಹಾಗೂ ಚಿಲ್ಲಾಪುರದಲ್ಲಿ ಕುಡಿಯುವ ನೀರು ಹಾಗೂ ಮೆಟ್ರಿಕ್ ಪೂರ್ವ ಬಾಲಕರ ಹಾಸ್ಟೆಲ್‌ಗೆ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಗುದ್ದಲಿಪೂಜೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಹಲಗೂರು ಗ್ರಾಪಂ ಅಧ್ಯಕ್ಷೆ ರಕ್ಷಿತಾ ಜೀವನ್ ಕುಮಾರ್, ಸುಮಲತಾ ರವಿ, ನಿಟ್ಟೂರು ಗ್ರಾಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಸಾಗ್ಯ ಕೆಂಪಣ್ಣ ಹಾಗೂ ಇನ್ನಿತರ ಕಾಂಗ್ರೆಸ್ ಮುಖಂಡರು ಸರ್ಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು.

ಡಾ.ಮಲ್ಲಿಕಾರ್ಜುನಸ್ವಾಮಿ ನಿಧನ



ಕೆ.ಆರ್.ಪೇಟೆ, ಮಾ.3– ಪಟ್ಟಣದ ಶ್ರೇಯಸ್ ಆಯುರ್ವೇದಿಕ್ ಕ್ಲಿನಿಕ್ ವೈದ್ಯ ಡಾ.ಮಲ್ಲಿಕಾರ್ಜುನಸ್ವಾಮಿ(64) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರು ಕಳೆದ 25 ವರ್ಷಗಳಿಂದ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಮೂಲಕ ಖ್ಯಾತಿ ಗಳಿಸಿದ್ದರು. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯುತ್ ಸ್ಪರ್ಶದಿಂದ ಕಬ್ಬಿನ ಗದ್ದೆಗೆ ಬೆಂಕಿ

ಭಾರತೀನಗರ.ಮಾ.3– ವಿದ್ಯುತ್ ಸ್ಪರ್ಶದಿಂದ ಕಬ್ಬಿನ ಗದ್ದೆಗೆ ಬೆಂಕಿ ತಗುಲಿ 4 ಎಕರೆ ಕಬ್ಬು ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ಮೆಣಸಗೆರೆ ಗ್ರಾಮದ ಹೊರವಲಯದಲ್ಲಿ ನಡೆದಿದೆ.

ಮೆಣಸಗೆರೆ ಗ್ರಾಮದ ಸುಭಾಷ್ ಎಂಬುವರಿಗೆ ಸೇರಿದ 3 ಎಕರೆ ಕಬ್ಬು, ಜಯಲಕ್ಷ್ಮಿ ಮಾದೇಗೌಡರಿಗೆ ಸೇರಿದ 1 ಎಕರೆಯಲ್ಲಿ ಬೆಳೆದುನಿಂತಿದ್ದ ಕಬ್ಬು ವಿದ್ಯುತ್ ಸ್ಪರ್ಶದಿಂದ ಸುಟ್ಟು ಹೋಗಿದೆ. ಗದ್ದೆಯಲ್ಲಿ ವಿದ್ಯುತ್ ತಂತಿ ಹಾದುಹೋಗಿದ್ದು ಇದರಿಂದ ವಿದ್ಯುತ್ ಸ್ಪರ್ಶ ಉಂಟಾಗಿ ಈ ಘಟನೆ ಜರುಗಿದೆ. ಬೆಂಕಿ ಕಬ್ಬಿನ ಗದ್ದೆಗೆ ಆವರಿಸಿದ ತಕ್ಷಣ ಸ್ಥಳದಲ್ಲಿದ್ದ ರೈತರು ಮದ್ದೂರು ಅಗ್ನಿಶಾಮಕ ಠಾಣೆಗೆ ದೂರು ನೀಡಿದ್ದಾರೆ.

ಅಗ್ನಿಶಾಮಕ ದಳ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದರು. ಆದರೂ ಸಹ 4 ಎಕರೆ ಕಬ್ಬು ಬೆಂಕಿಗೆ ಆಹುತಿಯಾಗಿದೆ. ಅಕ್ಕಪಕ್ಕದ ಜಮೀನಿನಲ್ಲಿ ಬೆಳೆದುನಿಂತಿದ್ದ ಕಬ್ಬಿಗೆ ಗದ್ದೆಗೆ ಬೆಂಕಿ ತಗುಲದಂತೆ ಎಚ್ಚರ ವಹಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ಕಾಂಗ್ರೆಸ್‌ನಿಂದ ಮೈಷುಗರ್ ಅಧ್ಯಕ್ಷರಿಗೆ ಅಭಿನಂದನೆ

ಸಿ.ಡಿ.ಗಂಗಾಧರ್ ಅಧ್ಯಕ್ಷತೆಯಲ್ಲಿ ಮಾದರಿ ಕಾರ್ಖಾನೆಯಾಗಲಿದೆ

ಮಂಡ್ಯ,ಮಾ.3– ಮೈಷುಗರ್‌ನ ನೂತನ ಅಧ್ಯಕ್ಷರಾಗಿರುವ ಸಿ.ಡಿ.ಗಂಗಾಧರ್ ಅವರಿಗೆ ಕಾರ್ಖಾನೆಯ ಸಮಸ್ಯೆಗಳ ಅರಿವಿದೆ. ಅವರ ಅಧಿಕಾರದ ಅವಧಿಯಲ್ಲಿ ಮೈಷುಗರ್ ಕಾರ್ಖಾನೆಯನ್ನು ಮಾದರಿಯನ್ನಾಗಿಸುವ ಜತೆಗೆ ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಹೆಸರು ತಂದು ಕೊಡಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮೈಷುಗರ್ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಅವರು, ಸಿ.ಡಿ.ಗಂಗಾಧರ್ ಅವರು ಪಕ್ಷಕ್ಕೆ ಮಾಡಿದ ಸೇವೆ ಪರಿಗಣಿಸಿ ಸರ್ಕಾರ ಅವರನ್ನು ಗುರುತಿಸಿದೆ. ರಾಜ್ಯದ ಪ್ರತಿಷ್ಠಿತ ಕಾರ್ಖಾನೆಗಳಲ್ಲಿ ಒಂದಾದ ಮೈಷುಗರ್ ಏಷ್ಯಾ ಖಂಡದಲ್ಲೇ 2ನೇ ಕಾರ್ಖಾನೆ ಎಂಬ ಖ್ಯಾತಿ ಪಡೆದಿತ್ತು. ಇದೀಗ ಕಾರ್ಖಾನೆಗೆ ನೂತನ ಅಧ್ಯಕ್ಷರಾಗಿರುವ ಸಿ.ಡಿ.ಗಂಗಾಧರ್ ಸಾಮಾನ್ಯ ರೈತ ಕುಟುಂಬದಿಂದ ಬಂದವರು ಎಂದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಂಡಹಳ್ಳಿ ಮಂಜುನಾಥ್ ಮಾತನಾಡಿದರು.


ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮೈಷುಗರ್ ನೂತನ ಅಧ್ಯಕ್ಷ ಸಿ.ಡಿ.ಗಂಗಾಧರ್, ಪಕ್ಷ ಕಟ್ಟುವ ಸವಾಲಿಗಿಂತಲೂ ಕಾರ್ಖಾನೆ ಮುನ್ನಡೆಸುವುದು ಅತ್ಯಂತ ಸವಾಲಿನ ಕೆಲಸ. ಎಲ್ಲರ ಸಹಕಾರದೊಂದಿಗೆ ಇತಿಹಾಸವುಳ್ಳ ಮೈಷುಗರ್ ಕಾರ್ಖಾನೆಯನ್ನು ಮಾದರಿಗೊಳಿಸುವ ಮೂಲಕ ಅದರ ಗತ ವೈಭವ ಮರುಕಳಿಸುವೆ. ಕೆಆರ್‌ಎಸ್ ಅಣೆಕಟ್ಟೆ ನಂತರ ಮೈಸೂರು ಮಹಾರಾಜರು ಕೋಲ್ಮನ್ ಸಹಕಾರದೊಂದಿಗೆ ಮೈಷುಗರ್ ಕಾರ್ಖಾನೆ ನಿರ್ಮಿಸಿದರು. ಬಳಿಕ ಜಿಲ್ಲೆಯ ಜಿ.ಮಾದೇಗೌಡ, ಎಂ.ಲಿಂಗಯ್ಯ, ನಾಗೇಗೌಡ, ಶಿವಾನಂದ, ಎಂ.ಬಿ.ಶ್ರೀಕಾಂತ್, ರಾಜಣ್ಣ ಇತರರ ಶ್ರಮದಿಂದ ಕಾರ್ಖಾನೆ ಚೆನ್ನಾಗಿ ನಡೆಯಿತು ಎಂದರು. ವೇದಿಕೆಯಲ್ಲಿ ಶ್ರೀರಂಗಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್. ರಮೇಶ್, ಪಾಂಡವಪುರ ಪುರಸಭೆ ಮಾಜಿ ಅಧ್ಯಕ್ಷ ಡಿ.ಹುಚ್ಚೇಗೌಡ, ಸೋನಿಯಾ ಬ್ರಿಗೇಡ್ ಜಿಲ್ಲಾಧ್ಯಕ್ಷೆ ವೀಣಾ ಶಂಕರ್, ಜಿಲ್ಲಾ ಮಾಧ್ಯಮ ಸಂಯೋಜಕ ಎನ್.ಕೃಷ್ಣೇಗೌಡ, ಮುಖಂಡರಾದ ಉಮ್ಮಡಹಳ್ಳಿ ನಾಗೇಶ್, ನಾಗಭೂಷಣ್, ಸುಂಡಹಳ್ಳಿ ಮಂಜುನಾಥ್ ಇತರರಿದ್ದರು.



ಮೈಷುಗರ್‌ನ ಅಧ್ಯಕ್ಷ ಸಿ.ಡಿ.ಗಂಗಾಧರ್ ಅವರನ್ನು ಅಭಿನಂದಿಸುತ್ತಿರುವುದು.

ಇಂದು ಗಂಗಾಧರ್ ಅಧಿಕಾರ ಸ್ವೀಕಾರ

ಮಂಡ್ಯ: ಮೈಷುಗರ್ ನೂತನ ಅಧ್ಯಕ್ಷರಾಗಿರುವ ಸಿ.ಡಿ.ಗಂಗಾಧರ್ ಅವರ ಅಧಿಕಾರ ಸ್ವೀಕಾರ ಹಾಗೂ ಆಡಳಿತ ಕಚೇರಿ ಉದ್ಘಾಟನೆ ಕಾರ್ಯಕ್ರಮವು ಮಾ.4ರಂದು ಮಧ್ಯಾಹ್ನ 12ರಿಂದ 1ರವರೆಗೆ ನಡೆಯಲಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೀಗಾಗಿ ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರು, ಮುಂಚೂಣಿ ಘಟಕದ ಅಧ್ಯಕ್ಷರು, ಉಸ್ತುವಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಆಗಮಿಸಬೇಕು ಎಂದು ಕೆ.ಆರ್.ಪೇಟೆ ಉಸ್ತುವಾರಿ ಸಿ.ಆರ್.ರಮೇಶ್ ಹಾಗೂ ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಸಂಯೋಜಕ ಎನ್.ಕೃಷ್ಣೇಗೌಡ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.



ಮೈಸೂರಿನ ವಿಜಯನಗರದಲ್ಲಿರುವ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್. ವೆಂಕಟೇಶ್, ಪ್ರೊ.ಶಂಕರೇಗೌಡ, ಪ್ರೊ.ಗಿರೀಶ್ ಮತ್ತು ಎಂಎಲ್‌ಸಿ ಮರಿತಿಬ್ಬೇಗೌಡ ಅಭಿನಂದಿಸಿದರು.

ಒಂದನೇ ಪುಟದಿಂದ

ಸೀತಾರಾಮ್‌ಗೆ ಗೌರವ ಡಾಕ್ಟರೇಟ್

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರಧಾನ ಮಾಡಿದರು. ವಿವಿಧ ವಿಷಯಗಳಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿದ 100 ಅಭ್ಯರ್ಥಿಗಳಿಗೆ ಪಿ.ಹೆಚ್‌ಡಿ ನೀಡಲಾಯಿತು. ಇವರಲ್ಲಿ 45 (ಶೇ.45) ಮಹಿಳೆಯರು ಹಾಗೂ 55 ಪುರುಷರಾಗಿದ್ದಾರೆ.

ಇದೇ ವೇಳೆ 252 ಅಭ್ಯರ್ಥಿಗಳಿಗೆ 436 ಪದಕ ಹಾಗೂ 266 ಬಹುಮಾನಗಳನ್ನು ನೀಡಲಾಯಿತು. ಇವರಲ್ಲಿ 174 ಮಹಿಳೆಯರಾಗಿದ್ದಾರೆ. ಜೊತೆಗೆ 6,144 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಪ್ರಧಾನ ಮಾಡಲಾಗಿದ್ದು, ಇವರಲ್ಲಿ 4,039(ಶೇ.65.74) ಮಹಿಳೆಯರಾಗಿದ್ದಾರೆ. 26,009 ಅಭ್ಯರ್ಥಿಗಳಿಗೆ ಸ್ನಾತಕ ಪದವಿ ಪ್ರಧಾನ ಮಾಡಲಾಗಿದ್ದು, ಇವರಲ್ಲಿ 15,910(ಶೇ.61.17) ಮಹಿಳೆಯರಾಗಿದ್ದಾರೆ. ಒಟ್ಟಾರೆ ಪದವಿ ಪಡೆದವರಲ್ಲಿ ಮಹಿಳೆಯರೇ ಮೇಲ್ಗೈ ಸಾಧಿಸಿದ್ದಾರೆ. ದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಮೈಸೂರು ವಿವಿಯಲ್ಲಿ ದೇಶ–ವಿದೇಶದ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಹೆಚ್ಚು ಅಂಕ ಪಡೆದು ಉತ್ತೀರ್ಣರಾದವರು ಇಂದು ಪದವಿ ಪಡೆದರು. ವಿವಿಯ ಸಮ ಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜೊತೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರು, ವಿವಿಧ ನಿಕಾಯಗಳ ಡೀನ್‌ಗಳು ವೇದಿಕೆಯಲ್ಲಿ ಆಸೀನರಾಗಿದ್ದರು.

ಆತ್ಮಹತ್ಯೆಗೆ ಶರಣಾದ ತಾಯಿ

ಬೇಗೂರು ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ವನರಾಜು, ಸಬ್‌ಇನ್ಸ್‌ಪೆಕ್ಟರ್ ಸೋಮಶೇಖರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಜ್ಯೋತಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಜಿಗುಪ್ಸೆಗೊಂಡಿದ್ದರು. ಈ ಕಾರಣದಿಂದಲೇ ಅವರು ಮಕ್ಕಳನ್ನು ಕೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಪ್ರತ್ಯೇಕ ಅಪಘಾತ: ಮೂವರ ಸಾವು

ಅಂಗಡಿಗೆ ಹೋಗಿ ಟೀ ಕುಡಿದು ವಾಪಸ್ಸಾಗುವಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಅಪಘಾತವೆಸಗಿದ ಕಾರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ನರಸಿಂಹರಾಜ ಸಂಚಾರ ಠಾಣೆಗೆ ಇನ್ಸ್‌ಪೆಕ್ಟರ್ ರೇಖಾಬಾಯಿ ಅವರು ತಿಳಿಸಿದರು.

ಪ್ರಕರಣ 2: ಮೈಸೂರಿನ ಕೆಆರ್‌ಎಸ್ ರಸ್ತೆ ಜಿಲ್ಲಾಸ್ಪತ್ರೆ ಬಳಿ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದು ಬಿ.ಎಂ.ಶ್ರೀನಗರ ನಿವಾಸಿಗಳಾದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಚಿನ್ ಹಾಗೂ ಪ್ಲಂಬರ್ ಕೆಲಸ ಮಾಡಿಕೊಂಡಿದ್ದ ಜನಾರ್ಧನ್ ಮೃತಪಟ್ಟಿದ್ದಾರೆ. ಶನಿವಾರ ರಾತ್ರಿ ಸುಮಾರು 11 ಗಂಟೆ ಸಮಯದಲ್ಲಿ ಜನಾರ್ಧನ್ ಹಾಗೂ ಸಚಿನ್ ಯಮಹಾ ಬೈಕ್‌ನಲ್ಲಿ ರಾಯಲ್ ಇನ್ ಜಂಕ್ಷನ್ ಕಡೆಯಿಂದ ಬಿ.ಎಂ. ಶ್ರೀನಗರಕ್ಕೆ ಬರುವಾಗ ಜಿಲ್ಲಾಸ್ಪತ್ರೆ ಬಳಿ ನಿಯಂತ್ರಣ ಕಳೆದುಕೊಂಡು ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದು ನಂತರ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದೆ. ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಬಾನು ತಿಳಿಸಿದ್ದಾರೆ. ಬೈಕ್ ಚಾಲಿಸುತ್ತಿದ್ದ ಜನಾರ್ಧನ್ ಹಾಗೂ ಹಿಂಬದಿ ಸವಾರ ಸಚಿನ್ ನೆರೆಹೊರೆಯವರಾಗಿದ್ದು ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಇಬ್ಬರಿಗೂ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ಹೆಲ್ಮೆಟ್ ಧರಿಸಿದ್ದರೆ ಪ್ರಾಣಾಪಾಯದಿಂದ ಪಾರಾಗುವ ಸಾಧ್ಯತೆ ಇತ್ತು ಎಂದು ಪೊಲೀಸ್ ಮೂಲಗಳ ಅಭಿಪ್ರಾಯವಾಗಿದೆ.

'ಗೀತ್ ಗಾತಾ ಚಲ್' ಸಂಗೀತ ಸಂಭ್ರಮ

ಸುಮಧುರ ಕಂಠಸಿರಿಯಿಂದ ಕಲಾರಸಿಕರ ಮನಗೆದ್ದ ವೈದ್ಯರು



ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಭಾನುವಾರ 22ನೇ ಆವೃತ್ತಿಯ 'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಉದ್ಯಮಿ ಜಗನ್ನಾಥ್ ಶೆಣೈ, ಶ್ರೀಮತಿ ಕುಸುಮಾ ಶೆಣೈ, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಗೀತ್ ಗಾತಾ ಚಲ್ ಸಂಸ್ಥಾಪಕ ಡಾ.ಉಮೇಶ್ ಕಾಮತ್, ಉದ್ಯಮಿ ಶ್ಯಾಮ್ ಚೆರಿಯನ್, ಖ್ಯಾತ ವೈದ್ಯ ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ, ಡಾ.ಕುಶಾಲಪ್ಪ, ಡಾ.ನಟಶೇಖರ್ ಮತ್ತಿತರರು ಉಪಸ್ಥಿತರಿದ್ದರು.



ಡಾ.ಕುಶಾಲಪ್ಪ ಮತ್ತು ವರ್ಷಾ ಅವರಿಂದ ಗಾಯನ

ಮೈಸೂರು, ಮಾ.3(ಎಂಕೆ)– ಸಂಗೀತ ರಸಿಕರಿಂದ ಕಿಕ್ಕಿರಿದು ತುಂಬಿದ್ದ ಕಲಾಮಂದಿರದಲ್ಲಿ ಹೃನ್ಮನ ಗೆದ್ದ 'ಗೀತ್ ಗಾತಾ ಚಲ್–22' ಸಂಗೀತ ಸಂಭ್ರಮ... ಶಿಳ್ಳೆ–ಚಪ್ಪಾಳೆ ಝೇಂಕಾರದೊಂದಿಗೆ ಕನ್ನಡ–ಹಿಂದಿ ಹಳೆಯ ಚಲನಚಿತ್ರ ಗೀತೆಗಳ ಯುಗಳ ಗಾನ... ವೈದ್ಯರ ಸುಮಧುರ ಕಂಠಸಿರಿಗೆ ಮನಸೋತ ಪ್ರೇಕ್ಷಕ ಸಮೂಹ...!

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಭಾನುವಾರ ನಡೆದ 22ನೇ ಆವೃತ್ತಿಯ 'ಗೀತ್ ಗಾತಾ ಚಲ್' ಸಂಗೀತ ಸಂಭ್ರಮ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಸಂಗೀತ ಅಭಿಮಾನಿಗಳ ಮನ ಗೆದ್ದಿತು. ಮುಸ್ಸಂಜೆಯ ಸುಂದರ–ಸುಮಧುರ ಸಮಯದಲ್ಲಿ ಸಂಗೀತವೆಂಬ ತಂಗಾಳಿ ಕೇಳುಗರ ಮನಸ್ಸಿಗೆ ಮುದ ನೀಡಿತು.

ಸಂಗೀತದ ಅಪಾರ ಅಭಿಮಾನದೊಂದಿಗೆ ವೃತ್ತಿಪರ ಗಾಯಕರಿಗೂ ಕಡಿಮೆ ಇಲ್ಲವೆಂಬಂತೆ ಕನ್ನಡ–ಹಿಂದಿ ಭಾಷೆಯ ಪ್ರಸಿದ್ಧ ಹಳೆ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಿದ ವೈದ್ಯರ ತಂಡ, ಸುಶ್ರಾವ್ಯವಾಗಿ ಹಾಡುವ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರರಾದರು. ವಿಘ್ನೇಶ್ವರ ಸ್ತುತಿ ಹಾಡುವ ಮೂಲಕ ಡಾ.ಪ್ರೀತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೊದಲಿಗೆ ಡಾ.ಸುಷ್ಮಾ, ತುಳಸಿದಾಸರ 'ಶ್ರೀ ರಾಮಚಂದ್ರ ಕೃಪಾಲು ಭಜನಾ' ಸ್ಮರಣೆ ಹಾಗೂ ಭರತನಾಟ್ಯದೊಂದಿಗೆ ಹಳೆಯ ಸುಮಧುರ ಗೀತೆಗಳ 'ಗೀತ್ ಗಾತಾ ಚಲ್–22' ವಿದ್ಯುಕ್ತವಾಗಿ ಆರಂಭ ಪಡೆಯಿತು. ಡಾ.ನಟಶೇಖರ್ 'ಅಪಾರ ಕೀರ್ತಿ ಗಳಿಸಿ ಮೆರೆದ ಭವ್ಯ ನಾಡಿದು' ಹಾಡಿನೊಂದಿಗೆ ಕನ್ನಡ ನಾಡಿನ ಹಿರಿಮೆ–ಗರಿಮೆಯನ್ನು ಸ್ಮರಿಸಿದರು. ಬಳಿಕ ಡಾ.ಕುಶಾಲಪ್ಪ 'ಸರ್ಫರೋಶ್' ಹಿಂದಿ ಚಿತ್ರದ 'ಹೋಶ್ವಾಲೋನ್ ಕೋ' ಹಾಡನ್ನು ಹಾಡಿ ರಂಜಿಸಿದರೆ, ಡಾ.ಗಣೇಶ್ ರಾವ್ 'ಶಂಕರ್ ಗುರು' ಚಿತ್ರದ 'ಚೆಲುವೆಯಾ ನೋಟ ಚೆನ್ನ' ಹಾಡನ್ನು ಹಾಡುವ ಮೂಲಕ ಕನ್ನಡಾಭಿಮಾನ ಮೆರೆದರು.

ಡಾ.ಸೋಮನಾಥ್ ವಾಸುದೇವ್ 'ಜುಮ್ರೂ' ಹಿಂದಿ ಚಿತ್ರದ 'ಕೋಯಿ ಹಮ್ದಂ ನಾ ರಹಾ' ಹಾಡನ್ನು ಹಾಡಿದರೆ, ಡಾ.ಸ್ನೇಹಶ್ರೀ 'ಸಂಗೊಳ್ಳಿ ರಾಯಣ್ಣ'(1967ರ ಚಿತ್ರ) ಚಿತ್ರದ 'ಬೆಳ್ಳನ ಬೆಳಗಾಯಿತು' ಹಾಡನ್ನು ಹಾಡಿ ಗಮನ ಸೆಳೆದರು. ಡಾ.ಸುಷ್ಮಾ 'ಗುಡ್ಡಿ' ಹಿಂದಿ ಚಿತ್ರದ 'ಬೋಲೆ ರೆ ಪಾಪಿ' ಹಾಡನ್ನು ಹಾಡಿದರೆ, ಡಾ.ನಟಶೇಖರ್ ಮತ್ತು ಅಪೂರ್ವ 'ಕಾಶ್ಮೀರ ಕಿ ಕಲಿ' ಹಿಂದಿ ಚಿತ್ರದ 'ಇಶಾರೋ ಇಶಾರೋ ಮೇ' ಹಾಡನ್ನು ಸುಮಧುರವಾಗಿ ಹಾಡಿದರು. ಹಾಗೆಯೇ ಡಾ.ಅಮೃತ 'ಆನಂದ್' ಹಿಂದಿ ಚಿತ್ರದ 'ನಾ ಜಿಯಾ ಲಗೇ ನಾ', ಡಾ.ಪ್ರೀತಿ 'ಜಾಗಟೆ ರಹೋ' ಹಿಂದಿ ಚಿತ್ರದ 'ಜಾಗೋ ಮೋಹನ್ ಪ್ಯಾರೆ', ವಿಶೇಷ ಆಹ್ವಾನಿತ ಗಾಯಕಿ ಆಗಿ ಭಾಗವಹಿಸಿದ್ದ ಶ್ರೀಮತಿ ರೂಪಿಕಾ ವಿಕ್ರಂ ಮುತ್ತಣ್ಣ 'ಟೈಟಾನಿಕ್' ಇಂಗ್ಲಿಷ್ ಚಿತ್ರ 'ಮೈ ಹಾರ್ಟ್ ವಿಲ್ ಗೋ ಆನ್' ಹಾಡನ್ನು ಹಾಡುವ ಮೂಲಕ ಮೆಚ್ಚುಗೆ ಪಡೆದರು.

ಗಾಯಕಿ ವರ್ಷಾ 'ಎರಡು ಕನಸು' ಚಿತ್ರದ 'ಪೂಜಿಸಲೆಂದೇ ಹೂಗಳ ತಂದೆ', ಡಾ.ರವಿಕುಮಾರ್ 'ತುಮ್ಸ ನಹಿಂ ದೇಖಾ' ಹಿಂದಿ ಚಿತ್ರದ 'ಜವಾನಿಯಾ ಯೇ ಮಸ್ತ್', ಡಾ.ಕುಶಾಲಪ್ಪ ಮತ್ತು ವರ್ಷಾ 'ಪೋಸ್ಟ್ ಬಾಕ್ಸ್ ನಂ–999' ಹಿಂದಿ ಚಿತ್ರದ 'ನೀಂದ್ ನಾ ಮುಜ್ಕೋ ಆಯೆ', ಡಾ.ಸೀತಾಲಕ್ಷ್ಮಿ 'ಆಯೇ ದಿನ್ ಬಾಹರ್ ಕೆ' ಹಿಂದಿ ಚಿತ್ರದ 'ಸುನೋ ಸಜ್ನಾ', ಡಾ.ಗಣೇಶ್ ರಾವ್ ಮತ್ತು ಡಾ.ಸ್ನೇಹಶ್ರೀ 'ಕಾಮಿಡಿ ಕಿಂಗ್–ಮೆಹಮೂದ್' ಹಿಂದಿ ಆಲ್ಬಮ್‌ನ 'ಮುತ್ತು ಕೋಡಿ', ಡಾ.ಯು.ಜಿ.ಶೆಣೈ ಮತ್ತು ಡಾ.ಸ್ಪರ್ಶ ಶೆಣೈ 'ಎರಡು ಕನಸು' ಚಿತ್ರ 'ಎಂದೆಂದೂ ನಿನ್ನನ್ನು ಮರೆತು' ಹಾಗೂ 'ಮೇನ್ ಖಿಲಾಡಿ ತು ಅನಾರಿ' ಹಿಂದಿ ಚಿತ್ರದ 'ಚುರಾ ಕೆ ದಿಲ್ ಮೇರಾ', ಅಪೂರ್ವ ನಟಶೇಖರ್ 'ಅನುಪಮಾ' ಹಿಂದಿ ಚಿತ್ರದ 'ಧೀರೆ ಧೀರೆ ಮ್ಯಾಕ್', ಡಾ.ಶ್ಯಾಮ್ ಪ್ರಸಾದ್ 'ಮೆರೆ ಹಮ್ದ ಮೆರೆ ದೋಸ್ತ್' ಹಿಂದಿ ಚಿತ್ರದ 'ನಾ ಜಾ ಕಹಿಂ ಅಬ್ ನಾ ಜಾ', ಗಾಯಕರಾದ ಪೃಥ್ವಿ ಮತ್ತು ರಂಜಿತಾ 'ಪುಟಾಣಿ ಏಜೆಂಟ್–123' ಚಿತ್ರದ 'ಏನೋ ಸಂತೋಷ ಏನೋ ಉಲ್ಲಾಸ' ಹಾಗೂ 'ಯೇ ವಾದ ರಹಾ' ಹಿಂದಿ ಚಿತ್ರದ 'ತು ಹೈ ವಹಿ' ಹಾಡನ್ನು ಹಾಡಿ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಡಾ.ನಟಶೇಖರ್ 'ಮೆಹಬೂಬ' ಹಿಂದಿ ಚಿತ್ರದ 'ಮೇರೆ ನೈನಾ ಸಾವನ್ ಭಡೋನ್', ಡಾ.ಶ್ಯಾಮ್ ಪ್ರಸಾದ್ ಮತ್ತು ಡಾ.ಪ್ರೀತಿ 'ಬಯಲುದಾರಿ' ಚಿತ್ರದ 'ಕನಸಲೂ ನೀನೇ ಮನಸಲೂ ನೀನೆ', ಡಾ.ಸೋಮನಾಥ್ ಮತ್ತು ಡಾ.ಸೀತಾಲಕ್ಷ್ಮಿ 'ಕಸ್ತೂರಿ ನಿವಾಸ' ಚಿತ್ರದ 'ನೀ ಬಂದು ನಿಂತಾಗ', ಡಾ.ರವಿಕುಮಾರ್ ಮತ್ತು ಡಾ.ಸುಷ್ಮಾ 'ಏಕ್ ಮುಸಾಫಿರ್ ಏಕ್ ಹಸಿನಾ' ಹಿಂದಿ ಚಿತ್ರದ 'ಆಪ್ ಯುನ್ ಅಗರ್ ಹಮ್ಸೆ', ಡಾ.ಅಮೃತಾ ಮತ್ತು ಡಾ.ಸೂರಜ್ 'ಮಿಸ್ಟರ್ ಅಂಡ್ ಮಿಸಸ್–55' ಹಿಂದಿ ಚಿತ್ರದ 'ಜೇನ್ ಕಹಾನ್ ಮೇರಾ', ಡಾ.ನಟಶೇಖರ್ ಮತ್ತು ಡಾ.ಕುಶಾಲಪ್ಪ 'ಶೋಲೆ' ಹಿಂದಿ ಚಿತ್ರದ 'ಯೇ ದೋಸ್ತಿ' ಹಾಡನ್ನು ಹಾಡಿ ರಸದೌತಣ ನೀಡಿದರು. ಅಂತಿಮವಾಗಿ ರಾಷ್ಟ್ರಗೀತೆ ಮೂಲಕ 22ನೇ ಆವೃತ್ತಿಯ 'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮ ಸಂಪನ್ನಗೊಂಡಿತು.

ಶುಭ ಹಾರೈಕೆ: ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ 'ಗೀತ್ ಗಾತಾ ಚಲ್–22' ಸಂಗೀತ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, ಕಳೆದ 22 ವರ್ಷಗಳಿಂದ ಯಶಸ್ವಿಯಾಗಿ 'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬಂದಿರುವುದು ಅತ್ಯಂತ ಶ್ಲಾಘನೀಯ. ನಾನು ಕೂಡ ವೈದ್ಯರ ಹಾಡನ್ನು ಕೇಳಲು ಉತ್ಸುಕದಿಂದ ಕಾಯುತ್ತಿದ್ದೇನೆ. 'ಗೀತ್ ಗಾತಾ ಚಲ್' ಇದೇ ರೀತಿ ಮುಂದುವರೆಯಲಿ ಎಂದು ಶುಭ ಹಾರೈಸಿದರು.

ಉದ್ಯಮಿಯೂ ಆದ 'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮದ ಪೋಷಕರಾದ ಡಾ.ಜಗನ್ನಾಥ್ ಶೆಣೈ ಮಾತನಾಡಿ, ನನಗೆ ಹೊರಗಡೆ ಯಾರೇ ಸಿಕ್ಕರೂ 'ಗೀತ್ ಗಾತಾ ಚಲ್' ಕಾರ್ಯಕ್ರಮ ಯಾವಾಗ ಎಂದು ಕೇಳುತ್ತಾರೆ. ನೀವು ಆಯೋಜನೆ ಮಾಡುತ್ತಿರಲ್ವಾ ಎಂದು ಸಹ ಕೇಳುತ್ತಾರೆ. 'ಗೀತ್ ಗಾತಾ ಚಲ್' ಯಶಸ್ಸಿಗೆ ಡಾ.ಉಮೇಶ್ ಕಾಮತ್, ಡಾ.ಕುಶಾಲಪ್ಪ, ಡಾ.ಗಣೇಶ್ ರಾವ್, ಡಾ.ನಟಶೇಖರ್ ಅವರನ್ನೊಳಗೊಂಡ ತಂಡದ ಕೊಡುಗೆ ಕಾರಣ ಎಂದು ಶ್ಲಾಘಿಸಿದರಲ್ಲದೆ ಪ್ರೇಕ್ಷಕರು ಚಪ್ಪಾಳೆ ಮೂಲಕ ವೈದ್ಯರನ್ನು ಪ್ರೋತ್ಸಾಹಿಸಬೇಕು ಎಂದು ಕೋರಿದರು.

ಉದ್ಯಮಿ ಶ್ರೀಮತಿ ಕುಸುಮಾ ಶೆಣೈ, ಗೀತ್ ಗಾತಾ ಚಲ್ ಸಂಸ್ಥಾಪಕ ಡಾ.ಉಮೇಶ್ ಕಾಮತ್, ಖ್ಯಾತ ವೈದ್ಯ ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ, ನಿರೂಪಕ ಅಫ್ತಾಬ್, ಡಾ.ರೂಪ ಮತ್ತಿತರರು ಉಪಸ್ಥಿತರಿದ್ದರು.

ಡಾ.ಜಗನ್ನಾಥ್ ಶೆಣೈ ಆಫ್ರಿಕಾ ಮಧ್ಯದಲ್ಲಿ ಹರಿಯುವ 'ನೈಲ್' ನದಿಯಂತೆ...!

'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಮಾತನಾಡಿ, ಕೆಲ ದಿನಗಳ ಹಿಂದೆಯಷ್ಟೇ ಶ್ರೀ ಕೃಷ್ಣಗಾನಸಭಾ ವತಿಯಿಂದ ನನಗೆ 'ಕಲಾ ಪೋಷಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆದರೆ ನಿಜವಾಗಿ ಕಲೆಗಳನ್ನು ಪೋಷಣೆ ಮಾಡುತ್ತಿರುವುದು ಉದ್ಯಮಿಗಳಾದ ಡಾ.ಜಗನ್ನಾಥ್ ಶೆಣೈ. ಕಲಾ ಪೋಷಣೆ ಜೊತೆಗೆ ಎಲ್ಲಾ ಬಗೆಯ ಸೇವಾ ಕಾರ್ಯಗಳ ಮೂಲಕ ಕೊಡುಗೈ ದಾನಿಯಾಗಿದ್ದಾರೆ. ಆಫ್ರಿಕಾ ಮಧ್ಯದಲ್ಲಿ ಹರಿಯುವ 'ನೈಲ್' ನದಿಯಂತೆ ಅವರ ಸೇವೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ.ಕುಶಾಲಪ್ಪ ಅವರಿಗೆ 'ನಾದಬ್ರಹ್ಮ ಧನ್ವಂತರಿ' ಅಭಿನಂದನೆ...

ಕಳೆದ 7 ವರ್ಷಗಳಿಂದ 'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮದ ಮುಂದಾಳತ್ವ ವಹಿಸಿ, ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವ ಡಾ.ಕುಶಾಲಪ್ಪ ಅವರಿಗೆ 'ನಾದಬ್ರಹ್ಮ ಧನ್ವಂತರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಉದ್ಯಮಿ ಶ್ಯಾಮ್ ಚೆರಿಯನ್ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ

ಪದವಿ,ಪದಕ, ರ್‍ಯಾಂಕ್ ಪಡೆದರಷ್ಟೆ ಸಾಲದು ಒಳ್ಳೆಯ ಮಾನವನಾಗಬೇಕು

ಘಟಿಕೋತ್ಸವ ಭಾಷಣದಲ್ಲಿ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಸಲಹೆ



ಘಟಿಕೋತ್ಸವ ಭಾಷಣ ಮಾಡಿದ ಡಾ.ಸಿ.ಎನ್.ಮಂಜುನಾಥ್

ಮೈಸೂರು, ಮಾ.3(ಬಿಎಲ್‌ಯು) ವಿದ್ಯಾರ್ಥಿಗಳು ಪದವಿ, ಪದಕ ಹಾಗೂ ರ್‍ಯಾಂಕ್‌ಗಳನ್ನು ಪಡೆದರಷ್ಟೆ ಸಾಲದು, ಜ್ಞಾನಾರ್ಜನೆ ಜೊತೆಗೆ ಒಳ್ಳೆಯ ಸಂಸ್ಕೃತಿ, ವಿವೇಕ, ಮಾನವೀಯತೆ, ಉತ್ತಮ ನಡವಳಿಕೆ ರೂಢಿಸಿಕೊಳ್ಳಬೇಕು ಎಂದು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಇಂದು ನಡೆದ 104 ನೇ ಘಟಿಕೋತ್ಸವ ಸಮಾರಂಭದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಅವರು, ಒಬ್ಬ ವ್ಯಕ್ತಿ ಪ್ರತಿಭೆ ಹಾಗೂ ಕೌಶಲ್ಯಗಳನ್ನು ಪಡೆದರಷ್ಟೆ ಸಾಲದು, ಒಳ್ಳೆಯ ಮಾನವನಾಗಬೇಕು ಎಂದು ಸಲಹೆ ನೀಡಿದರು.

ದೇಶವನ್ನು ಉನ್ನತ ಮಜಲಿಗೆ ಕೊಂಡೊಯ್ಯಬೇಕೆಂಬ ದೃಷ್ಟಿಯಿಂದ ಕಾಲೇಜು ನಿರ್ಮಾಣವಾಗಿದೆ. ಆದರೆ ದುರದೃಷ್ಟವಶಾತ್ ಅನೇಕ ಸುಶಿಕ್ಷಿತ ಜನರೇ ಇಂದು ಕಾನೂನು ಬಾಹಿರ ಸಂಗತಿಗಳಲ್ಲಿ, ಅಪರಾಧಗಳಲ್ಲಿ, ದ್ವೇಷ ಹಾಗೂ ವಿನಾಶಕಾರಿ ವಿಚಾರಗಳಲ್ಲಿ ತೊಡಗಿರುವುದು ಆತಂಕಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಬುದ್ಧಿವಂತಿಕೆಯನ್ನು ರಚನಾತ್ಮಕ ಉದ್ದೇಶಗಳಿಗೆ ಬಳಸಬೇಕು ಎಂದು ಡಾ.ಮಂಜುನಾಥ್ ಹೇಳಿದರು.

ಡಿಜಿಟಲ್ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮ ಉನ್ನತೀಕರಣ ಜ್ಞಾನ ಮತ್ತು ಚಿಂತನೆಗಳ ಪ್ರಸರಣದಲ್ಲಿ ಕ್ರಾಂತಿಯನ್ನೆ ಮಾಡಿದೆ. ಒಂದು ಮೊಬೈಲ್ ಪೋನ್ ಅಥವಾ ಸ್ಮಾರ್ಟ್ ಫೋನ್ ಇದ್ದರೆ ಇಡೀ ಜಗತ್ತೆ ನಿಮ್ಮ ಕೈಯಲ್ಲಿದ್ದ ಹಾಗೆ. ಇವತ್ತು 3 ಜಿ, 4 ಜಿ ಸೌಲಭ್ಯಗಳ ಬಗ್ಗೆ ಮಾತನಾಡುತ್ತೇವೆ. ಆದರೆ ಈ ಜಿ ಗಳು ನಮಗೆ ಹೊಸತಲ್ಲ. ಮೊದಲ ಜಿ ಎಂದರೆ ಗುರು, ಎರಡನೇ ಜಿ ಅಂದರೆ ದೇವರು, ಮೂರನೆ ಜೀ ಅಂದರೆ ಗೈಡ್ ಅಥವಾ ಮಾರ್ಗದರ್ಶಿ, ಇನ್ನು ನಾಲ್ಕನೆ ಜಿ ಅಂದರೆ ಗೂಗಲ್ ಆಗಿದೆ ಎಂದರು.

ಡಿಜಿಟಲ್ ತಂತ್ರಜ್ಞಾನ ಮಾಹಿತಿಯನ್ನು ಅಂತರ್ಜಾಲದ ಮೂಲಕ ಪಡೆಯಬೇಕು. ಆದರೆ ಯಾವುದೇ ಕಾರಣಕ್ಕೂ ಕಾಗದ ಹಾಗೂ ಲೇಖನಿ ಬಳಕೆ ಬಿಡಬಾರದು. ಇದರಿಂದ ಗಳಿಸಿಕೊಂಡ ಜ್ಞಾನ ಮನಸ್ಸಿನಲ್ಲಿ ತಂಗುತ್ತದೆ. ಅಮೇರಿಕಾ, ಜಪಾನ್ ದೇಶದಲ್ಲಿ ನಡೆದಿರುವ ಸಂಶೋಧನೆ ಇದನ್ನು ಸ್ಪಷ್ಟಪಡಿಸುತ್ತದೆ ಆದ ಕಾರಣ ಹೊಸ ತಲೆಮಾರಿನವರು ಪುಸ್ತಕ ಓದುವ ಅಭ್ಯಾಸ ಮಾಡಿಕೊಳ್ಳಬೇಕು ಎಂದು ಡಾ.ಮಂಜುನಾಥ್ ಸಲಹೆ ನೀಡಿದರು.

ಸ್ಪರ್ಧಾತ್ಮಕ ಜಗತ್ತಾದ ಕಾರಣ ಅವಕಾಶಗಳಿಗೆ ಮಿತಿ ಇದೆ. ಇದರಿಂದ ಮನಸ್ಸನ್ನು ಮುಕ್ತವಾಗಿಟ್ಟುಕೊಂಡ ನೌಕರಿ ಸೇರಲು ಸರ್ಕಾರಿ ಉದ್ಯೋಗವಾದರೂ ಸರಿ, ಖಾಸಗಿ ಉದ್ಯೋಗವಾದರೂ ಸರಿ ಎಂಬ ಮನಸ್ಥಿತಿ ಇಟ್ಟುಕೊಳ್ಳಿ. ಸೋಲಿನ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲಿಲ್ಲವೆಂದು ವಿಷಾದಕ್ಕೆ ಒಳಗಾಗಬೇಡಿ. ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಎಂದು ಡಾ.ಮಂಜುನಾಥ್ ಧೈರ್ಯ ತುಂಬಿದರು.



ಸಮಾರಂಭದಲ್ಲಿ ನೆರೆದಿದ್ದ ಸಭಿಕರು

ಮೈಸೂರು ವಿಶ್ವವಿದ್ಯಾನಿಲಯದ ಗತವೈಭವ ಮರುಕಳಿಸಬೇಕಿದೆ

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಆಶಯ



ಮೈಸೂರು, ಮಾ.3(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಗತವೈಭವ ಮರುಕಳಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವನ್ನು ಮತ್ತಷ್ಟು ಸದೃಢ ಮಾಡಬೇಕಿದೆ ಎಂದು ವಿಶ್ವವಿದ್ಯಾನಿಲಯದ ಸಮ ಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಇಂದು ನಡೆದ 104 ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯ ಎಂಬ ಖ್ಯಾತಿ ಪಡೆದಿರುವ ಮೈಸೂರು ವಿಶ್ವವಿದ್ಯಾನಿಲಯ ದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದು. ಆದರೆ ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಗತವೈಭವಕ್ಕೆ ಧಕ್ಕೆಯಾಗುತ್ತಿದೆ. ಈ ವಿಚಾರವನ್ನು ಕಳೆದ ಬಾರಿಯ ಘಟಿಕೋತ್ಸವ ಸಮಾರಂಭದಲ್ಲಿ ಕೂಡ ಹೇಳಿದ್ದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಗತವೈಭವನ್ನು ಮರುಕಳಿಸಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದ್ದು, ಹಲವು ಯೋಜನೆ ರೂಪಿಸಿದೆ ಎಂದು ಡಾ.ಸುಧಾಕರ್ ತಿಳಿಸಿದರು.

ಈ ಬಾರಿಯ ಘಟಿಕೋತ್ಸವದಲ್ಲಿ ಶೇಕಡ 61 ರಷ್ಟು ಮಹಿಳೆಯರು ಪದವಿ ಪಡೆಯುವುದರ ಮೂಲಕ ಮೇಲುಗೈ ಸಾಧಿಸಿದ್ದಾರೆ. ಈ ಮೂಲಕ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮದೆ ಆದ ಛಾಪು ಮೂಡಿಸುತ್ತಿದ್ದಾರೆ. ಮಹಿಳಾ ಸಬಲೀಕರಣ ಮಾಡುವ ಉದ್ದೇಶದಿಂದ ಮಹಿಳೆಯರ ಸಾಧನೆಗೆ ಮತ್ತಷ್ಟು ಶಕ್ತಿ ತುಂಬಬೇಕಿದೆ ಎಂದರು.

ಇಂದು ಪದವಿ ಪಡೆದವರಿಗೆ ಉದ್ಯೋಗವಕಾಶ ನೀಡಬೇಕಿದೆ. ಇದಕ್ಕಾಗಿ ನಮ್ಮ ಸರ್ಕಾರ ಹಲವು ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳುತ್ತಿದೆ. ಅಮೇರಿಕಾದ ವಾಧ್ವಾನಿ ಫೌಂಡೇಷನ್ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ 3 ಬಿಲಿಯನ್ ಡಾಲರ್ ನೀಡುತ್ತಿದ್ದು, ಆ ಸಂಸ್ಥೆ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ. ಜೊತೆಗೆ ನಿವೃತ್ತ ಐಎಎಸ್ ಅಧಿಕಾರಿಗಳು ಸ್ಥಾಪನೆ ಮಾಡಿರುವ ಕ್ರಿಸ್ ಸಂಸ್ಥೆ ಜೊತೆ ಕೂಡ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ. ಕೌಶಲ್ಯಾಧಾರಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಆ ಸಂಸ್ಥೆ ಸರ್ಕಾರಕ್ಕೆ ಹಲವು ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿದೆ ಎಂದು ತಿಳಿಸಿದರು.

ಪದವಿ ಪಡೆದವರು ಬದುಕು ಕಟ್ಟಿಕೊಳ್ಳಲು ಕೌಶಲ್ಯಾಧಾರಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಇಂತಹ ಹಲವು ಯೋಜನೆಗಳನ್ನು ಸರ್ಕಾರ ರೂಪಿಸುತ್ತಿದೆ ಬೆಂಗಳೂರು ನಂತರ ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಇದನ್ನು ಅನುಷ್ಠಾನ ಮಾಡಲಾಗುವುದು ಎಂದು ಡಾ.ಸುಧಾಕರ್ ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಭಾನುವಾರ ನಡೆದ 104ನೇ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಗಮಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಹಾಗೂ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಶ್ರೀನಿವಾಸ್ ಅಭಿನಂದನೆ ಸಲ್ಲಿಸಿದರು.

ಚಿನ್ನದ ಪದಕಕ್ಕೆ ಮುತ್ತಿಟ್ಟುಕೊಂಡ ಧೀರ ವನಿತೆಯರ ಓದು, ಸಾಧನೆ ವಿಶಿಷ್ಟ

ಮೈಸೂರು, ಮಾ.3(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಭಾನುವಾರ ನಡೆದ 104ನೇ ಘಟಿಕೋತ್ಸವದಲ್ಲಿ ಅತೀ ಹೆಚ್ಚು ಚಿನ್ನದ ಪದಕ ಪಡೆದವರು ಯುವತಿಯರೇ ಆಗಿದ್ದಾರೆ. ಗರಿಷ್ಠ ಅಂಕ ಗಳಿಸಿ ಚಿನ್ನದ ಪದಕ ಪಡೆಯಲು ಪಟ್ಟ ಶ್ರಮ, ಅನುಸರಿಸಿದ ಮಾರ್ಗ ವಿಶಿಷ್ಟವಾಗಿದೆ. ಒಬ್ಬೊಬ್ಬ ಯುವತಿಯರು ಒಂದೊಂದು ರೀತಿಯ ವೈಶಿಷ್ಟ್ಯತೆ ಮೆರೆದಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಭಾನುವಾರ ನಡೆದ ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಯರು. (ಎಡದಿಂದ) ಪೂಜಾ, ಮೇಘನಾ, ತೇಜಸ್ವಿನಿ, ಅಜಿತಾ ಗುಲ್ವೇರಿಯಾ, ಜೈನಾ ಎಂ.ಹರನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸರ್ಕಾರಿ ಶಾಲಾ ಕಾಲೇಜಿನಲ್ಲಿ ಓದಿ ಗರಿಷ್ಠ ಚಿನ್ನದ ಪದಕ



ಇಂದು ಬಹಳಷ್ಟು ಪೋಷಕರು ಸರ್ಕಾರಿ ಶಾಲಾ–ಕಾಲೇಜಿಗಿಂತ ಖಾಸಗಿ ಕಾನ್ವೆಂಟ್‌ಗಳಲ್ಲಿನ ಇಂಗ್ಲಿಷ್ ಮಾಧ್ಯಮಗಳಲ್ಲಿ ಮಕ್ಕಳನ್ನು ಸೇರಿಸಲು ಹಾತೊರೆಯುತ್ತಾರೆ. ಆದರೆ ಇಲ್ಲೊಬ್ಬ ವಿದ್ಯಾರ್ಥಿನಿ ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಕಾಲೇಜಿನ ತನಕ ಸರ್ಕಾರಿ ಶಾಲೆಯಲ್ಲೆ ಓದಿ, ಅದರಲ್ಲೂ ಕನ್ನಡ ಭಾಷೆಯಲ್ಲಿ ವ್ಯಾಸಂಗ ಮಾಡುವ ಮೂಲಕ ಇಂದು ಸ್ನಾತಕೋತ್ತರ ಪದವಿಯಲ್ಲಿ 10 ಚಿನ್ನದ ಪದಕ ಪಡೆದಿದ್ದಾರೆ.

ಈಕೆಯ ಹೆಸರು ತೇಜಸ್ವಿನಿ. ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲೂಕು ಸತ್ತೆಗಾಲ ಗ್ರಾಮದವಳು. ಚಿಕ್ಕ ವಯಸ್ಸಿನಲ್ಲಿ ತಂದೆ–ತಾಯಿ ಕಳೆದುಕೊಂಡ ಈಕೆ ಓದಿನಲ್ಲಿ ಹಿಂದೆ ಬೀಳಲಿಲ್ಲ. 10ನೇ ತರಗತಿ ತನಕ ತಲಕಾಡು ಗ್ರಾಮದಲ್ಲಿ ಓದಿದ ಈಕೆ ಪಿಯುಸಿಯನ್ನು ಮಳವಳ್ಳಿಯಲ್ಲಿ ಮುಗಿಸಿದಳು. ತರುವಾಯ ಪದವಿ ಪಡೆಯಲು ಮೈಸೂರು ನಗರಕ್ಕೆ ಬಂದು ಹಾಸ್ಟೆಲ್‌ನಲ್ಲಿ ವ್ಯಾಸಂಗ ಮುಂದುವರೆಸಿದಳು.

ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿ ಪಡೆದ ನಂತರ ತೇಜಸ್ವಿನಿ ಈಗ ಎಂ.ಎ. ಕನ್ನಡದಲ್ಲಿ 10 ಚಿನ್ನದ ಪದಕ ಹಾಗೂ 4 ನಗದು ಬಹುಮಾನ ಗಳಿಸಿದ್ದಾಳೆ. ಚಿಕ್ಕ ವಯಸ್ಸಿನಲ್ಲೆ ತಂದೆ–ತಾಯಿ ಕಳೆದುಕೊಂಡ ನನಗೆ ಶೈಕ್ಷಣಿಕವಾಗಿ ಮುಂದುವರೆಯಲು ಯಾರ ಬೆಂಬಲವಿರಲಿಲ್ಲ. ಸರ್ಕಾರಿ ಶಾಲಾ–ಕಾಲೇಜಿನಲ್ಲೆ ಓದಿದೆ. ಸಾಧಿಸುವ ಛಲವಿದೆ. ಮುಂದೆ ಐಎಎಸ್ ಅಧಿಕಾರಿ ಆಗುವ ಹಂಬಲವಿದೆ. ಈ ನಿಟ್ಟಿನಲ್ಲಿ ಚೆನ್ನಾಗಿ ಓದಿ ಗುರಿ ತಲುಪುತ್ತೇನೆ ಎಂದು ತೇಜಸ್ವಿನಿ ಹೇಳಿದರು.

ದೃಷ್ಟಿಹೀನತೆಯಿದ್ದರೂ ಚಿನ್ನದ ಪದಕ ಪಡೆದ ಧೀರೆ



ಮೈಸೂರಿನ ಶ್ರೀರಾಂಪುರ ಬಡಾವಣೆ ವಾಸಿ ಅನಘ ಹುಟ್ಟಿನಿಂದ ಅಂಧೆ. ಕಣ್ಣು ಕತ್ತಲಾದರೂ ಓದಿನಲ್ಲಿ ಮಾತ್ರ ಹಿಂದೆ ಉಳಿಯಲಿಲ್ಲ. ಮೈಸೂರಿನ ರಂಗರಾವ್ ಮೆಮೋರಿಯಲ್ ಅಂಧ ಶಾಲೆಯಲ್ಲೆ ವ್ಯಾಸಂಗ ಮಾಡಿದ ಈಕೆ ಬ್ರೈಲ್ ಲಿಪಿ ಮೂಲಕ ಓದು ಕರಗತ ಮಾಡಿಕೊಂಡು ಈಗ ಒಂದು ಚಿನ್ನದ ಪದಕ ಪಡೆದಿದ್ದಾರೆ.

ನಾನು ಅಂಧೆ ಎಂದು ಕುಗ್ಗದೆ ಓದಿದೆ. ನನ್ನ ತಂದೆ–ತಾಯಿ ಬೆಂಬಲವಾಗಿ ನಿಂತರು. ಶಿಕ್ಷಕರು ನನಗೆ ಪ್ರೇರಣೆ ನೀಡಿದರು. ಈಗ ಚಿನ್ನದ ಪದಕ ಪಡೆದಿರುವ ನಾನು ಮತ್ತಷ್ಟು ಸಾಧನೆ ಮಾಡುವ ಛಲವಿದೆ. ಪಿಹೆಚ್.ಡಿ ಪಡೆದು ಪ್ರಾಧ್ಯಾಪಕಿಯಾಗುವ ಗುರಿ ಇದೆ ಎಂದು ಅನಘ ಹೇಳಿದರು.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ವಿದ್ವತ್ ಪಡೆದಿದ್ದೇನೆ. ಅಮೇರಿಕಾದ ಯಾಮಿ ಎಂಬ ವಿದ್ಯಾರ್ಥಿನಿಗೆ ಆನ್‌ಲೈನ್ ಮೂಲಕವೇ ಸಂಗೀತ ಪಾಠ ಮಾಡುತ್ತೇನೆ. ಈ ಮೂಲಕ ಸಂಗೀತದಲ್ಲೂ ಸಾಧನೆ ಮಾಡುವ ಆಸೆ ಇದೆ ಎಂದು ಅನಘ ತಿಳಿಸಿದರು.

ಭವಿಷ್ಯದ ಸುಂದರ ನಗರವಾಗಿಸುವ ಕನಸು ಇದೆ



ತಾಂತ್ರಿಕ ಶಿಕ್ಷಣ ಎಂದರೆ ಬಹಳಷ್ಟು ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆ. ಆದರೆ ಮೈಸೂರಿನ ಸಿದ್ದಾರ್ಥ ಬಡಾವಣೆಯ ವಾಸಿ ಎ.ಪೂಜಾ ಅವರಿಗೆ ತಾಂತ್ರಿಕ ಶಿಕ್ಷಣವೆ ಅಚ್ಚುಮೆಚ್ಚು. ಎಂ.ಟೆಕ್‌ನಲ್ಲಿ 16 ಚಿನ್ನದ ಪದಕ ಪಡೆದಿರುವ ಪೂಜಾ ಹರ್ಬನ್ ಅಂಡ್ ರೀಜಿನಲ್ ಪ್ಲಾನ್ ವಿಷಯ ಆಯ್ಕೆ ಮಾಡಿಕೊಂಡಿದ್ದರು. ನಾನು ಆಯ್ಕೆ ಮಾಡಿಕೊಂಡಿರುವ ವಿಷಯದಲ್ಲಿ ಓದುವುದಕ್ಕಿಂತ ಪ್ರಾಜೆಕ್ಟ್ ಕೆಲಸವೇ ಹೆಚ್ಚಿರುತ್ತದೆ. ಈ ನಿಟ್ಟಿನಲ್ಲಿ ಶ್ರಮವಹಿಸಿ ಸ್ಟುಡಿಯೋದಲ್ಲಿ ಹಲವು ಪ್ರಕಾರದಲ್ಲಿ ಜ್ಞಾನಾರ್ಜನೆ ಮಾಡಿದೆ. ಇದರ ಫಲವಾಗಿ ನನಗೆ 16 ಚಿನ್ನದ ಪದಕ ಬಂದಿದೆ ಎಂದು ಪೂಜಾ ತಿಳಿಸಿದರು.

ದಿನ ಕಳೆದಂತೆ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಗರ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಭವಿಷ್ಯದ ಸುಂದರ ನಗರವಾಗಿ ಯೋಜನೆ ರೂಪಿಸುವುದು ನನ್ನ ಗುರಿ. ಇದಕ್ಕಾಗಿ ಕೆಪಿಎಸ್‌ಸಿ ಮೂಲಕ ಸರ್ಕಾರದ ನಗರ ಯೋಜನಾ ಇಲಾಖೆಗೆ ಸೇರಿ ಸಾಧನೆ ಮಾಡಬೇಕೆಂದಿರುವೆ ಎಂದು ಪೂಜಾ ಹೇಳಿದರು.

ಯೋಗ ಶಿಕ್ಷಕಿಯಾಗಿ ಮೈಸೂರಿಗೆ ಬಂದು ಪದಕ ಪಡೆದ ವನಿತೆ



ಈಕೆಯ ಹೆಸರು ಅಜಿತ ಗುಲೇರಿಯಾ. ಮೂಲತಃ ಹಿಮಾಚಲ ಪ್ರದೇಶದ ಧರ್ಮಶಾಲೆಯವರು. ಯೋಗದಲ್ಲಿ ಜ್ಞಾನಾರ್ಜನೆ ಮಾಡಿರುವ ಈಕೆ ಮೈಸೂರಿಗೆ ಯೋಗ ಪಾಠ ಮಾಡಲು ಬಂದರು. ಯೋಗ ಶಿಕ್ಷಣ ನೀಡುವುದನ್ನು ಅರೆಕಾಲಿಕ ವೃತ್ತಿಯಾಗಿ ಮಾಡಿಕೊಂಡು ಎಂ.ಎ ತರ್ಕಶಾಸ್ತ್ರದಲ್ಲಿ ವ್ಯಾಸಂಗ ಮಾಡಿದ್ದಾರೆ. ಈಗ ಅಜಿತ 7 ಚಿನ್ನದ ಪದಕ ಹಾಗೂ 4 ನಗದು ಬಹುಮಾನ ಪಡೆದಿದ್ದಾರೆ.

ದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕೂಡ ಒಂದಾಗಿದೆ. ಮೈಸೂರು ಸುಂದರವಾದ ನಗರವಾಗಿದ್ದು, ಯೋಗಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ಆದ ಕಾರಣ ಯೋಗ ಪಾಠ ಹಾಗೂ ವ್ಯಾಸಂಗಕ್ಕಾಗಿ ಮೈಸೂರು ಆಯ್ಕೆ ಮಾಡಿಕೊಂಡೆ. ಈಗ ತರ್ಕಶಾಸ್ತ್ರದಲ್ಲಿ ಪಿಹೆಚ್‌ಡಿ ಪಡೆದು ಪ್ರಾಧ್ಯಾಪಕಿ ಆಗುವ ಕನಸು ಹೊತ್ತಿದ್ದೇನೆ ಎಂದು ತಿಳಿಸಿದರು.

ಪ್ರಾಧ್ಯಾಪಕಿಯಾಗಿ ಪಾಠ ಮಾಡುವ ಆಸೆ



ಮೂಲತಃ ತುರುವೆಕೆರೆಯವರಾದ ಮೇಘನಾ ಎಂ.ಎ ರಸಾಯನ ಶಾಸ್ತ್ರದಲ್ಲಿ 15 ಚಿನ್ನದ ಪದಕ ಪಡೆದಿದ್ದಾರೆ. ಐಎಎಸ್, ಕೆಎಎಸ್ ಅಧಿಕಾರಿಗಿಂತ ಪಿಹೆಚ್.ಡಿ ಪಡೆದು ಪ್ರಾಧ್ಯಾಪಕಿಯಾಗುವ ಆಸೆ ಇದೆ. ಈ ಮೂಲಕ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಆಸೆ ಹೊತ್ತಿದ್ದೇನೆ. ಈ ನಿಟ್ಟಿನಲ್ಲಿ ನಿರಂತರ ಶ್ರಮ ವಹಿಸಿ ಓದುತ್ತೇನೆ ಎಂದು ಮೇಘನಾ ತಿಳಿಸಿದರು.

ಯೂ ಟ್ಯೂಬ್‌ನ್ನು ಸಮರ್ಥವಾಗಿ ಬಳಸಿಕೊಂಡೆ



ಯೂ ಟ್ಯೂಬ್‌ನಲ್ಲೆ ಬಹಳಷ್ಟು ವಿದ್ಯಾರ್ಥಿಗಳು ತಲ್ಲೀನರಾಗಿರುತ್ತಾರೆ. ಸಿನಿಮಾ ಸೇರಿದಂತೆ ಮನೋರಂಜನೆ ವೀಕ್ಷಣೆಗೆ ದಾಸರಾಗಿರುತ್ತಾರೆ. ಆದರೆ ಎಂ.ಎ. ಅರ್ಥಶಾಸ್ತ್ರದಲ್ಲಿ 8 ಪದಕ ಪಡೆದಿರುವ ಜೈನಾ ಎಂ.ಹರನ್ ತಾವು ಓದುವ ವಿಷಯಗಳ ಕುರಿತಂತೆ ಯೂ ಟ್ಯೂಬ್‌ನಲ್ಲೆ ಮಾಹಿತಿ ಪಡೆಯುತ್ತಿದ್ದರು. ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪುಸ್ತಕಗಳ ಜೊತೆಗೆ ಕೆಲವು ಕ್ಲಿಷ್ಟಕರ ವಿಚಾರಗಳ ಬಗ್ಗೆ ಯೂ ಟ್ಯೂಬ್‌ನಲ್ಲೆ ಮಾಹಿತಿ ಪಡೆಯುತ್ತಿದ್ದೆ. ದಿನಕ್ಕೆ ಕನಿಷ್ಠ ಮೂರ್‍ನಾಲ್ಕು ಗಂಟೆ ಓದುತ್ತಿದ್ದೆ. ಆದರೆ ಎಂದಿಗೂ ಯೂ ಟ್ಯೂಬ್‌ನಲ್ಲಿರುವ ಮನೋರಂಜನಾ ದೃಶ್ಯಗಳತ್ತ ಕಣ್ಣಾಯಿಸಲಿಲ್ಲ ಎಂದು ಜೈನಾ ತಿಳಿಸಿದರು.

ಸಾಮಾಜಿಕ ಮಾಧ್ಯಮ ನಮಗೆ ಕೆಲವು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ. ವಿದ್ಯಾರ್ಥಿಗಳು ತಮ್ಮ ಓದಿಗೆ ಎಷ್ಟು ಬೇಕೊ ಅಷ್ಟನ್ನು ಪಡೆಯಬೇಕು. ಅದು ಬಿಟ್ಟು ಅದರಲ್ಲೇ ತಲ್ಲೀನರಾಗಿ ಸಮಯ ವ್ಯರ್ಥ ಮಾಡಬಾರದು ಎಂದು ಜೈನಾ ಕಿವಿಮಾತು ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಅವರ ಪುತ್ರ ಹರ್ಷವರ್ಧನ್, ಕಾಡಾ ಮಾಜಿ ಅಧ್ಯಕ್ಷ ಶಿವಲಿಂಗಯ್ಯ ಅಭಿನಂದಿಸಿದರು

ಬಿಜೆಪಿ ಚಾಮುಂಡೇಶ್ವರಿ ನಗರ ಪ್ರಧಾನ ಕಾರ್ಯದರ್ಶಿ ನೇಮಕ



ಮೈಸೂರು, ಮಾ.3– ಮೈಸೂರಿನ ಚಾಮುಂಡೇಶ್ವರಿ ನಗರ ಮಂಡಲ ಭಾರತೀಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆರ್.ಸೋಮಶೇಖರ್ ಅವರನ್ನು ಮಾಜಿ ಶಾಸಕ ಹಾಗೂ ಮೈಸೂರು ನಗರ ಬಿಜೆಪಿ ಅಧ್ಯಕ್ಷರಾದ ಎಲ್.ನಾಗೇಂದ್ರ ನೇಮಕ ಮಾಡಿದ್ದಾರೆ.

ಲಲಿತ ಕಲೆಗಳಿಂದ ಮಾನವನ ತಲ್ಲಣ ದೂರ

ಮೈಸೂರು, ಮಾ.3(ಎಸ್‌ಪಿಎನ್)– ಸಮಾಜದಲ್ಲಿ ಹಲವು ರೀತಿ ತಲ್ಲಣಗಳು ಉಂಟಾಗುತ್ತಿವೆ. ಜನರು ಇವೆಲ್ಲಾ ತಲ್ಲಣಗಳಿಂದ ಹೊರಬೇಕಾದರೆ ಲಲಿತ ಕಲೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ರಂಗಾಯಣ ನಿವೃತ್ತ ಉಪ ನಿರ್ದೇಶಕ ಮ.ಗು.ಸದಾನಂದಯ್ಯ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ(ವೀಣೆ ಶೇಷಣ್ಣ) ಭವನದಲ್ಲಿ ಶ್ರೀ ಗುರು ಮೈಸೂರು ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಧಾರಾವಾಡ ಚಿಲಿಪಿಲಿ ಸಂಗೀತ ಸಾಂಸ್ಕೃತಿಕ ಕಲಾ ಅಕಾಡೆಮಿ ಆಯೋಜಿಸಿದ್ದ ವಚನ ಗಾಯನ ಪಿತಾಮಹ ಪಂ. ಪಂಚಾಕ್ಷರ ಗವಾಯಿಗಳ 132ನೇ ಹಾಗೂ ಪದ್ಮಭೂಷಣ ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ 110ನೇ ಜಯಂತೋತ್ಸವದ ಅಂಗವಾಗಿ 'ಶ್ರೀ ಗುರುವಚನ ಪ್ರಭ ಗಾನ ಶ್ರೀ ಹಾಗೂ ವಚನ ಗಾನೋತ್ಸವ'ವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಗೊಂದಲಮಯ ಜೀವನ ಸಾಗಿಸುತ್ತಿರುವವರಿಗೆ ಕಲೆ, ಸಾಹಿತ್ಯ, ಸಂಗೀತ ಮೂಲಕ ಜಾಗೃತಿ ಮೂಡಿಸಿದರೆ, ಸ್ವಾಸ್ಥ್ಯ ಜೀವನ ನಡೆಸಲು ಸಾಗುವಾಗುತ್ತದೆ ಎಂದ ಅವರು, ಸಂಗೀತ, ನೃತ್ಯ ಹಾಗೂ ಇತರೆ ಲಲಿತ ಕಲೆಗಳ ಚಟುವಟಿಕೆಗಳು ಸಮಾಜದಲ್ಲಿಲ್ಲದಿದ್ದರೆ ಜಗತ್ತು ಹುಚ್ಚರ ಸಂತೆಯಾಗುತ್ತಿತ್ತು ಎಂದು ತಿಳಿಸಿದರು.



ವಚನ ಗಾಯನ ಪಿತಾಮಹ ಪಂ. ಪಂಚಾಕ್ಷರ ಗವಾಯಿಗಳ 132ನೇ ಹಾಗೂ ಪದ್ಮಭೂಷಣ ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ 110ನೇ ಜಯಂತೋತ್ಸವದ ಅಂಗವಾಗಿ 'ಶ್ರೀ ಗುರುವಚನ ಪ್ರಭ ಗಾನ ಶ್ರೀ ಹಾಗೂ ವಚನ ಗಾನೋತ್ಸವ'ದಲ್ಲಿ ವಚನಗಾಯನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಧಾರಾವಾಡದ ಕವಿಚ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಅವರು, ಲಲಿತಾ ಮಹಾವಿದ್ಯಾಲಯ ಪ್ರತಿಭಾ ಅನ್ವೇಷಣೆಯ ಷಡ್ಜ ಪರೀಕ್ಷೆಯಲ್ಲಿ ಆರ್.ಚಂದನ್, ಗುರುದೀಪ್, ಮುರುಳಿ, ಮನ್ವಾರ್ ಮೂರ್ತಿ, ಸಿದ್ದರಾಜು, ಧೀಮಂತ್ ಹಾಗೂ ರಿಷಭ ಪರೀಕ್ಷೆಯಲ್ಲಿ ಜಿ.ತ್ರಿಶಾ, ಪೂರ್ವಿ ಬಿದನೂರು, ಗಾಂಧಾರ ಪರೀಕ್ಷೆಯಲ್ಲಿ ಅಭಿನಯ್ ಭಾರದ್ವಜ್, ಪಂಚಮ ಬಿದನೂರು ವಿದ್ಯಾರ್ಥಿಗೆ ಪ್ರಮಾಣ ಪತ್ರವನ್ನು ವಿತರಿಸಿದರು.

ಎಸ್‌ಜಿಪಿ ಸಂಗೀತಾ ಸಭಾ ಗೌರವಾಧ್ಯಕ್ಷ ಮ.ವಿ.ರಾಮಪ್ರಸಾದ್ ಮಾತನಾಡಿ, ವಚನ ಗಾಯನಗಳ ಪಿತಾಮಹ ಪಂ.ಪಂಚಾಕ್ಷರ ಗವಾಯಿಗಳ 132ನೇ ಜಯಂತಿ ಹಾಗೂ ಪದ್ಮಭೂಷಣ ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ 110ನೇ ಜಯಂತಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳಲ್ಲಿ ಕಲೆ ಕುರಿತು ಜಾಗೃತಿ ಹಾಗೂ ಸಾಧಕರ ಸ್ಮರಣೆ ಮಾಡಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಈ ವೇಳೆ ರಾಜ್ಯಮಟ್ಟದ ವಚನ ಗಾಯನ ಸ್ಪರ್ಧೆಯಲ್ಲಿ ವಿಜೇತರಾದ ಗದಗದ ಮಲ್ಲೇಶಹೂಗಾರ, ರಾಹುಲ ರಾಠೋಡ, ಹುಬ್ಬಳ್ಳಿಯ ಶಿವಸ್ವಾಮಿ, ಮೈಸೂರಿನ ಬಿ.ಆರ್.ಮನೋಜ, ಟಿ.ಎಚ್.ದೇವರಾಜ್ ಅವರಿಗೆ ಬಹುಮಾನ ವಿತರಿಸಲಾಯಿತು. ಧಾರವಾಡದ ಡಾ.ಸುಮಿತ್ರಾ ಕಾಡದೇವರ, ರಾಜು ಕುಲಕರ್ಣಿ, ನಗರ ಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್, ಕಲಬುರಗಿ ಬಂಡಯ್ಯಶಾಸ್ತ್ರಿ ದಾನಿದತ್ತಿ ನೀಡಿದ್ದಾರೆ.

ಜಿಲ್ಲೆಯ ಎಲ್ಲೆಡೆ ಪೋಲಿಯೋ ಯಶಸ್ವಿ

ಮಡಿಕೇರಿಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ಚಾಲನೆ



ಮಡಿಕೇರಿಯ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧಕ ಆಸ್ಪತ್ರೆಯ ಮಕ್ಕಳ ಲಸಿಕಾ ವಿಭಾಗದಲ್ಲಿ ಶಿಶುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ಚಾಲನೆ ನೀಡಿದರು.

ಮಡಿಕೇರಿ, ಮಾ.3–ಜಿಲ್ಲೆಯ ಎಲ್ಲೆಡೆ ಭಾನುವಾರ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಮಡಿಕೇರಿಯ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧಕ ಆಸ್ಪತ್ರೆಯ ಮಕ್ಕಳ ಲಸಿಕಾ ವಿಭಾಗದಲ್ಲಿ (ಜಿಲ್ಲಾಸ್ಪತ್ರೆ) ಶಿಶುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮಕ್ಕಳಿಗೆ ವಿಕಲತೆ ತಪ್ಪಿಸುವ ದೃಷ್ಟಿಯಿಂದ ಮುಂಜಾಗ್ರತೆಯಿಂದ 1995 ರಿಂದ ಪೋಲಿಯೋ ಲಸಿಕೆ ಹಾಕಲಾಗುತ್ತಿದೆ. ಆ ನಿಟ್ಟಿನಲ್ಲಿ ಎಲ್ಲರೂ ಸಹಕರಿಸುವಂತೆ ಮನವಿ ಮಾಡಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ವಿಶಾಲ್ ಕುಮಾರ್ ಮಾತನಾಡಿ, 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹನಿ ಹಾಕಿಸಬೇಕು. ಯಾವುದೇ ಕಾರಣಕ್ಕೂ ಹಿಂಜರಿಕೆ ಬೇಡ ಎಂದು ಸಲಹೆ ನೀಡಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ ಮಾತನಾಡಿ, ಭಾರತ ವಿಶ್ವದಲ್ಲಿ ಈಗಾಗಲೇ ಪೋಲಿಯೋ ಮುಕ್ತ ರಾಷ್ಟ್ರವಾಗಿದೆ. ಆದರೂ ಹತ್ತಿರದ ರಾಷ್ಟ್ರಗಳಲ್ಲಿ ಪೋಲಿಯೋ ಕಾಣಿಸಿಕೊಂಡಿರುವುದರಿಂದ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್ ಮಾತನಾಡಿ, ಪೋಲಿಯೋ ಹನಿ ಹಾಕಿಸುವುದರಿಂದ ಮಕ್ಕಳಿಗೆ ಅಂಗ ವಿಕಲತೆ ಬರುವುದಿಲ್ಲ. ಆದ್ದರಿಂದ ಕಡ್ಡಾಯವಾಗಿ ಪೋಲಿಯೋ ಹಾಕಿಸಬೇಕು. ಇದರಿಂದ ಉತ್ತಮ ಸಮಾಜ ಕಟ್ಟಲು ಸಾಧ್ಯ. ಹಿಂದೆ ಎಷ್ಟೇ ಬಾರಿ ಪೋಲಿಯೋ ಹನಿ ಹಾಕಿಸಿದ್ದರೂ, ಐದು ವರ್ಷದೊಳಗಿನ ಮಗುವಿಗೆ ಪೋಲಿಯೋ ಹಾಕಿಸಬೇಕು. ತಪ್ಪು ಅಭಿಪ್ರಾಯಗಳಿಗೆ ಕಿವಿಗೊಡಬಾರದು ಎಂದು ತಿಳಿಸಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ.ರಾಮಚಂದ್ರ ಕಾಮತ್ ಮಾತನಾಡಿ, ನೆರೆ ರಾಷ್ಟ್ರಗಳಲ್ಲಿ 12 ಮಕ್ಕಳಿಗೆ ಪೋಲಿಯೋ ಕಾಣಿಸಿಕೊಂಡಿರುವುದರಿಂದ ದೇಶದಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದರು. ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಸಭಾಪತಿ ರವೀಂದ್ರ ರೈ, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜ, ಆರ್‌ಸಿಎಚ್ ಅಧಿಕಾರಿ ಡಾ.ಮಧುಸೂದನ, ತಾಲೂಕು ವೈದ್ಯಾಧಿಕಾರಿ ಡಾ.ಚೇತನ್, ಅರವಳಿಕೆ ತಜ್ಞರಾದ ಡಾ.ಧನಂಜಯ ಮೇದಪ್ಪ, ಡಾ.ಸಲ್ಮಾ, ಡಾ.ಹರ್ಷ, ಶ್ರೀನಾಥ್, ಶ್ರೀನಿವಾಸ್, ಪಾಲಾಕ್ಷ, ಭವಾನಿ, ದೇಚಮ್ಮ, ದೇವರಾಜು ಹಾಗೂ ಇತರರು ಉಪಸ್ಥಿತರಿದ್ದರು.

ಮಾಲ್ದಾರೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಾಲನೆ



ಮಾಲ್ದಾರೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಗ್ರಾಪಂ ಉಪಾಧ್ಯಕ್ಷ ಕುಂಞಣ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಿದ್ದಾಪುರ: ಮಾಲ್ದಾರೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಗ್ರಾಪಂ ಉಪಾಧ್ಯಕ್ಷ ಕುಂಞಣ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪೋಲಿಯೋ ಮುಕ್ತ ದೇಶವನ್ನಾಗಿಲು ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹಾಕಿಸಬೇಕು. ಈ ಅಭಿಯಾನದಲ್ಲಿ ಎಲ್ಲಾ ಪಾಲಕರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸುವ ಮೂಲಕ ಭಾಗವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಶಾರುಖ್, ಪ್ರಮುಖರಾದ ವತ್ಸಲ, ವಿದ್ಯಾ, ಕಾಂತಿ, ಸರಸ್ವತಿ, ರಾಜೇಶ್ ಮತ್ತಿತರರು ಇದ್ದರು.

ನಿಟ್ಟೂರಿನಲ್ಲಿ ಲಸಿಕೆ ಕಾರ್ಯಕ್ರಮ



ನಿಟ್ಟೂರು–ಕಾರ್ಮಾಡು ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಗೋಣಿಕೊಪ್ಪ, ಮಾ.3–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ನಿಟ್ಟೂರು ಗ್ರಾಮ ಪಂಚಾಯಿತಿ ವತಿಯಿಂದ ನಿಟ್ಟೂರು–ಕಾರ್ಮಾಡು ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಭಾನುವಾರ ನಡೆದ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಮ್ಮಣಿ ಚಾಲನೆ ನೀಡಿದರು.

ಉಪಾಧ್ಯಕ್ಷ ಚೆಕ್ಕೇರ ಸೂರ್ಯ ಅಯ್ಯಪ್ಪ ಮಾತನಾಡಿ, ಪೋಲಿಯೋ ಲಸಿಕೆ ಹಾಕಿಸಿ ಮಗುವಿನ ಆರೋಗ್ಯ ಕಾಪಾಡಿಕೊಳ್ಳುವಂತೆ ತಿಳಿಸಿದರು.

ಸದಸ್ಯರಾದ ಕಾಟಿಮಾಡ ಶರೀನ್ ಮುತ್ತಣ್ಣ, ಪಡಿಞರಂಡ ಕವಿತಾ ಪ್ರಭು, ಬಾಳೆಲೆ ಸಮುದಾಯ ಆರೋಗ್ಯಾಧಿಕಾರಿ ನಿಯಾಜ್, ಸುರಕ್ಷಾಧಿಕಾರಿ ರೇಷ್ಮಾ, ಅಂಗನವಾಡಿ ಕಾರ್ಯಕರ್ತೆ ಮಾಲಿನಿ ಸತೀಶ್, ಆಶಾ ಕಾರ್ಯಕರ್ತೆ ಲಲಿತಾ ಗಣೇಶ್ ಇದ್ದರು.

ಬೈಕ್ ಡಿಕ್ಕಿ: ಪಾದಚಾರಿ ಸಾವು



ಶಶಿಧರ್

ಗೋಣಿಕೊಪ್ಪ, ಮಾ.3–ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಮೃತಪಟ್ಟಿರುವ ಘಟನೆ ಇಲ್ಲಿನ ಪೊನ್ನಂಪೇಟೆ ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಪಟ್ಟಣದ ಕಾವೇರಿ ಲೇಔಟ್‌ನ ನಿವಾಸಿ ಶಶಿಧರ್ (55) ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿರುವ ಗೋಣಿಕೊಪ್ಪಲಿನ ಪಾಟೀಲ ನಗರದ ಬೈಕ್ ಸವಾರ ಪವನ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಶಶಿಧರ್ ಶನಿವಾರ ರಾತ್ರಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ವೇಗವಾಗಿ ಬಂದ ಬೈಕ್ ಸವಾರ ಪವನ್ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ಇಬ್ಬರು ಗಾಯಗೊಂಡಿದ್ದಾರೆ. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಶಶಿಧರ್ ಮೃತಪಟ್ಟಿದ್ದಾರೆ. ಬೈಕ್ ಸವಾರ ಪವನ್‌ನನ್ನು ಮೈಸೂರಿನ ಆಸ್ಪತ್ರೆವೊಂದಕ್ಕೆ ದಾಖಲಿಸಲಾಗಿದೆ.

ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಡಿಯುವ ನೀರಿಗಾಗಿ ಕಲ್ಲುಬಾಣೆ ಗ್ರಾಮಸ್ಥರ ಪ್ರತಿಭಟನೆ



ಆರ್ಜಿ ಗ್ರಾಪಂ ವ್ಯಾಪ್ತಿಯ ಕಲ್ಲುಬಾಣೆ ಗ್ರಾಮಸ್ಥರು ಸಮರ್ಪಕ ನೀರು ಪೂರೈಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ವಿರಾಜಪೇಟೆ, ಮಾ.3–ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುವಂತೆ ಆಗ್ರಹಿಸಿ ಸಮೀಪದ ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲುಬಾಣೆ ಗ್ರಾಮಸ್ಥರು ಬದ್ರಿಯಾ ಜುಮ್ಮಾ ಮಸೀದಿ ಜಂಕ್ಷನ್ ಎದುರು ಖಾಲಿ ಬಿಂದಿಗೆ ಹಿಡಿದು ಪ್ರತಿಭಟನೆ ನಡೆಸಿದರು.

ಬೇಸಿಗೆ ಉರಿ ಬಿಸಿಲಿನಲ್ಲಿ ಜನರಿಗೆ ಕುಡಿಯುವ ನೀರು ಒದಗಿಸಬೇಕು. ಆದರೆ, ಕಳೆದ ನಾಲ್ಕು ದಿನಗಳಿಂದ ಗ್ರಾಮಸ್ಥರಿಗೆ ನೀರು ಸರಬರಾಜು ಮಾಡಿಲ್ಲ. ಏಕಾಏಕಿ ನೀರು ಸ್ಥಗಿತಗೊಳಿಸಿರುವು ದರಿಂದ ಕುಡಿಯಲು ಮತ್ತು ಅಡುಗೆಗೆ ನೀರು ಇಲ್ಲದಂತಾ ಗಿದೆ. ಇಲ್ಲಿನ ಜನರಿಗೆ ಪಂಚಾಯಿತಿಯಿಂದ ಸರಬರಾಜು ಮಾಡುವ ನೀರು ಹೊರತುಪಡಿಸಿ, ಬೇರೆ ಯಾವುದೇ ನೀರಿನ ಮೂಲಗಳು ಇಲ್ಲದಂತಾಗಿದೆ. ಮನೆಯಲ್ಲಿ ಪುಟ್ಟ ಮಕ್ಕಳು, ವೃದ್ಧರು, ಬಾಣಂತಿಯರಿದ್ದು, ಎರಡು ಮೂರು ದಿನವಾದರೂ ನೀರು ಪೂರೈಕೆ ಮಾಡದೆ ಇರುವುದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಮೂರು ದಿನಗಳ ಹಿಂದೆ ಪಂಚಾಯಿತಿ ವತಿಯಿಂದ ನಡೆಸಿದ ಸಭೆಗೆ ಗ್ರಾಮದ ಎಲ್ಲರೂ ಹಾಜರಾಗದ ಹಿನ್ನೆಲೆಯಲ್ಲಿ ಒಂದೆರಡು ದಿನ ನೀರು ಪೂರೈಕೆ ಮಾಡುವುದು ಬೇಡ ಎನ್ನುವ ಸಂದೇಶ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ ಎಂದು ಪ್ರತಿಭಟನಾಕಾರರು ಗ್ರಾಪಂ ವಿರುದ್ಧ ಆರೋಪಿಸಿದರು.

ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರ ಮನವೊಲಿಸಲು ಮುಂದಾದ ಗ್ರಾಪಂ ಅಧ್ಯಕ್ಷೆ ಫಾತೀಮಾ ಹಾಗೂ ಸದಸ್ಯರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು. ನೀರು ಸರಬರಾಜು ಸ್ಥಗಿತಗೊಳಿಸುವ ಮೊದಲೇ ಮಾಹಿತಿ ನೀಡಿದ್ದರೇ ನೀರನ್ನು ಶೇಖರಣೆ ಮಾಡಿಕೊಳ್ಳಬಹುದಿತ್ತು. ಆದರೆ, ಯಾವುದೇ ಮಾಹಿತಿ ನೀಡದೇ ಏಕಾಏಕಿ ನೀರು ಸ್ಥಗಿತಗೊಳಿಸಿರುವ ಕಾರಣವೇನು? ಎಂದು ಪ್ರಶ್ನಿಸಿದರು.

ನಂತರ ಮಾತನಾಡಿದ ಗ್ರಾಪಂ ಅಧ್ಯಕ್ಷೆ ಪಂಚಾಯಿತಿಯಿಂದ ಕಲ್ಲುಬಾಣೆ ವಾರ್ಡ್‌ಗೆ ಸಂಬಂಧಿಸಿದಂತೆ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ಕರೆಯಲಾಗಿತ್ತು. ಬೆರಳೆಣಿಕೆಯಷ್ಟು ಗ್ರಾಮಸ್ಥರು ಮಾತ್ರ ಸಭೆಯಲ್ಲಿ ಭಾಗವಹಿಸಿದ್ದರು. ನೀರಿನ ಸಂಸ್ಕರಣೆ, ನೈರ್ಮಲ್ಯ, ನೀರಿನ ದರ ಏರಿಕೆ ಕುರಿತು ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಬೇಕಾಗಿತ್ತು. ಆದರೆ, ಸರಿಯಾಗಿ ಗ್ರಾಮಸ್ಥರು ಸಭೆಗೆ ಹಾಜರಾಗಿಲ್ಲ. ಕಲ್ಲುಬಾಣೆಗೆ ನೀರು ಪೂರೈಸುವ ಪೈಪ್‌ಲೈನ್‌ನ ಕಾಮಗಾರಿ ನಡೆಸುತ್ತಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸುವುದಾಗಿ ಪಿಡಿಓ ಪ್ರಮೋದ್ ಭರವಸೆ ನೀಡಿದರು.

ನಂತರ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಬೆಟ್ಟದಲ್ಲಿ ವ್ಯಕ್ತಿಯ ಶವ ಪತ್ತೆ: ಕಾಡಾನೆ ದಾಳಿ ಶಂಕೆ



ಅಪ್ಪಚ್ಚ

ಮಡಿಕೇರಿ, ಮಾ.3–ಕೆಲಸಕ್ಕೆ ತೆರಳಿದ್ದ ವ್ಯಕ್ತಿಯ ಶವ ನಗರದ ಹೊರವಲಯದ ಗಾಳಿಬೀಡು ಗ್ರಾಮದ ನಿಶಾನಿ ಬೆಟ್ಟದಲ್ಲಿ ಭಾನುವಾರ ಪತ್ತೆಯಾಗಿದ್ದು, ಕಾಡಾನೆ ದಾಳಿಯಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಗಾಳಿಬೀಡು ಗ್ರಾಮದ ನಿವಾಸಿ ಅಪ್ಪಚ್ಚ (60) ಅವರ ಶವ ಪತ್ತೆಯಾಗಿದೆ. ಶನಿವಾರ ಕೆಲಸಕ್ಕೆಂದು ಹೋಗಿದ್ದ ಇವರು ರಾತ್ರಿಯಾದರೂ ಮನೆಗೆ ಬಂದಿರಲ್ಲಿಲ್ಲ. ಮನೆಯವರು ಎಷ್ಟೇ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಆದರೆ, ಭಾನುವಾರ ಮುಂಜಾನೆ ನಿಶಾನಿ ಬೆಟ್ಟಕ್ಕೆ ಟ್ರಕ್ಕಿಂಗ್‌ಗೆ ಹೋಗುತ್ತಿದ್ದ ಪ್ರವಾಸಿಗರಿಗೆ ಶವ ಪತ್ತೆಯಾಗಿದೆ. ಕಾಡಾನೆ ದಾಳಿಯಿಂದ ಅಪ್ಪಚ್ಚ ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಶವ ದೊರೆತ ಪ್ರದೇಶದಲ್ಲಿ ಆನೆ ಸಂಚರಿಸಿರುವ ಕುರುಹು ಪತ್ತೆಯಾಗಿದೆ. ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದರು. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಯಂತ್ರಣ ತಪ್ಪಿ ಟಿಸಿಗೆ ಕಾರು ಡಿಕ್ಕಿ

ಮಡಿಕೇರಿ, ಮಾ.3–ಚಾಲಕನ ನಿಯಂತ್ರಣ ತಪ್ಪಿದ ಕಾರು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗೆ ಡಿಕ್ಕಿ ಹೊಡೆದು ಮಗುಚಿಕೊಂಡ ಘಟನೆ ಪೊನ್ನಂಪೇಟೆಯ ಕಾನೂರಿಗೆ ತೆರಳುವ ಮುಗುಟಗೇರಿ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಇದೇ ರಸ್ತೆಯಲ್ಲಿ ತೆರಳುತ್ತಿದ್ದವರೊಬ್ಬರು ಸೆಸ್ಕ್‌ಗೆ ಕರೆ ಮಾಡಿ ವಿದ್ಯುತ್ ಸ್ಥಗಿತಗೊಳಿಸಿ ಕಾರಿನ ಚಾಲಕನನ್ನು ರಕ್ಷಿಸಿದರು. ಕಾರು ಮತ್ತು ವಿದ್ಯುತ್ ಕಂಬಕ್ಕೆ ಹಾನಿಯಾಗಿದ್ದು, ಚಾಲಕ ಅಪಾಯದಿಂದ ಪಾರಾಗಿದ್ದಾರೆ.

ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳಲು 7 ದಿನ ಅವಕಾಶ



ಮಲೆ ಮಹದೇಶ್ವರಸ್ವಾಮಿ ಬೆಟ್ಟದ ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುತ್ತಿರುವ ಭಕ್ತರು.


ಚಾಮರಾಜನಗರ, ಮಾ.3–ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುವ ಭಕ್ತರಿಗೆ ಮಾ.3 ರಿಂದ 10ರ ವರೆಗೆ ಅರಣ್ಯ ಇಲಾಖೆ ಅವಕಾಶ ನೀಡಿದ್ದು, ಪ್ರತಿದಿನ ಬೆಳಗ್ಗೆ 6.30 ರಿಂದ 10.30ರೊಳಗೆ ಕಾಲ್ನಡಿಗೆ ಮೂಲಕ ಹೋಗಲು ತಿಳಿಸಲಾಗಿದೆ.

ರಾಜ್ಯಾದ್ಯಂತ ಅರಣ್ಯ ಪ್ರದೇಶದಲ್ಲಿ ಅನುಮತಿ ಇಲ್ಲದೇ ಟ್ರೆಕ್ಕಿಂಗ್(ಚಾರಣ) ಮಾಡುವುದನ್ನು ನಿಷೇಧಿಸಿ ಅರಣ್ಯ ಸಚಿವರು ಹಿಂದೆ ಆದೇಶ ಹೊರಡಿಸಿದ್ದರು. ಸಚಿವರ ಆದೇಶದಂತೆ ಮಲೆಮಹದೇಶ್ವರ ವನ್ಯಜೀವಿ ವಿಭಾಗದಲ್ಲೂ ಅರಣ್ಯ ಪ್ರದೇಶದಲ್ಲಿ ಟ್ರೆಕ್ಕಿಂಗ್ ಮಾಡುವುದನ್ನು ನಿಷೇಧಿಸಲಾಗಿದೆ. ಈ ವಿಭಾಗದ ಮಹದೇಶ್ವರಬೆಟ್ಟದ ವನ್ಯಜೀವಿ ವಲಯದಿಂದ ನಾಗಮಲೆಗೆ ತೆರಳಲು ಆನ್‌ಲೈನ್ ಮೂಲಕ ನೋಂದಾಯಿಸಿ ನಂತರ ನಾಗಮಲೆಗೆ ತೆರಳಬೇಕಾಗಿತ್ತು. ಆದರೆ, ಮಾ.8ರಂದು ಮಹದೇಶ್ವರಬೆಟ್ಟದಲ್ಲಿ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಇರುವುದರಿಂದ ಸಾರ್ವಜನಿಕರು ಹಾಗೂ ಭಕ್ತರಿಗೆ ತೊಂದರೆಯಾಗುವ ಸಾಧ್ಯತೆ ಪರಿಗಣಿಸಿ ಕಾಲ್ನಡಿಗೆಯಲ್ಲಿ ತೆರಳಲು ಅವಕಾಶ ನೀಡಲಾಗಿದೆ.

ಬೆಳಗ್ಗೆ 6.30ರಿಂದ ಬೆಳಗ್ಗೆ 10.30ರವರೆಗೆ ನಾಲ್ಕು ಗಂಟೆಯೊಳಗೆ ನಾಗಮಲೆಗೆ ಕಾಲ್ನಡಿಗೆಯಲ್ಲಿ ಹೋಗಲು ಅವಕಾಶ ನೀಡಲಾಗಿದ್ದು, ನಂತರ ನಾಗಮಲೆಯಿಂದ ವಾಪಸ್ ಸಂಜೆ 5.30ರೊಳಗೆ ಕಡ್ಡಾಯವಾಗಿ ಭಕ್ತರು ಮಹದೇಶ್ವರಬೆಟ್ಟಕ್ಕೆ ಹಿಂತಿರುಗಬೇಕು. ಯಾವುದೇ ವಾಹನಗಳಲ್ಲಿ ತೆರಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಯಾವುದೇ ಪ್ಲಾಸ್ಟಿಕ್ ವಸ್ತುಗಳನ್ನು ಅರಣ್ಯದೊಳಗೆ ಹಾಕುವುದಕ್ಕೂ ನಿಷೇಧಿಸಲಾಗಿದೆ. ತಪ್ಪಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಲೆಮಹದೇಶ್ವರ ವನ್ಯಜೀವಿಧಾಮದ ಡಿಸಿಎಫ್ ಡಾ.ಸಂತೋಷ್ ಕುಮಾರ್ ಎಚ್ಚರಿಸಿದ್ದಾರೆ.

ಯುವ ಚಿತ್ರದ ಟೈಟಲ್ ಸಾಂಗ್ ಬಿಡುಗಡೆ



ಯುವ ರಾಜ್‌ಕುಮಾರ್ ನಟನೆಯ 'ಯುವ' ಚಿತ್ರದ ಟೈಟಲ್ ಸಾಂಗ್ ಅನ್ನು ಚಾಮರಾಜನಗರದಲ್ಲಿ ಬಿಡುಗಡೆಗೊಳಿಸಲಾಯಿತು.

ಚಾಮರಾಜನಗರ, ಮಾ.3–ಯುವ ರಾಜ್‌ಕುಮಾರ್ ನಟನೆಯ 'ಯುವ' ಚಿತ್ರದ ಟೈಟಲ್ ಸಾಂಗ್ 'ಒಬ್ಬನೇ ಶಿವ ಒಬ್ಬನೇ' ನಗರದಲ್ಲಿ ಬಿಡುಗಡೆಗೊಳಿಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ 5 ತಾಲೂಕಿನಿಂದ ತಲಾ ಓಬ್ಬ ಅಭಿಮಾನಿಯನ್ನು ಆಯ್ದು ಅವರ ಮೂಲಕ ಹಾಡನ್ನು ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ನೆರೆದಿದ್ದ ಅಭಿಮಾನಿಗಳು ಅಪ್ಪು ಯುವ ಎಂದು ಘೋಷಣೆ ಕೂಗಿದರು.

ರಾಘವೇಂದ್ರ ರಾಜ್‌ಕುಮಾರ್ ಅವರ ಎರಡನೇ ಮಗ ಯುವ ರಾಜ್‌ಕುಮಾರ್ ಅಭಿನಯಿಸಿರುವ ಮೊದಲ ಚಿತ್ರ, ಹೊಂಬಾಳೆ ಫಿಲಂಸ್ ನಿರ್ಮಿಸಿರುವ 'ಯುವ' ಚಿತ್ರದ ಟೈಟಲ್ ಸಾಂಗ್ 'ಒಬ್ಬನೇ ಶಿವ.. ಒಬ್ಬನೇ ಯುವ' ಹಾಡು ಬಿಡುಗಡೆ ಅದ್ಧೂರಿಯಾಗಿ ನಡೆಯಿತು.

ನಟ ಯುವ ರಾಜ್‌ಕುಮಾರ್, ನಿರ್ದೇಶಕ ಆನಂದ್ ಸಂತೋಷ್ ರಾವ್, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್, ಚಿತ್ರ ತಂಡದ ಹಲವರು ಭಾಗವಹಿಸಿದ್ದರು. ಹಾಡು ಬಿಡುಗಡೆಗೂ ಮುನ್ನ, ಯುವ ರಾಜ್‌ಕುಮಾರ್, ಚಾಮರಾಜೇಶ್ವರ ಸ್ವಾಮಿಯ ದರ್ಶನ ಪಡೆದರು.

ಪೋಲಿಯೋದಿಂದ ಮಕ್ಕಳನ್ನು ರಕ್ಷಿಸಿ

• ಪಾಲಕರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ



ಚಾ.ನಗರದ ಜಿಲ್ಲಾಸ್ಪತ್ರೆಯ ಹೆರಿಗೆ ವಿಭಾಗದ ಆವರಣದಲ್ಲಿ ಭಾನುವಾರ ರಾಷ್ಟ್ರೀಯ ಪಲ್ಸ್ ಪೋಲಿಯೋ' ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಕ್ಕಳ ಪೋಲಿಯೋ ಲಸಿಕೆ ಹಾಕಿದರು. ಜಿಲ್ಲಾಧಿಕಾರಿ ಶಿಲ್ಪಾನಾಗ್, ಡಾ.ಚಿದಂಬರ, ಶ್ರೀಕಂಠರಾಜೇ ಅರಸ್, ಡಾ.ಮಂಜುನಾಥ್, ಡಾ.ಮಂಜುನಾಥ್ ಇದ್ದರು.

ಚಾಮರಾಜನಗರ, ಮಾ.3–ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷದೊಳಗಿನ ಪ್ರತಿ ಮಕ್ಕಳಿಗೂ ಪೋಲಿಯೋ ಹನಿ ಹಾಕಿಸಿ ಮಕ್ಕಳನ್ನು ಮಾರಕ ರೋಗದಿಂದ ರಕ್ಷಿಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾಸ್ಪತ್ರೆಯ ಹೆರಿಗೆ ವಿಭಾಗದ ಆವರಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ' ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪೋಲಿಯೋ 30 ವರ್ಷಗಳ ಹಿಂದೆ ಮಕ್ಕಳಿಗೆ ಮಾರಕವಾಗಿ ಪರಿಣಮಿಸಿತ್ತು ಪೋಲಿಯೋ ವೈರಸ್‌ನಿಂದ ಮಕ್ಕಳನ್ನು ರಕ್ಷಿಸಲು ಸರ್ಕಾರ 1995 ರಿಂದ ಪ್ರತಿವರ್ಷ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಹಿಂದೆ ತಾಯಂದಿರು, ಪೋಷಕರು ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಲು ಹಿಂಜರಿಯುತ್ತಿದ್ದರು. ಪ್ರಸ್ತುತ ಜನರು ಜಾಗೃತರಾಗಿದ್ದಾರೆ. ಪ್ರತಿಯೊಬ್ಬರು ತಪ್ಪದೆ ಮಕ್ಕಳಿಗೆ ಪೋಲಿಯೋ ಹಾಕಿಸಬೇಕು ಎಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ರಾಷ್ಟ್ರೀಯ ಪಲ್ಸ್ ಪೋಲಿಯೋ ಅಂಗವಾಗಿ ಜಿಲ್ಲಾದ್ಯಂತ 3 ರಿಂದ 4 ದಿನ ಹಮ್ಮಿಕೊಂಡಿರುವುದರಿಂದ ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಅಂಗನವಾಡಿ ಕೇಂದ್ರ, ಬಸ್ ಹಾಗೂ ರೈಲ್ವೆ ನಿಲ್ದಾಣ ಸೇರಿದಂತೆ ಜನನಿಬಿಡ ಸ್ಥಳಗಳಲ್ಲಿ ಪೋಲಿಯೋ ಹನಿ ಹಾಕಲಾಗುತ್ತದೆ. ಭವಿಷ್ಯದ ಸತ್ಪ್ರಜೆಗಳನ್ನು ರೂಪಿಸುವ ನಿಟ್ಟಿನಲ್ಲಿ 5 ವರ್ಷದೊಳಗಿನ ಯಾವ ಮಗುವು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಭಾರತ ಪೋಲಿಯೋ ಮುಕ್ತ ದೇಶವಾಗಿದ್ದು, 2014 ರಿಂದ ಭಾರತದ ಯಾವುದೇ ಭಾಗದಲ್ಲಿ ಪೋಲಿಯೋ ಕಾಣಿಸಿಕೊಂಡಿಲ್ಲ. ನೆರೆ ದೇಶಗಳಲ್ಲಿ ಪೋಲಿಯೋ ಪ್ರಕರಣಗಳಿರುವುದರಿಂದ ಮುನ್ನೆಚ್ಚರಿಕೆಯಾಗಿ ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗುತ್ತಿದೆ. ಹಿಂದೆ ಎಷ್ಟೇ ಬಾರಿ ಪೋಲಿಯೋ ಹನಿ ಹಾಕಿಸಿದ್ದರೂ ಎಲ್ಲಾ ತಾಯಂದಿರು, ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಡಾ.ಮಂಜುನಾಥ್, ಜಿಲ್ಲಾ ಆರ್.ಸಿ.ಎಚ್.ಅಧಿಕಾರಿ ಡಾ.ಮಂಜುನಾಥ್, ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಪಲ್ಸ್ ಪೋಲಿಯೋ ಜಿಲ್ಲಾ ನೋಡಲ್ ಅಧಿಕಾರಿ ಡಾ.ಜಯರಾಜ್, ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ದುಷ್ಯಂತ್, ನಗರ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಉಮಾರಾಣಿ, ಜಿಲ್ಲಾ ಆರೋಗ್ಯ ಮತ್ತು ಶಿಕ್ಷಣ ಅಧಿಕಾರಿ ದೊರೆಸ್ವಾಮಿ ನಾಯಕ್, ಸರ್ಕಾರಿ ಶುಶ್ರೂಷಕ ಕಾಲೇಜಿನ ಪ್ರಾಂಶುಪಾಲ ಖುದ್ರತ್, ಜಿಲ್ಲಾ ಶುಶ್ರೂಷಕ ಅಧಿಕಾರಿ ಶಾಂತಮ್ಮ, ಲಯನ್ಸ್ ಸಂಸ್ಥೆಯ ಗಿರೀಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪೋಲಿಯೋ ವೈರಸ್ ನೀರು ಮತ್ತು ಆಹಾರದ ಮೂಲಕ ದೇಹವನ್ನು ಸೇರಿ ಪ್ರತಿಯೊಂದು ನರಗಳಿಗೂ ವ್ಯಾಪಿಸಿ ಮಾಂಸ ಖಂಡಗಳು ಶಕ್ತಿ, ಸ್ವಾಧೀನ ಕಳೆದುಕೊಳ್ಳುವಂತೆ ಮಾಡಲಿದೆ. ಪೋಲಿಯೋ ಹನಿ ಹಾಕಿಸಲು ಉದಾಸೀನತೆ ಬೇಡ. ಮಕ್ಕಳನ್ನು ಪೋಲಿಯೋ ರೋಗದಿಂದ ರಕ್ಷಿಸಲು ಕಳೆದ 30 ವರ್ಷಗಳಿಂದ ನಿರಂತರವಾಗಿ ಪೋಲಿಯೋ ಹನಿ ಹಾಕಲಾಗುತ್ತಿದ್ದು, ಜಿಲ್ಲೆಯಲ್ಲಿ ಈ ಬಾರಿ 5 ವರ್ಷದೊಳಗಿನ 65,835 ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಗುರಿ ಹೊಂದಲಾಗಿದೆ.

–ಡಾ.ಚಿದಂಬರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಹಿಂಡಿಮಾರಮ್ಮ ದೇಗುಲದಲ್ಲಿ ಸಾಮೂಹಿಕ ವಿವಾಹ



ಯಳಂದೂರು ತಾಲೂಕಿನ ಅಗರ–ಮಾಂಬಳ್ಳಿ ಗ್ರಾಮದಲ್ಲಿ ಭಾನುವಾರ ನಡೆದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ದಂಪತಿಗಳಿಗೆ ಗಣ್ಯರು ಶುಭ ಕೋರಿದರು.

ಯಳಂದೂರು, ಮಾ.3–ತಾಲೂಕಿನ ಅಗರ–ಮಾಂಬಳ್ಳಿ ಗ್ರಾಮದ ಪ್ರಸಿದ್ಧ ಸಪ್ತಮಾತೃಕೆ ಸಮೇತ ಹಿಂಡಿಮಾರಮ್ಮ ದೇಗುಲದಲ್ಲಿ ಭಾನುವಾರ 20ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಸಾವಿರಾರು ಭಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ನಡೆಯಿತು.

ಸಮಾರಂಭದಲ್ಲಿ ಜಿಲ್ಲೆಯ 17 ಜೋಡಿ ಸಪ್ತಪದಿ ತುಳಿಯುವ ಮೂಲಕ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಜೋಡಿಗಳಿಗೆ ಉಚಿತ ತಾಳಿ, ಕಾಲುಂಗುರ, ಸೀರೆ, ಪಂಚೆ ಕೊಟ್ಟು ಶಾಸ್ತ್ರೋಕ್ತವಾಗಿ ಮಂತ್ರಘೋಷಗಳೊಂದಿಗೆ ಸಾಮೂಹಿಕ ವಿವಾಹ ನಡೆಸಲಾಯಿತು. ತಾಲೂಕಿನ ಮಾಂಬಳ್ಳಿ, ಅಗರ, ಕಟ್ನವಾಡಿ, ಕಿನಕಹಳ್ಳಿ, ಬನ್ನಿಸಾರಿಗೆ, ಬಸಾಪುರ, ಚಿಕ್ಕಪ್ಪಾರ ಬೀದಿಯ 7 ಗ್ರಾಮಗಳಿಗೆ ಈ ದೇಗುಲ ಸೇರುತ್ತದೆ. ಇಲ್ಲಿಗೆ ವಿದೇಶದಲ್ಲೂ ಅನೇಕ ಭಕ್ತರಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ದೇಗುಲದ ವತಿಯಿಂದ ಉಚಿತ ಸಾಮೂಹಿಕ ವಿವಾಹ ನಡೆಸುತ್ತಿರುವುದು ಶ್ಲಾಘನೀಯ. ಇಂತಹ ಮನೋವೃತ್ತಿಯನ್ನು ದೇಗುಲದ ಆಡಳಿತ ಮಂಡಳಿ ತಳೆದಿರುವುದು ಇತರರಿಗೆ ಮಾದರಿಯಾಗಿದೆ. ಮಾಂಬಳ್ಳಿ ಗ್ರಾಮ ಅನೇಕ ರಾಜಕೀಯ ಮುತ್ಸದ್ದಿಗಳು, ಅತ್ಯುನ್ನತ ದರ್ಜೆಯ ಅಧಿಕಾರಿಗಳನ್ನು ನಾಡಿಗೆ ಕೊಡುಗೆ ನೀಡಿದ ಗ್ರಾಮವಾಗಿದೆ. ಅವರೂ ಈ ಕಾರ್ಯಕ್ರಮಕ್ಕೆ ಕೈ ಜೋಡಿಸಿರುವುದು ಉತ್ತಮ ಕೆಲಸವಾಗಿದ್ದು, ಈ ಪರಂಪರೆ ಮುಂದುವರೆಯಬೇಕು ಎಂದು ಆಶಿಸಿದರು.

ಮಾಜಿ ಸಚಿವ ಬಿ.ಸೋಮಶೇಖರ್ ಮಾತನಾಡಿ, ದೇವರಿಗೆ ಪೂಜೆ ಸಲ್ಲಿಸುವ ಜೊತೆಗೆ ನಮ್ಮ ನಡವಳಿಕೆಯಲ್ಲೂ ನಾವು ಭಕ್ತಿ ರೂಪಿಸಿಕೊಳ್ಳಬೇಕು. ಗ್ರಾಮದ ಈ ದೇಗುಲ ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು, ತುಂಬ ಶಕ್ತಿಶಾಲಿ ದೇವರಾಗಿದೆ. ಇಲ್ಲಿನ ಆಡಳಿತ ಮಂಡಳಿ ಇಂತಹ ಜನಪರ ಕಾರ್ಯಕ್ರಮ ಆಯೋಜಿಸಿರುವುದು ಪ್ರಶಂಸನಾರ್ಹವಾಗಿದೆ ಎಂದರು.

ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಶಾಸಕರಾದ ಎಸ್.ಜಯಣ್ಣ ಎನ್.ಮಹೇಶ್, ಜಿ.ಎನ್.ನಂಜುಂಡಸ್ವಾಮಿ, ಮುಖಂಡರಾದ ಡಾ.ಬಿ.ಜಯಶ್ರೀ, ಮಹದೇವು, ಡಾ.ಆರ್.ನೀಲಕಂಠಸ್ವಾಮಿ, ನಾಡಗೌಡರಾದ ಎಂ.ಸಿ.ರಮೇಶ್, ಬಿ.ಪುಟ್ಟಸುಬ್ಬಣ್ಣ, ಎನ್.ರವಿಕುಮಾರ್, ಪಿ.ಮಹದೇವಸ್ವಾಮಿ, ಮಾಂಬಳ್ಳಿ ನಂಜುಂಡಸ್ವಾಮಿ, ಅಗರ ವೆಂಕಟೇಶ್, ಕಿನಕಹಳ್ಳಿ ಸಿದ್ದರಾಜು, ಎಂ.ಆರ್.ರವಿ, 7 ಗ್ರಾಮಗಳ ಮುಖಂಡರು ಭಾಗವಹಿಸಿದ್ದರು.


ತೈಲಾಂಬ ನಿಧನ



ಚಾಮರಾಜನಗರ: ನಗರದ ಭ್ರಮರಾಂಬ ಬಡಾವಣೆಯ ದಿವಂಗತ ಎಂ.ಎಸ್.ಗಣಪತಿ ಅವರ ಪತ್ನಿ ತೈಲಾಂಬ(83) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ನಗರದ ಮೇಘನಾ ಹೈಟೆಕ್ ಸ್ಟುಡಿಯೋ ಮಾಲೀಕರಾದ ಮಣಿಅಯ್ಯರ್, ಸುಂದರ್, ಶ್ರೀಕಾಂತ್ ಸೇರಿ ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ನಗರದ ಶಂಕರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಾಕಮ್ಮ



ಕೆ.ಆರ್.ಪೇಟೆ, ಮಾ.3– ತಾಲೂಕಿನ ಅಗಸರಹಳ್ಳಿ ಗ್ರಾಮದ ಸಾಕಮ್ಮ (75) ಭಾನುವಾರ ನಿಧನರಾದರು. ಮೃತರು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎನ್.ಗೋವಿಂದರಾಜು ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸುಭದ್ರ ಭಾರತಕ್ಕಾಗಿ ಯುವ ಪೀಳಿಗೆಗೆ ಕೌಶಲ್ಯ, ಜ್ಞಾನಾಧಾರಿತ ಗುಣಮಟ್ಟದ ಶಿಕ್ಷಣ ಅಗತ್ಯ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ

ಮೈಸೂರು,ಮಾ.3(ಎಂಟಿವೈ)– ದೇಶದ ಜನಸಂಖ್ಯೆಯಲ್ಲಿ ಯುವ ಜನರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಸುಭದ್ರ ಭಾರತ ನಿರ್ಮಾಣಕ್ಕಾಗಿ ಯುವ ಪೀಳಿಗೆಗೆ ಕೌಶಲ್ಯ ಹಾಗೂ ಜ್ಞಾನಾಧಾರಿತ ಗುಣಮಟ್ಟದ ಶಿಕ್ಷಣ ನೀಡುವ ಅಗತ್ಯವಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ.



ಮುಕ್ತಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಯಸ್ಸಿನ ನಿರ್ದಿಷ್ಟತೆಯಿಲ್ಲದೆ ಆಸಕ್ತರಿಗೆ ಶಿಕ್ಷಣ ನೀಡುತ್ತಿದೆ ವಿವಿಧ ಉದ್ಯೋಗ, ಕೌಟುಂಬಿಕ ವ್ಯವಸ್ಥೆಯಲ್ಲಿರುವವರಿಗೆ ಗುಣಮಟ್ಟದ ಉನ್ನತ ಶಿಕ್ಷಣ ನೀಡುವ ಮೂಲಕ ಎಲ್ಲರಿಗೂ ಉನ್ನತ ಶಿಕ್ಷಣ ಕೊಡಬೇಕೆಂಬ ಆಶಯದೊಂದಿಗೆ ಮುಕ್ತ ವಿಶ್ವವಿದ್ಯಾನಿಲಯ ಕಾರ್ಯನಿರ್ವಹಿಸುತ್ತಿದೆ. ನ್ಯಾಕ್ ಮುಕ್ತ ವಿವಿಗೆ ಎ+ ಗ್ರೇಡ್ ನೀಡಿದ್ದು, ಯುಜಿಸಿ ಹಲವು ಕಾರ್ಯಕ್ರಮಗಳಿಗೆ ಮಾನ್ಯತೆ ನೀಡಿದೆ ಇದರಿಂದ ಸಾವಿರಾರು ವಿದ್ಯಾರ್ಥಿಗಳು ದೂರ ಶಿಕ್ಷಣದ ಮೂಲಕ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ ಎಂದು ವಿವರಿಸಿದರು.

ಭಾರತ ಯುವಜನರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವ ರಾಷ್ಟ್ರ ದೇಶದ ಜನಸಂಖ್ಯೆಯಲ್ಲಿ ಶೇ.65ರಷ್ಟು ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವ ಜನರೇ ಇದ್ದಾರೆ. ಈ ಹಿನ್ನೆಲೆಯಲ್ಲಿ ಸದೃಢ ಭಾರತ ನಿರ್ಮಾಣ ಮಾಡುವುದರಲ್ಲಿ ಯುವ ಜನರ ಪಾತ್ರ ಹೆಚ್ಚಾಗಿದೆ. ಇದರಿಂದ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳ ಯುವ ಜನರಿಗೆ ಗುಣಮಟ್ಟದ ಜ್ಞಾನ ಮತ್ತು ಕೌಶಲ್ಯಾಧಾರಿತ ಶಿಕ್ಷಣ ನೀಡಲು ಮುಂದಾಗಬೇಕು. ಭಾರತ ಸರ್ಕಾರ ದೇಶವನ್ನು ಆರ್ಥಿಕವಾಗಿ ಸದೃಢಗೊಳಿಸುವುದರೊಂದಿಗೆ ವಿಶ್ವದ ಪ್ರಬಲ ರಾಷ್ಟ್ರವನ್ನಾಗಿಲು ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದು, ಇದಕ್ಕೆ ಯುವ ಜನರ ಬೆಂಬಲ ಅಗತ್ಯ ದೇಶದ ಅಭಿವೃದ್ಧಿಗೆ ಯುವ ಜನರಿಂದ ಕೊಡುಗೆ ನಿರೀಕ್ಷಿಸಲಾಗಿದೆ. ದೇಶವನ್ನು ಮತ್ತಷ್ಟು ಬಲಪಡಿಸುವ ಮೂಲಕ ವಿಶ್ವದ ಅತಿ ದೊಡ್ಡ ಆರ್ಥಿಕತೆ ಹೊಂದಿರುವ ದೇಶವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಯುವ ಜನತೆ ಕೈ ಜೋಡಿಸಬೇಕು ಎಂದರು.

ಭಾರತ ಪ್ರಾಚೀನ ಕಾಲದಿಂದಲೂ ಜ್ಞಾನ, ವಿಜ್ಞಾನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ನಮ್ಮ ಪ್ರಾಚೀನ ಶಿಕ್ಷಣ ವ್ಯವಸ್ಥೆಯು ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯ ಮೇಲೆ ಕೇಂದ್ರೀಕೃತವಾಗಿತ್ತು. ನಾವು ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ನಾವು ಪಡೆಯುವ ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆ ಮಾಡಲು ಸಹಕಾರಿಯಾಗಲಿದೆ. ಇದರೊಂದಿಗೆ ಪದವಿ ಹಾಗೂ ಸ್ನಾತಕ ಪದವಿ ಪಡೆದ ಅಭ್ಯರ್ಥಿಗಳು ಮುಕ್ತ ವಿವಿಯಲ್ಲಿ ಪಡೆದ ಜ್ಞಾನ ಮತ್ತು ಶಿಕ್ಷಣವನ್ನು ಇತರರಿಗೂ ಹಂಚಿಕೆ ಮಾಡುವತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ಸಾಮಾನ್ಯ ವಿಶ್ವವಿದ್ಯಾನಿಲಯಗಳಿಗಿಂತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಭಿನ್ನವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದೆ ಇರುವವರು ಹಾಗೂ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಈಗಾಗಲೇ ವಿವಿಧ ವೃತ್ತಿಯಲ್ಲಿರುವವರು ದೂರ ಶಿಕ್ಷಣದ ಮೂಲಕ ಮುಕ್ತ ವಿವಿಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವುದು ಶ್ಲಾಘನೀಯ. ಈ ಹಿಂದೆ ಅಂಟಿದ್ದ ಕೆಟ್ಟ ಅಧ್ಯಾಯದಿಂದ ಈಗ ಹೊರಬಂದಿರುವ ಮುಕ್ತ ವಿವಿ ಸಾವಿರಾರು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುತ್ತಿದೆ. ನ್ಯಾಕ್‌ನಿಂದ ಎ+ ಗ್ರೇಡ್ ಪಡೆದಿರುವುದು ಮಾತ್ರವಲ್ಲದೆ 45 ಆಫ್‌ಲೈನ್ ಕೋರ್ಸ್ ಹಾಗೂ 10 ಆನ್‌ಲೈನ್ ಕೋರ್ಸ್‌ಗೆ ಯುಜಿಸಿ ಮಾನ್ಯತೆ ನೀಡಿದೆ ಪ್ರಸಕ್ತ ಸಾಲಿನಲ್ಲಿ ಮುಕ್ತ ವಿವಿಯಲ್ಲಿ 50 ಸಾವಿರ ವಿದ್ಯಾರ್ಥಿಗಳು ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆಯಲು ನೋಂದಣಿ ಮಾಡಿಕೊಂಡಿರುವುದು ಶ್ಲಾಘನೀಯ ಎಂದರು.

ವಿದ್ಯೆ ಎಲ್ಲರಿಗೂ ಪ್ರಮುಖವಾದ ಆಸ್ತಿ. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರೇ ಸಮಾಜದಲ್ಲಿ ಹಾದಿ ತಪ್ಪುತ್ತಿರುವುದು ಹೆಚ್ಚಾಗಿದೆ ಈ ಹಿನ್ನೆಲೆಯಲ್ಲಿ ಸಮಾಜವನ್ನು ತಿದ್ದುವ ಕೆಲಸ ವಿದ್ಯಾವಂತರಿಂದ ಆಗಬೇಕು. ಕಲಿಕೆಗೆ ವಯಸ್ಸಿನ ಭೇದವಿಲ್ಲ. ಕಲಿಕೆ ನಿರಂತರವಾಗಿದ್ದು, ವಿದ್ಯಾವಂತರಿಂದ ಸಮಾಜದಲ್ಲಿ ಸುಧಾರಣೆಯಾಗಬೇಕು. ಅದಕ್ಕಾಗಿ ಮೌಲ್ಯಾಧಾರಿತ, ಕೌಶಲ್ಯ ಮತ್ತು ಜ್ಞಾನಾಧಾರಿತ ಶಿಕ್ಷಣ ನೀಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

65ನೇ ವಯಸ್ಸಿನಲ್ಲಿ ಪದವಿ ಪಡೆದ ನಿವೃತ್ತ ಬ್ಯಾಂಕ್ ಉದ್ಯೋಗಿ

ಮೈಸೂರು,ಮಾ.3(ಎಂಟಿವೈ)– ಮುಕ್ತ ವಿವಿ ಘಟಿಕೋತ್ಸವದಲ್ಲಿ 65 ವರ್ಷದ ಬ್ಯಾಂಕ್‌ವೊಂದರ ನಿವೃತ್ತ ಉದ್ಯೋಗಿಯೊಬ್ಬರು ಸ್ನಾತಕೋತ್ತರ ಪದವಿ ಪಡೆಯುವ ಮೂಲಕ ಗಮನ ಸೆಳೆದರು. ಮಂಗಳೂರು ಮೂಲದ 65 ವರ್ಷದ ದೇವರಾಜ್ ಆಚಾರ್ಯ ಸಂಸ್ಕೃತ ವಿಷಯದಲ್ಲಿ ಅಧ್ಯಯನ ನಡೆಸಿ 900 ಅಂಕಗಳಿಗೆ 832 ಅಂಕಗಳನ್ನು ಪಡೆಯುವ ಮೂಲಕ 4ನೇ ರ್‍ಯಾಂಕ್ ಪಡೆದು ಸ್ನಾತಕೋತ್ತರ ಪದವಿ ಪಡೆದು ಸಾಧನೆ ಮಾಡಿದ್ದಾರೆ. ಇಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಪ್ರಮಾಣ ಪತ್ರ ಸ್ವೀಕರಿಸಿದರು.



ಈ ಹಿಂದಿನಿಂದಲೂ ಸಂಸ್ಕೃತ ಭಾಷೆಯ ಮೇಲೆ ಹೆಚ್ಚಿನ ಒಲವು ಇತ್ತು. ಹೀಗಾಗಿ ಭಾಷೆಯನ್ನು ಕಲಿಕೆಯಬೇಕೆಂಬ ಆಸಕ್ತಿ ಹೆಚ್ಚಿತು. ವೃತ್ತಿ ಜೀವನ ಕೆಲಸದ ಒತ್ತಡದಿಂದ ಆಸಕ್ತಿಯನ್ನು ಮುಂದುವರಿಸಲು ಅವಕಾಶ ಸಿಗಲಿಲ್ಲ. ಕಾರ್ಪೋರೇಷನ್ ಬ್ಯಾಂಕಿನಲ್ಲಿ ಸಹಾಯಕ ವ್ಯವಸ್ಥಾಪಕ ಹುದ್ದೆ ನಿರ್ವಹಿಸುತ್ತಿದ್ದ ನಾನು 2018ರಲ್ಲಿ ನಿವೃತ್ತಿಯಾದ ಬಳಿಕ ಓದಬೇಕೆಂಬ ಆಸಕ್ತಿ ಹೆಚ್ಚಾಯಿತು. ಮನೆಯವರ ಪ್ರೋತ್ಸಾಹದಿಂದ ನನ್ನ ಆಸೆ ಈಡೇರಿದೆ ಮುಂದಿನ ದಿನಗಳಲ್ಲಿ ಸಂಸ್ಕೃತದಲ್ಲಿ ಪಿಹೆಚ್.ಡಿ ಮಾಡಬೇಕೆಂಬ ಗುರಿ ಇದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವ

ಮುಕ್ತ ವಿವಿಯಿಂದ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 15ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಶೈಕ್ಷಣಿಕ ವಲಯದಿಂದ ಮಂಡ್ಯದ ಮೀರಾ ಶಿವಲಿಂಗಯ್ಯ, ಕರ್ನಾಟಕ ರಾಜ್ಯ ಮಾಹಿತಿ ಅಯೋಗದ ಆಯುಕ್ತ ಡಾ. ಹೆಚ್.ಸಿ.ಸತ್ಯನ್ ಹಾಗೂ ಸಾಮಾಜಿಕ ಕ್ಷೇತ್ರದಿಂದ ಚಿತ್ರದುರ್ಗದ ಕೆ.ಎಂ.ವೀರೇಶ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದರು. ಚಿತ್ರದಲ್ಲಿ (ನಿಂತಿರುವವರು ಎಡದಿಂದ ಬಲಕ್ಕೆ) ಮುಕ್ತ ವಿವಿಯ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ಲೋಕಾಯುಕ್ತರಾದ ಬಿ.ಎಸ್.ಪಾಟೀಲ್, ಅಕಾಡೆಮಿಕ್ ಡೀನ್ ಪ್ರೊ. ಲಕ್ಷ್ಮಿ, ಕುಲಸಚಿವರಾದ ಪ್ರೊ. ಕೆ.ಬಿ.ಪ್ರವೀಣ ಅವರನ್ನು ಕಾಣಬಹುದು.

ಮೈಸೂರು,ಮಾ.3(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮೂವರಿಗೆ ಗೌರವ ಡಾಕ್ಟರೇಟ್, 30 ಚಿನ್ನದ ಪದಕ, 37 ನಗದು ಬಹುಮಾನ ಸೇರಿದಂತೆ 7869 ಮಂದಿಗೆ ವಿವಿಧ ವಿಷಯಗಳಲ್ಲಿ ಪದವಿ ಪ್ರಧಾನ ಮಾಡಿದರು.

ಮುಕ್ತ ಗಂಗೋತ್ರಿಯ ಆವರಣದಲ್ಲಿರುವ ಘಟಿಕೋತ್ಸವದಲ್ಲಿ ಭಾನುವಾರ ನಡೆದ ಘಟಿಕೋತ್ಸವದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ.ಹೆಚ್.ಸಿ.ಸತ್ಯನ್, ಸಾಮಾಜಿಕ ಸೇವೆಯಲ್ಲಿ ತೊಡಗಿರುವ ಚಿತ್ರದುರ್ಗದ ಕೆ.ಎಂ.ವೀರೇಶ್, ಶೈಕ್ಷಣಿಕ ವಲಯದಿಂದ ಮಂಡ್ಯದ ಮೀರಾ ಶಿವಲಿಂಗಯ್ಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲಾಯಿತು. ಅಲ್ಲದೆ, ಮಾನವಿಕ ವಿಷಯದ ಸ್ನಾತಕೋತ್ತರ ಪದವಿಯಲ್ಲಿ 1016, ಸ್ನಾತಕ ಪದವಿಯಲ್ಲಿ 2501, ಸಮಾಜ ವಿಜ್ಞಾನ ವಿಷಯಗಳಲ್ಲಿ 1239, ವಾಣಿಜ್ಯಶಾಸ್ತ್ರದ ವಿಷಯದ ಸ್ನಾತಕ ಪದವಿಯಲ್ಲಿ 472, ಸ್ನಾತಕೋತ್ತರ ಪದವಿಯಲ್ಲಿ 615, ನಿರ್ವಹಣಾ ಶಾಸ್ತ್ರ ವಿಷಯದಲ್ಲಿ 719, ವಿಜ್ಞಾನ ಮತ್ತು ಗ್ರಂಥಾಲಯ ಮಾಹಿತಿ ವಿಜ್ಞಾನ ವಿಷಯದಲ್ಲಿ 1304 ವಿದ್ಯಾರ್ಥಿಗಳು ಸೇರಿದಂತೆ 7869 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು. ಅಲ್ಲದೆ, ಮೂವರು ಪಿಹೆಚ್.ಡಿ, 30 ಮಂದಿಗೆ ಚಿನ್ನದ ಪದಕ ಹಾಗೂ 37 ಮಂದಿಗೆ ನಗದು ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ಕಲ್ಪಿಸಲಾಗಿದೆ. ಉತ್ತಮ ವ್ಯವಸ್ಥೆಯಿಂದಾಗಿ ದೇಶದ ಯಾವುದೇ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೀಡದಿರುವಷ್ಟು ಕಾರ್ಯಕ್ರಮಗಳಿಗೆ ಯುಜಿಸಿ ಡೆಬ್ ಮುಕ್ತ ವಿವಿಗೆ ಅನುಮತಿ ನೀಡಿದೆ. ಮುಕ್ತ ವಿವಿ ಸಿಬ್ಬಂದಿಗಳು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುತ್ತಿದೆ. ದೂರ ಶಿಕ್ಷಣ ವ್ಯವಸ್ಥೆಯ ಅಡಿಪಾಯ ಬಲಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮುಕ್ತ ವಿವಿಯಲ್ಲಿ 23ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಿಚಾರಗೋಷ್ಠಿಯ, ಸಮ್ಮೇಳನ ನಡೆಸಲಾಗಿದೆ. ವಿಶೇಷಚೇತನರು ಹಾಗೂ ಬುಡಕಟ್ಟು ಸಮುದಾಯ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಮುಕ್ತ ವಿವಿಯಲ್ಲಿ ಕೈಗೊಂಡಿರುವ ಹಲವು ಸುಧಾರಣಾ ಕ್ರಮದಿಂದಾಗಿ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆಯಲು ದಾಖಲಾಗಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಘಟಿಕೋತ್ಸವ ಭಾಷಣ ಮಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಕುಲಸಚಿವರಾದ ಪ್ರೊ.ಬಿ.ಕೆ.ಪ್ರವೀಣ, ಪ್ರೊ.ಕೆ.ಎಲ್.ಎನ್.ಮೂರ್ತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ

ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್ ವಿಷಾದ

ಮೈಸೂರು, ಮಾ.3(ಎಂಟಿವೈ)– ವಿವಿಧ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿರುವುದರಿಂದ ಜನಸಾಮಾನ್ಯರು ತಮ್ಮ ಕೆಲಸ ಮಾಡಿಸಿಕೊಳ್ಳಲು ಹಣ(ಲಂಚ) ನೀಡಬೇಕಾದ ಹಾಗೂ ದಿನಗಟ್ಟಲೇ ಅಧಿಕಾರಿಗಳ ಮುಂದೆ ಕಾಯಬೇಕಾದ ದುಸ್ಥಿತಿ ಎದುರಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ವಿಷಾದಿಸಿದ್ದಾರೆ.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಅವರು, ಅಧಿಕಾರಿ ಮತ್ತು ಸಿಬ್ಬಂದಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಸರ್ಕಾರಿ ಕೆಲಸಕ್ಕೆ ಸೇರುವಾಗ ತಮ್ಮ ಆದಾಯವನ್ನು ಸಾವಿರಗಟ್ಟಲೆ ಹೇಳುತ್ತಾರೆ. ಆದರೆ ಲೋಕಾಯುಕ್ತ ಸಂಸ್ಥೆ ರೈಡ್ ಮಾಡಿದಾಗ ಕೋಟಿಗಟ್ಟಲೆ ಆಸ್ತಿ ಸಿಗುತ್ತಿದೆ. ಎಲ್ಲಾ ಇಲಾಖೆಗಳ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಭ್ರಷ್ಟರಾಗಿರುವುದಿಲ್ಲ. ನಮ್ಮಲ್ಲೂ ಒಳ್ಳೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿಷ್ಠಾವಂತರಾಗಿ ಸೇವೆ ಸಲ್ಲಿಸುವವರನ್ನು ಕಾಣಬಹುದು. ಕೋವಿಡ್ ಸಂದರ್ಭದಲ್ಲಿ ಹಲವು ಮಂದಿ ಅಧಿಕಾರಿಗಳು ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡಿದ್ದಾರೆ. ಸಂಕಷ್ಟದಲ್ಲಿದ್ದವರಿಗೆ ನೆರವಾಗಿದ್ದಾರೆ. ಆದರೆ, ಹಲವರು ಅತಿ ಆಸೆಗೆ ಒಳಗಾಗಿದ್ದಾರೆ. ಇದರಿಂದ ಅಕ್ರಮ ಆಸ್ತಿ ಸಂಪಾದಿಸಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಶಿಸ್ತು ಬೆಳೆಸಿಕೊಳ್ಳಿ: ವಿದ್ಯಾರ್ಥಿಗಳು ಸ್ವಯಂ ಶಿಸ್ತು ಹಾಗೂ ಚಾರಿತ್ರ್ಯದ ಬೆಳವಣಿಗೆಗೆ ಗಮನಹರಿಸಬೇಕು. ಮನುಷ್ಯರಿಗಿಂತ ಶ್ರೇಷ್ಠವಾಗಿರುವುದು ಯಾವುದೂ ಇಲ್ಲ. ವ್ಯಕ್ತಿತ್ವದ ಬೆಳವಣಿಗೆಗೆ ಶಿಸ್ತು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ನಮ್ಮ ಸದ್ಗುಣವು ನಮ್ಮ ತಪ್ಪನ್ನು ಸರಿಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಶ್ರೇಷ್ಠತೆ ಪ್ರದರ್ಶಿಸಬೇಕು. ವೈಯಕ್ತಿಕ ಶ್ರೇಷ್ಠತೆಯು ಸಾಮಾಜಿಕ ಶ್ರೇಷ್ಠತೆಯಾಗುತ್ತದೆ. ಸಾಮಾಜಿಕ ಶ್ರೇಷ್ಠತೆ ದೇಶದ ಶ್ರೇಷ್ಠತೆಯಾಗುತ್ತದೆ. ಆ ಮೂಲಕ ದೇಶವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದಾಗಿದೆ. ಹಾಗಾಗಿ ಎಲ್ಲರೂ ಜೀವನದಲ್ಲಿ ಮಾನವೀಯ ಮೌಲ್ಯ ಅಳವಡಿಸಿಕೊಂಡು ಮೌಲ್ಯಾಧಾರಿತ ಜೀವನ ನಡೆಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಮಯ ಪರಿಪಾಲನೆ ಮುಖ್ಯ: ಪ್ರತಿಯೊಬ್ಬರು ಸಮಯದ ಪರಿಪಾಲನೆಗೆ ಹೆಚ್ಚು ಆದ್ಯತೆ ನೀಡಬೇಕು. ದಿನದ 24 ಗಂಟೆಯನ್ನು ಯಾವ ರೀತಿ ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ. ಅಮೂಲ್ಯವಾದ ಸಮಯವನ್ನು ಹೇಗೆ ಉಪಯೋಗಿಸಬೇಕು ಮತ್ತು ಅವುಗಳನ್ನು ಬುದ್ಧಿವಂತಿಕೆಯಿಂದ ವ್ಯಯಿಸುವುದು, ಆ ಸಮಯದಲ್ಲಿ ಸಂತೋಷ ಮತ್ತು ತೃಪ್ತಿ ಪಡೆಯುವುದು ಮುಖ್ಯ. ನಮ್ಮಿಂದ ಸಮಯವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಮಯ ಪರಿಪಾಲನೆಗೆ ಒತ್ತು ನೀಡಬೇಕು ಎಂದರು.

ಮುಕ್ತ ವಿವಿಗೆ 45 ಮುಕ್ತ ಹಾಗೂ ದೂರ ಶಿಕ್ಷಣ ಕಾರ್ಯಕ್ರಮಗಳು ಮತ್ತು 10 ಆನ್‌ಲೈನ್ ಕಾರ್ಯಕ್ರಮ ಅನುಮೋದಿಸಿದೆ ಎಂದು ತಿಳಿಯಲು ಸಂತೋಷವಾಗಿದೆ. ಇದು ರಾಷ್ಟ್ರದ ಎಲ್ಲಾ ಮುಕ್ತ ವಿವಿಗಳಲ್ಲಿಯೇ ಯುಜಿಸಿ ಅನುಮೋದಿಸಿದ ಅತ್ಯಧಿಕ ಸಂಖ್ಯೆ ಎಂದು ತಿಳಿದು ಹೆಮ್ಮೆಯಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿಯು ದತ್ತಾಂಶ ವಿಜ್ಞಾನ, ಆಹಾರ ವಿಜ್ಞಾನ ಮತ್ತು ಭೂ ವಿಜ್ಞಾನದಂತ ಅತ್ಯಾಧುನಿಕ ಹಾಗೂ ಬಹು ಬೇಡಿಕೆಯ ಕಾರ್ಯಕ್ರಮಗಳನ್ನು ಪರಿಚಯಿಸಿದೆ. ಇದು ವಿದ್ಯಾರ್ಥಿಗಳ ಅನುಕೂಲಕ್ಕೆ ವಿವಿಯ ಬದ್ಧತೆಯನ್ನು ನಿರೂಪಿಸುತ್ತದೆ. ಮುಕ್ತ ವಿವಿಯು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಆರಂಭಿಸಿದೆ. ಅತ್ಯಾಧುನಿಕ ಮಲ್ಟಿ ಮೀಡಿಯಾ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಿದೆ ಮತ್ತು ಸೈಬರ್ ಭದ್ರತೆಯಲ್ಲಿ ಶ್ರೇಷ್ಠತೆಯ ಕೇಂದ್ರವನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ. ಡಿಜಿಟಲ್ ಇಂಡಿಯಾ ಅಡಿ ಭಾರತ್ ನೆಟ್, ರಾಷ್ಟ್ರೀಯ ಜ್ಞಾನ ನೆಟ್ವರ್ಕ್ ಮತ್ತು ಸಾಮಾನ್ಯ ಸೇವಾ ಕೇಂದ್ರಗಳು, ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಇಂಟರ್ನೆಟ್ ಸಂಪರ್ಕ ಮತ್ತು ಡಿಜಿಟಲ್ ಮೂಲಸೌಲಭ್ಯವನ್ನು ಸುಧಾರಿಸುವ ಗುರಿ ಹೊಂದಿದ್ದು, ಆನ್‌ಲೈನ್ ಮತ್ತು ಡಿಜಿಟಲ್ ಮೂಲಸೌಲಭ್ಯ ಸುಧಾರಿಸುವ ಗುರಿ ಹೊಂದಿದೆ. ಆನ್‌ಲೈನ್ ಕಲಿಕಾ ಸಂಪನ್ಮೂಲಗಳು ಮತ್ತು ಸೇವೆಗಳಿಗೆ ಪ್ರವೇಶವನ್ನು ಸಕ್ರಿಯಗೊಳಿಸುತ್ತದೆ ಎಂದು ತಿಳಿಸಿದರು.



ಮುಕ್ತ ವಿವಿಯಲ್ಲಿ ಪದಕ ಪಡೆದ ಎಂ.ಸಂಜನಾ, ಗೀತಾಂಜಲಿ ರಮನ್ ಕಟ್ಟಿ, ಜಿ.ಎನ್.ಭಾಗ್ಯ ಹಾಗೂ ನೀಲವ್ವ ಶಿವಪ್ಪ ಪಾಟೀಲ್ ಅವರು ಸಂಭ್ರಮದಿಂದ ಪದಕ ಹಾಗೂ ಪ್ರಮಾಣ ಪತ್ರ ಪ್ರದರ್ಶಿಸಿದರು.

"ಚಿಕ್ಕೋಡಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಹಿಂದೆ ಬಿಎಡ್ ಪದವಿ ಪಡೆದಿದ್ದೆ. ಎಂಎ ಮಾಡಬೇಕೆಂಬ ಹಂಬಲವಿತ್ತು. ಈಗ ನನ್ನ ಕನಸು ಈಡೇರಿದೆ. ಎರಡು ಚಿನ್ನದ ಪದಕ ಪಡೆದಿರುವುದು ಸಂತೋಷ ತಂದಿದೆ. ಮುಂದೆ ಪಿಹೆಚ್.ಡಿ ಪದವಿ ಪಡೆದು ಉಪನ್ಯಾಸಕಿಯಾಗಬೇಕೆಂಬ ಗುರಿ ಹೊಂದಿದ್ದೇನೆ.
– ಗೀತಾಂಜಲಿ ರಮನ್ ಕಟ್ಟಿ.

"ಬೆಳಗಾವಿಯ ಆರ್‌ಹೆಚ್‌ಪಿಎಸ್ ಸಂಸ್ಥೆಯಲ್ಲಿ ನಾನು ಶಿಕ್ಷಕಿಯಾಗಿದ್ದೇನೆ. ಈ ಹಿಂದೆ ಬಿಎಡ್‌ನಲ್ಲಿ ಒಂದು ಅಂಕದಿಂದ ಚಿನ್ನದ ಪದಕ ಕೈತಪ್ಪಿತ್ತು. ಈಗ ಎಂಎ ಪದವಿಯಲ್ಲಿ ಎರಡು ಚಿನ್ನದ ಪದಕ ಲಭಿಸಿದೆ. ತುಂಬಾ ಸಂತೋಷವಾಗಿದೆ.
- ನೀಲವ್ವ ಶಿವಪ್ಪ ಪಾಟೀಲ್, ಚಿನ್ನದ ಪದಕಪಡೆದ ವಿದ್ಯಾರ್ಥಿನಿ.

"ನಾನು ಪ್ರಸ್ತುತ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಯಾವುದಾದರೂ ವಿವಿಯಲ್ಲಿ ಪ್ರಾಧ್ಯಾಪಕಿಯಾಗಬೇಕು ಎಂಬ ಆಸೆ ಇತ್ತು. ಈಗ ಎಂಎ ಚಿನ್ನದ ಪದಕ ಲಭಿಸಿದೆ. ಮುಂದೆ ಕೆಸೆಟ್ ಪರೀಕ್ಷೆ ಬರೆದು ಪ್ರಾಧ್ಯಾಪಕಿ ಆಗುತ್ತೇನೆ.
- ಎಂ. ಸಂಜನಾ.

"ನಾನು ಗೃಹಿಣಿ, ಬಿಇಡಿ ಪರೀಕ್ಷೆ ಬರೆದು ಮನೆಯಲ್ಲಿದ್ದೆ. ಈಗ ಎಂಎ ಮಾಡಿದ್ದೇನೆ. ಪರಿಸರ ಅಧ್ಯಯನದಲ್ಲಿ ಎರಡು ಚಿನ್ನದ ಪದಕ ಲಭಿಸಿದೆ. ಮುಂದೆ ಪಿಎಚ್.ಡಿ ಮಾಡಬೇಕು ಅಂದುಕೊಂಡಿದ್ದೇನೆ.
- ಜಿ.ಎನ್. ಭವ್ಯಾ.

ಭಾರತವನ್ನು ವಿಶ್ವದ ಅತಿ ದೊಡ್ಡ ಆರ್ಥಿಕತೆಯಾಗಿಸುವ ಪ್ರಯತ್ನ ನಡೆಯುತ್ತಿದೆ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾಹಿತಿ

ಮೈಸೂರು, ಮಾ.3(ಬಿಎಲ್‌ಯು)– ಭಾರತದ ಆರ್ಥಿಕತೆಯನ್ನು ಮತ್ತಷ್ಟು ಬಲಪಡಿಸುವ ಮೂಲಕ ವಿಶ್ವದ ಅತಿ ದೊಡ್ಡ ಆರ್ಥಿಕತೆಯನ್ನಾಗಿ ಮಾಡುವ ಪ್ರಯತ್ನಗಳು ನಡೆಯುತ್ತಿದ್ದು, ಸರ್ಕಾರ ಈ ನಿಟ್ಟಿನಲ್ಲಿ ಹಲವು ಯೋಜನೆ ರೂಪಿಸಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ಭಾರತ ಎಲ್ಲಾ ಕ್ಷೇತ್ರದಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದೆ. ಈ ಮೂಲಕ ದೇಶದ ಆರ್ಥಿಕತೆ ಬಲಿಷ್ಠವಾಗಿದೆ. ಇದರಿಂದ ವಿಶ್ವದಲ್ಲೇ ಭಾರತ 5ನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಈಗ ಇದನ್ನು ಮೊದಲ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ ಎಂದರು.

ವೇದ ಕಾಲದಿಂದಲೂ ಭಾರತ ಪ್ರತಿಯೊಂದು ಕ್ಷೇತ್ರದಲ್ಲಿ ಅನುಪಮ ಜ್ಞಾನ ಗಳಿಸಿದೆ. ಆರ್ಯಭಟ ಸೇರಿದಂತೆ ಹಲವರ ಶ್ರಮದಿಂದ ಖಗೋಳ ವಿಜ್ಞಾನದಿಂದ ಭೂ ವಿಜ್ಞಾನ, ಗಣಿತ, ವೈದ್ಯಕೀಯ ಹಾಗೂ ಇತರೆ ಕ್ಷೇತ್ರಗಳಲ್ಲಿ ಭಾರತೀಯರ ಕೊಡುಗೆ ಇಡೀ ವಿಶ್ವಕ್ಕೆ ಮಹತ್ವದ್ದಾಗಿದೆ ಎಂದು ಥಾವರ್ ಚಂದ್ ಗೆಹ್ಲೋಟ್ ಮೆಚ್ಚುಗೆ ವ್ಯಕ್ತಪಡಿಸಿದರು.

ಆಧುನಿಕ ಜ್ಞಾನವನ್ನು ಮೌಲ್ಯಗಳೊಂದಿಗೆ ಸಂಯೋಜಿಸುವ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ಭಾರತದ ಧರ್ಮ ಮತ್ತು ಸಂಸ್ಕೃತಿ ಸಂರಕ್ಷಿಸಲು, ರಾಷ್ಟ್ರದ ಐಕ್ಯತೆ, ಸಮಗ್ರತೆ ಕಾಪಾಡಿಕೊಳ್ಳಲು, ಸಮಾಜದಲ್ಲಿ ಸಮಾನತೆ ನಿರ್ಮಾಣ ಮಾಡಲು, ಜಗತ್ತಿಗೆ ಹೊಸ ದಿಕ್ಕು ನೀಡಲು ಉತ್ತಮ ಶಿಕ್ಷಣ ನೀಡಬೇಕು. ಈ ಮೂಲಕ ಇಡೀ ಮಾನವ ಕುಲಕ್ಕೆ ಒಳ್ಳೆಯದನ್ನು ಮಾಡಬಹುದು ಎಂದು ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ಪರಿಸರ ಅಸಮತೋಲನ ಇಂದು ವಿಶ್ವದಲ್ಲಿ ಗಂಭೀರ ಸಮಸ್ಯೆಯಾಗಿ ಕಾಡುತ್ತಿದೆ. ಇದರಿಂದ ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ ಈ ನಿಟ್ಟಿನಲ್ಲಿ ನಮ್ಮ ಜಲ, ವನ ಹಾಗೂ ವಾಯುವನ್ನು ಪರಿಶುದ್ಧವಾಗಿ ಸಂರಕ್ಷಿಸಿಕೊಳ್ಳಬೇಕಿದೆ. ಇದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ ಎಂದು ಸಲಹೆ ನೀಡಿದರು.

ಮೈಸೂರು ನಗರ ತನ್ನ ಐತಿಹಾಸಿಕ ಸ್ಮಾರಕ ಹಾಗೂ ವಿಶಿಷ್ಟ ವಾಸ್ತುಶಿಲ್ಪ ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಈ ಮೂಲಕ ದಕ್ಷಿಣ ಭಾರತದ ಶಿಕ್ಷಣದ ಕೇಂದ್ರವಾಗಿದೆ ಮೈಸೂರು ವಿಶ್ವವಿದ್ಯಾನಿಲಯವು ದೇಶಕ್ಕೆ ಅನೇಕ ವಿಜ್ಞಾನಿಗಳನ್ನು, ತತ್ವಜ್ಞಾನಿಗಳನ್ನು ಮತ್ತು ರಾಜಕಾರಣಿಗಳನ್ನು ನೀಡಿದೆ. ಅವರು ಕರ್ನಾಟಕ ಮಾತ್ರವಲ್ಲದೆ ಇಡೀ ಭಾರತದ ನವ ನಿರ್ಮಾಣದಲ್ಲಿ ಜ್ಞಾನ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಕೊಡುಗೆ ನೀಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಮಾಜ, ದೇಶ, ಜ್ಞಾನ, ವಿಜ್ಞಾನ, ಕ್ರೀಡಾ ಕ್ಷೇತ್ರದಲ್ಲಿ ಧರ್ಮ, ಸಂಸ್ಕೃತಿ, ಸಂವರ್ಧನೆ ಹಾಗೂ ಸಂರಕ್ಷಣೆಗೆ ಅತ್ಯುತ್ತಮ ಸೇವೆ ಮಾಡಿರುವ ಮಹಾನ್ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯ ಗೌರವಿಸುತ್ತಿರುವುದು ಸಂತಸದ ಸಂಗತಿ ಎಂದು ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ವಾಯುವಿಹಾರಿಗಳನ್ನು ರಂಜಿಸಿದ ರಂಗಗೀತೆ ಗಾಯನ

ಮೈಸೂರು, ಮಾ.3(ಎಸ್‌ಪಿಎನ್)– ಮೈಸೂರು ರಾಮಕೃಷ್ಣನಗರ 'ಐ' ಬ್ಲಾಕ್‌ನ ಶ್ರೀರಾಮಕೃಷ್ಣ ಪರಮಹಂಸ ಉದ್ಯಾನವನದಲ್ಲಿ ಬೆಂಗಳೂರಿನ ರಂಗರತ್ನಾಕರ ಸಂಸ್ಥೆಯ ಕಲಾವಿದರಿಂದ ವೃತ್ತಿರಂಗಗೀತೆಗಳ ಗಾಯನ ವಾಯುವಿಹಾರಿಗಳನ್ನು ಆಕರ್ಷಿಸಿತು.



ಮೈಸೂರು ರಾಮಕೃಷ್ಣನಗರ 'ಐ' ಬ್ಲಾಕ್‌ನ ಶ್ರೀರಾಮಕೃಷ್ಣ ಪರಮಹಂಸ ಉದ್ಯಾನವನದಲ್ಲಿ ಬೆಂಗಳೂರಿನ ರಂಗರತ್ನಾಕರ ಸಂಸ್ಥೆಯ ಕಲಾವಿದರಿಂದ ವೃತ್ತಿರಂಗಗೀತೆಗಳ ಗಾಯನ ವಾಯುವಿಹಾರಿಗಳನ್ನು ಆಕರ್ಷಿಸಿತು.

ಭಾನುವಾರ ನಡೆದ ವೃತ್ತಿರಂಗ ಗೀತೆಗಳ ಗಾಯನ ಕಾರ್ಯಕ್ರಮಕ್ಕೆ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರಿನ ವಾಯುವಿಹಾರಿಗಳ ಒಕ್ಕೂಟ, ರಾಮಕೃಷ್ಣನಗರ ಐ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಮಿತಿ, ಶ್ರೀ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆ, ಶ್ರೀ ಶಾರದಾದೇವಿ ಮಹಿಳಾ ಸಮಾಜ, ಶ್ರೀ ರಾಮಕೃಷ್ಣ ಸಹಚಿಂತನ ಬಳಗ ಹಾಗೂ ಶ್ರೀ ರಾಮಕೃಷ್ಣ ಯೋಗ ಸನ್ನಿಧಿ ಬಳಗದ ಸಹಯೋಗದೊಂದಿಗೆ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಗೀತೆಗಳ ಗಾಯನ ಎಲ್ಲರ ಗಮನ ಸೆಳೆದವು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಗರಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮೀ ಎಂ.ಕಿರಣ್ ಮಾದೇಗೌಡ, ಇಂತಹ ಕಾರ್ಯಕ್ರಮಗಳು ಉದ್ಯಾನವನಗಳಲ್ಲಿ ಆಯೋಜಿಸುವುದರಿಂದ ಹಿರಿಯ ನಾಗರಿಕತೆ ಒಂದು ಮನೋರಂಜನಾ ಕಾರ್ಯಕ್ರಮವಾಗಿ ರೂಪುಗೊಳ್ಳುತ್ತದೆ. ಅಲ್ಲದೆ, ಸಂಜೆ ವೇಳೆ ವಾಯುವಿಹಾರ ಮಾಡುತ್ತಲೇ ಈ ಗೀತೆಗಳನ್ನು ಕೇಲವರು ಆಸಕ್ತಿಯಿಂದ ಕೇಳುತ್ತಾರೆ ಎಂದರು.

ಈ ವೇಳೆ ಗಾಯಕ ಅಪ್ಪು(ದಾಸಪ್ಪ) ತಂಡದ ಕಲಾವಿದರಾದ ವಿದ್ವಾನ್ ಮಹೇಶ ಭಾಗಳಿ, ವಿದುಷಿ ಸುರಭಿ, ವಿದುಷಿ ಭೂಮಿಕಾ ಅವರು ಹಲವು ರಂಗಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು. ಈ ವೇಳೆ ವಿದ್ವಾನ್ ಕಿರಗಸೂರು ರಾಜಪ್ಪ (ಹಾರ್ಮೋನಿಯಂ), ವಿದ್ವಾನ್ ಅಪ್ಪು(ದಾಸಪ್ಪ) ತಬಲ, ಪುರುಷೋತ್ತಮ್ ಕೀಬೋರ್ಡ್ ನುಡಿಸಿ ಕಾರ್ಯಕ್ರಮಕ್ಕೆ ಸಾಥ್ ನೀಡಿದರು. ಈ ವೇಳೆ ರಾಮಕೃಷ್ಣ ಐ ಬ್ಲಾಕ್ ವಾಯುವಿಹಾರಿಗಳ ಒಕ್ಕೂಟ ಸಂಚಾಲಕ ಎಂ.ಕೆಂಪಯ್ಯ, ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆಯ ಅಧ್ಯಕ್ಷ ಬಸವಲಿಂಗಪ್ಪ ಹಾಡ್ಯ, ಹೆಚ್.ಎಸ್.ಗೋವಿಂದಗೌಡ, ಎಸ್.ಎಸ್.ಪುಟ್ಟೇಗೌಡ ಉಪಸ್ಥಿತರಿದ್ದರು.

ದಿ.ಕೆ.ಶಿವರಾಂ ಅವರಿಗೆ ಶ್ರದ್ಧಾಂಜಲಿ



ಮೈಸೂರು, ಮಾ.3(ಎಸ್‌ಪಿಎನ್)– ಮೈಸೂರಿನ ಕೆ.ಶಿವರಾಂ ಬಡಾವಣೆಯಲ್ಲಿ ಇತ್ತೀಚೆಗೆ ನಿಧನರಾದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮ್ ರವರ ಭಾವಚಿತ್ರದ ಮುಂಭಾಗ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಭಾನುವಾರ ಮೊಂಬತ್ತಿ ಹಚ್ಚಿ ಸಂತಾಪ ಸೂಚಿಸಲಾಯಿತು.

ನಂತರ ಮಾತನಾಡಿದ ಅವರು, ದಿ.ಕೆಶಿವರಾಮ್ ರವರು ಕಡುಬಡತನದಿಂದ ಬೆಳೆದಂತಹ ಮೇರು ವ್ಯಕ್ತಿತ್ವ ಅವರು ಮೈಸೂರಿನ ಪಾಲಿಕೆ ಆಯುಕ್ತಾಗಿದ್ದ ವೇಳೆಯಲ್ಲಿ ನಾನು ಪಾಲಿಕೆ ಸದಸ್ಯನಾಗಿದ್ದೆ. ದಲಿತರು, ಹಿಂದುಳಿದವರು, ಶೋಷಿತರ ಯಾವುದೇ ಸಮಸ್ಯೆಗಳಿಗೆ ಶಿವರಾಮ್ ರವರು ದನಿಯಾಗಿದ್ದರು. ಮೈಸೂರು ನಗರದ ಇತಿಹಾಸದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಯಾವುದೇ ವ್ಯಕ್ತಿ ನಿಧನರಾದರೇ ಶವಸಂಸ್ಕಾರ ಧನಸಹಾಯ ನೀಡುವ ಯೋಜನೆಯನ್ನು ರೂಪಿಸಿದ್ದ ಅವರು ಮೈಸೂರು ಆಯುಕ್ತರಾಗಿದ್ದಾಗ ಎಂದರು.

ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ಪರಿಕರಗಳನ್ನು ಕೊಡಿಸುತ್ತಿದ್ದರು. ಯುವಕರಿಗೆ ಆರೋಗ್ಯ ಮತ್ತು ದೇಹದಾರ್ಢ್ಯ ಬೆಳವಣಿಗೆಗೆ ಉತ್ತೇಜನ ನೀಡುವ ಸಲುವಾಗಿ ಜಿಮ್ ಪರಿಕರಗಳನ್ನು ನೀಡಿದ್ದರು. ಹಿಂದುಳಿದ, ದಲಿತರ ವಿಚಾರದಲ್ಲಿ ಕಾರ್ಯಾಂಗದಲ್ಲಿ ಗಟ್ಟಿ ಧ್ವನಿಯಾಗಿ ಕೆಲಸ ಮಾಡಿದ್ದ ಕೆಲ ಪ್ರಸಂಗವನ್ನು ನೆನೆದರು.

ಈ ಸಂದರ್ಭದಲ್ಲಿ ಮಧುರಾಜ್, ಮಹಾದೇವು, ಸತ್ಯ, ವಿಕಾಸ್, ಮನು, ಅಮೋಘ, ಮಂಜು, ಮಧು, ಮೋಹನ್, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಸೋಮವಾರ 4 ಮಾರ್ಚ್ 2024

ಕನ್ನಡದ ಅತ್ಯಂತ ಶ್ರೇಷ್ಠ ಕವಿ ಸರ್ವಜ್ಞ

ಶಾಸಕ ದರ್ಶನ್ ಧ್ರುವನಾರಾಯಣ್ ಬಣ್ಣನೆ



ನಂಜನಗೂಡು, ಮಾ.3– ತಮ್ಮ ವಚನಗಳ ಮೂಲಕ ಉತ್ತಮ ಸಂದೇಶ ನೀಡಿ, ಸಮಾಜದ ಅಂಕು–ಡೊಂಕುಗಳನ್ನು ತಿದ್ದಿ ಕೊಡುಗೆ ನೀಡಿರುವ ಸರ್ವಜ್ಞ ಕನ್ನಡದ ಅತ್ಯಂತ ಶ್ರೇಷ್ಠ ಕವಿ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಕುಂಬಾರ ಸಮುದಾಯ ಭವನದಲ್ಲಿ ತಾಲೂಕು ಕುಂಬಾರ ಸಂಘದಿಂದ ಆಯೋಜಿಸಿದ್ದ ಮಹಾಕವಿ ಸರ್ವಜ್ಞ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಜನರ ಆಡು ಭಾಷೆಯಲ್ಲಿ ತ್ರಿಪದಿಗಳನ್ನು ರಚಿಸಿ, ಸಮಾಜದಲ್ಲಿದ್ದ ಅಂಕು–ಡೊಂಕುಗಳನ್ನು ತಿದ್ದುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ ಮಹಾನ್ ಸಮಾಜ ಸುಧಾರಕ ಸರ್ವಜ್ಞ ಅವರ ಸಂದೇಶಗಳು ಸರ್ವಕಾಲಕ್ಕೂ ಪ್ರಸ್ತುತವೆನಿಸಿವೆ. ಅಲ್ಲದೇ ಮಹಾಜ್ಞಾನಿ ಸರ್ವಜ್ಞರ ಜಯಂತಿಯನ್ನು ಆಚರಿಸುವ ಮೂಲಕ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ ಎಂದರು.

ಕ್ಷೇತ್ರದ ಶಾಸಕನಾಗಿ ನಾನು ಕುಂಬಾರ ಸಮುದಾಯದ ಅಭಿವೃದ್ಧಿಗೆ ಬದ್ಧನಾಗಿದ್ದು, ಸಮುದಾಯದವರು ಕುಂಬಾರ ಸಮುದಾಯ ಭವನದ ಕಾಂಪೌಂಡ್ ಮತ್ತು ಅಡುಗೆ ಮನೆ ನಿರ್ಮಾಣಕ್ಕೆ ಅನುದಾನ ಕೇಳಿದ್ದು, ಈಗಾಗಲೇ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಪಟ್ಟಿಗೆ ಈ ಕಾಮಗಾರಿ ಸೇರಿಸಲಾಗಿದೆ. ಶೀಘ್ರ ಅನುದಾನ ನೀಡುವ ಮೂಲಕ ಜನಾಂಗದ ಆಸೆ ಈಡೇರಿಸುವುದಾಗಿ ತಿಳಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ, ಸಮಾಜ ಸುಧಾರಕರು ಯಾವುದೇ ಒಂದು ಧರ್ಮ, ಜಾತಿಗೆ ಸೀಮಿತರಲ್ಲ. ಅವರು ಎಲ್ಲಾ ಸಮಾಜದ ಆಸ್ತಿ. ದೇಶದ ಇತಿಹಾಸದಲ್ಲಿ ಹಿಂದುಳಿದ ವರ್ಗದವರೇ ಸಮಾಜಕ್ಕೆ ಅತ್ಯಂತ ಹೆಚ್ಚು ಕೊಡುಗೆ ನೀಡಿದವರು. ಅಂತಹ ಸಾಲಿನಲ್ಲಿ ಸರ್ವಜ್ಞರು ಅಗ್ರಗಣ್ಯರೆನಿಸಿದ್ದಾರೆ. ಹಿಂದುಳಿದ ಶೋಷಿತ ವರ್ಗಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಶಿಕ್ಷಣ ಪ್ರಮುಖ ಪಾತ್ರ ವಹಿಸಲಿದೆ. ಆದ್ದರಿಂದ ಸಮಾಜದ ಪ್ರತಿಯೊಬ್ಬರೂ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಯಾರೂ ಹುಟ್ಟಿನಿಂದ ಕನಿಷ್ಠರಲ್ಲ, ಶ್ರೇಷ್ಠರೂ ಅಲ್ಲ. ಆದ್ದರಿಂದ ಕೀಳರಿಮೆ ಬಿಟ್ಟು ಸಾಧನೆಗೆ ಮುಂದಾಗಬೇಕು ಎಂದು ತಿಳಿಸಿದರು. ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆಕೇಶವ ಮೂರ್ತಿ, ಕುಂಬಾರ ಸಂಘದ ಅಧ್ಯಕ್ಷ ಮರಿಶೆಟ್ಟಿ, ಸಹ ಕಾರ್ಯದರ್ಶಿ ಇ.ಶಿವಣ್ಣ, ಪ್ರಕಾಶ್, ಎಸ್.ಕುಮಾರ್, ಲಕ್ಷ್ಮಿಕಾಂತ್, ಹೆಚ್.ಎಸ್.ಪ್ರಕಾಶ್, ಕೃಷ್ಣಶೆಟ್ಟಿ, ರಾಮ ಶೆಟ್ಟಿ, ಭೈರೇಶ್, ಬಸವಶೆಟ್ಟಿ, ರಂಗರಾಮು, ಮಹದೇವ ಶೆಟ್ಟಿ, ನಿಂಗರಾಜು, ವೆಂಕಟೇಶ್, ನವೀನ್‌ಕುಮಾರ್, ರೇವಣ್ಣ ಹಾಗೂ ಕುಂಬಾರ ಸಮುದಾಯದ ಯಜಮಾನರು ಉಪಸ್ಥಿತರಿದ್ದರು.

ತುಂಬಲ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ವಿಜ್ಞಾನ, ತಂತ್ರಜ್ಞಾನದಲ್ಲಿ ಮತ್ತಷ್ಟು ಸಾಧಿಸಲು ಪ್ರಯತ್ನ ಸಾಗಿದೆ: ಇಸ್ರೋ ವಿಜ್ಞಾನಿ ಎಂ.ವಿ.ರೂಪಾ



ತಿ.ನರಸೀಪುರ, ಮಾ.3– ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮತ್ತಷ್ಟು ಸಾಧಿಸುವ ದಿಸೆಯಲ್ಲಿ ನಮ್ಮ ಪ್ರಯತ್ನಗಳು ಸಾಗಿದೆ ಎಂದು ಇಸ್ರೋ ವಿಜ್ಞಾನಿ ಎಂ.ವಿ.ರೂಪಾ ಹೇಳಿದರು.

ತಾಲೂಕಿನ ತುಂಬಲ ಗ್ರಾಮದ ಪಿಎಂಶ್ರೀ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಉದ್ಘಾಟಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹಿಂದುಳಿದಿದ್ದ ಕಾಲದಲ್ಲಿ ರಾಕೆಟ್ ನಿರ್ಮಾಣ ಕಲಿಕೆಗೆ ಇಲ್ಲಿಂದ ವಿದೇಶಕ್ಕೆ ಒಂದಿಬ್ಬರನ್ನು ಕಳುಹಿಸುವ ಬದಲು ಇಲ್ಲಿಗೆ ಅಲ್ಲಿನ ವಿಜ್ಞಾನಿಗಳನ್ನು ಕರೆಸಿಕೊಂಡು ತರಬೇತಿ ಪಡೆಯಲಾಯಿತು. ಇದರಿಂದ ರಾಕೆಟ್ ನಿರ್ಮಾಣ ಹಾಗೂ ರಾಕೆಟ್ ಉಡಾವಣೆಗೆ ಪೂರಕವಾಗಿ ಕೇಂದ್ರ ಸ್ಥಾಪನೆ ಮಾಡಲಾಯಿತು. ವಿಕ್ರಮ್ ಸಾರಾಭಾಯ್ ಅವರು ಡಾ.ಅಬ್ದುಲ್ ಕಲಾಂರಂತಹ ವಿಜ್ಞಾನಿಗಳನ್ನು ಪ್ರೋತ್ಸಾಹಿಸಿದ ಫಲವಾಗಿ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಒಂದಷ್ಟು ಸಾಧಿಸಲು ಸಾಧ್ಯವಾಗಿದೆ ಎಂದರು.

ಇದೇ ವೇಳೆ ಕೋಟ್ಯಾಂತರ ರೂ. ವೆಚ್ಚದಲ್ಲಿ ನಿರ್ಮಿಸುವ ಉಪಗ್ರಹಗಳು, ಅವುಗಳಿಂದಾಗುವ ಅನುಕೂಲ, ಚಂದ್ರಯಾನ 2 ವಿಫಲ ಹಾಗೂ ಚಂದ್ರಯಾನ 3 ಯಶಸ್ವಿ ಉಡಾವಣೆ, ಇದಕ್ಕಾಗಿ ಇಸ್ರೋ ವಿಜ್ಞಾನಿಗಳು ಹಾಕಿದ ಪರಿಶ್ರಮದ ಮಾಹಿತಿಯನ್ನು ಒಳಗೊಂಡ ವಿಡಿಯೋವನ್ನು ತೋರಿಸುವ ಮೂಲಕ ವಿದ್ಯಾರ್ಥಿಗಳ ಪ್ರಶ್ನೆಗೆ ರೂಪಾ ಉತ್ತರಿಸಿದರು.

ಶಾಲೆಯ ವಿದ್ಯಾರ್ಥಿನಿಯರಾದ ರಂಜಿತಾ, ಸಿಂಚನಾ, ರಮ್ಯ ಹಾಗೂ ದೀಕ್ಷಿತಾ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಮಹತ್ವ ಹಾಗೂ ನೊಬೆಲ್ ಪುರಸ್ಕೃತ ಭಾರತೀಯ ವಿಜ್ಞಾನಿ ಸರ್.ಸಿ.ವಿ.ರಾಮನ್ ಜೀವನ ಚರಿತ್ರೆ ಹಾಗೂ ಚಂದ್ರಯಾನ ಕುರಿತು ಮಾತನಾಡಿದರು. ಶಾಲೆ ಮುಖ್ಯ ಶಿಕ್ಷಕ ರಾಯಪ್ಪ ಗೌಂಡಿ ಮಾತನಾಡಿ, ಬಿಇಓ ಶೋಭಾ, ಬಿಆರ್‌ಸಿ ನಾಗೇಶ್, ಕ್ಲಸ್ಟರ್ ಬಿಆರ್‌ಪಿ ಹಾಗೂ ಸಿಆರ್‌ಪಿಗಳ ಮಾರ್ಗದರ್ಶನ, ಸಹಕಾರದಿಂದ ಇಂತಹ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಸ್ಥಳೀಯವಾಗಿ ಎಲ್ಲರ ಸಹಕಾರ ದೊರಕುತ್ತಿದೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಇಂತಹ ಕಾರ್ಯಕ್ರಮ ಪೂರಕವಾಗಿದೆ ಎಂದರು.

ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ನಂದೀಶ್, ಪಿಡಿಓ ಧನಂಜಯ, ಕಾರ್ಯದರ್ಶಿ ಪ್ರವೀಣ್ ಕುಮಾರ್, ಕುಪ್ಯ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಶಶಿಕಲಾ, ಬಿಆರ್‌ಪಿ ಸಿರಿದೇವಿ, ಸಿಆರ್‌ಪಿ ಶ್ರೀಧರ್, ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ವಿವಿಧ ಶಾಲೆಗಳ ವಿದ್ಯಾರ್ಥಿಗಳು ಹಾಜರಿದ್ದರು.



ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ನೂತನ ಅಧ್ಯಕ್ಷ ಹದಿನಾರು ಸತೀಶ್ ಅವರನ್ನು ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ಅಭಿನಂದಿಸಿದರು.

ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಚಾಲನೆ



ತಿ.ನರಸೀಪುರ, ಮಾ.3– ಇಲ್ಲಿನ ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಪುರಸಭಾ ಸದಸ್ಯ ಬಾದಾಮಿ ಮಂಜು ಚಾಲನೆ ನೀಡಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳು ಅಂಗಾಂಗ ನ್ಯೂನತೆಗೆ ಒಳಗಾಗಬಾರದು ಎಂಬ ಮುನ್ನೆಚ್ಚರಿಕಾ ಕ್ರಮವಾಗಿ ಸರ್ಕಾರ ಪೋಲಿಯೋ ಲಸಿಕಾ ಅಭಿಯಾನ ಹಮ್ಮಿಕೊಂಡಿದ್ದು, ಪೋಷಕರು ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ತಿಳಿಸಿದರು. ಈ ವೇಳೆ ವರುಣಾ ಕ್ಷೇತ್ರದ ಯುವ ಘಟಕದ ಉಪಾಧ್ಯಕ್ಷ ನಟರಾಜು, ಶಂಕರ್, ಆಸ್ಪತ್ರೆ ಸಿಬ್ಬಂದಿ ಅಭಿನಂದನ್ ಇತರರಿದ್ದರು.



ಹೆಚ್.ಡಿ.ಕೋಟೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ರೋಟರಿ ಸಂಸ್ಥೆ ಅಧ್ಯಕ್ಷ ಬಿ.ಜಿ.ಗಂಗಾಧರ್ ಇನ್ನಿತರರಿದ್ದರು.

ಪರಸ್ತ್ರೀ ಸಂಬಂಧ ಪ್ರಶ್ನಿಸಿದ ಪತ್ನಿಗೆ ಕಿರುಕುಳ

ಪತಿ ಸೇರಿ ಮೂವರ ವಿರುದ್ಧ ಪ್ರಕರಣ



ಹುಣಸೂರು, ಮಾ.3– ಪರಸ್ತ್ರೀಯೊಂದಿಗಿನ ಸಂಬಂಧ ಪ್ರಶ್ನಿಸಿದ ಪತ್ನಿಗೆ ಪತಿ ಮಾನಸಿಕ, ದೈಹಿಕ ಕಿರುಕುಳ ನೀಡಿ ಮನೆಯಿಂದ ಹೊರಹಾಕಿರುವ ಘಟನೆ ತಾಲೂಕಿನ ಹಂದನಹಳ್ಳಿ ಗ್ರಾಮದಲ್ಲಿ ನಡೆದಿದ್ದು, ಗಂಡನ ವರ್ತನೆಯಿಂದ ಬೇಸತ್ತ ಆಕೆ ಅತ್ತೆ ಮಾವ ಹಾಗೂ ಗಂಡನ ವಿರುದ್ಧ ಮೈಸೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ನಿವಾಸಿ ಸಂಪತ್ ಕುಮಾರ್ ಅವರ ಪತ್ನಿ ಛಾಯದೇವಿ, ಅತ್ತೆ ಮಹದೇವಮ್ಮ, ಮಾವ ವೆಂಕಟರಾಜು ಸೇರಿದಂತೆ ಪತಿ ವಿರುದ್ಧ ವರದಕ್ಷಣೆ ಕಿರುಕುಳ ಪ್ರಕರಣ ದಾಖಲಿಸಿದ್ದಾರೆ. 2015ರಲ್ಲಿ ಹುಣಸೂರು ತಾಲೂಕಿನ ಹಂದನಹಳ್ಳಿ ಗ್ರಾಮದ ಛಾಯದೇವಿ ಹಾಗೂ ಹೆಚ್.ಡಿ. ಕೋಟೆ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಸಂಪತ್ ಕುಮಾರ್ ಅವರೊಂದಿಗೆ ವಿವಾಹವಾಗಿತ್ತು. ಮದುವೆ ವೇಳೆ ಸಂಪತ್‌ಗೆ ಸಾಕಷ್ಟು ವರದಕ್ಷಿಣೆ ನೀಡಲಾಗಿತ್ತು. ಆರಂಭದಲ್ಲಿ ದಂಪತಿ ಅನ್ಯೋನ್ಯವಾಗಿದ್ದರು. ಆದರೆ ದಿನ ಕಳೆದಂತೆ ಸಂಪತ್ ಕುಮಾರ್ ಪತ್ನಿಗೆ ಕಿರುಕುಳ ನೀಡಿ 2 ಲಕ್ಷ ರೂ. ಹಾಗೂ ಬ್ರೆಸ್‌ಲೈಟ್ ತರುವಂತೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದಾನೆ. ಈ ಸಂಬಂಧ ಹಿರಿಯರ ಸಮ್ಮುಖದಲ್ಲಿ ಹಂದನಹಳ್ಳಿಯಲ್ಲಿ ಒಂದೆರಡು ಬಾರಿ ಪಂಚಾಯಿತಿ ನಡೆದು ಪತ್ನಿ ಕರೆದುಕೊಂಡು ಹೋಗಿದ್ದ ಸಂಪತ್ ಕುಮಾರ್, ನಂತರ ಮತ್ತೋರ್ವಳೊಂದಿಗೆ ಸಂಬಂಧ ಹೊಂದಿದ್ದ ಎನ್ನಲಾಗಿದೆ. ಈ ಬಗ್ಗೆ ಪ್ರಶ್ನಿಸಿದ ಪತ್ನಿಯನ್ನು ಥಳಿಸಿ ಮನೆಯಿಂದ ಹೊರ ಹಾಕಿದ್ದಾನೆ. ಈ ಹಿನ್ನಲೆಯಲ್ಲಿ ಛಾಯದೇವಿ ತನ್ನ ಗಂಡ, ಅತ್ತೆ, ಮಾವನ ವಿರುದ್ಧ ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೆಟಿಎಂ (ಕ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆಪರೇಷನ್ ವ್ಯಾಲಂಟೇನ್ (ತೆ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ವಾರಿ–3 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಹದೇವ್ (ಹಿ)	4 ಪ್ರದರ್ಶನಗಳು
ಪ್ರಭಾ	
ಛಾಯಾ (ಕ)	2 ಪ್ರದರ್ಶನಗಳು
ನಮೋಭಾರತ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಚಾರಿ 111 (ತೆ): ಬೆ.10.30ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.1.05ಕ್ಕೆ, ರಾ.10.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.15ಕ್ಕೆ, ರಾ.7.25ಕ್ಕೆ.
ಸ್ಕ್ರೀನ್ 2	ಜುಗಲ್‌ಬಂದಿ (ಕ): ಬೆ.10.45ಕ್ಕೆ, ಉಪಾಧ್ಯಕ್ಷ (ಕ): ಮ.1.30ಕ್ಕೆ, ಲಾಪತಾ ಲೇಡಿಸ್ (ಹಿಂ): ಸಂ.4.25ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7ಕ್ಕೆ, ಮಂಜುಮಲೆ (ಮ): ರಾ.10ಕ್ಕೆ.
ಸ್ಕ್ರೀನ್ 3	ಆರ್ಟಿಕಲ್ 370 (ಹಿಂ): ಬೆ.10.40ಕ್ಕೆ, ರಾ.9.45ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 4	

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವ್ಯಕ್ತಿ ನಾಪತ್ತೆ



ನಂಜನಗೂಡು, ಮಾ.3– ತಾಲೂಕಿನ ಅಡಕನಹಳ್ಳಿ ಗ್ರಾಮದ ನಾಗರಾಜು (70) ಫೆ.27ರಿಂದ ಕಾಣೆಯಾಗಿದ್ದಾರೆ. ಇವರ ಸುಳಿವು ಸಿಕ್ಕಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ತಿಳಿಸುವಂತೆ ನಂಜನಗೂಡು ಗ್ರಾಮಾಂತರ ಪೊಲೀಸರು ಮನವಿ ಮಾಡಿದ್ದಾರೆ.

ಸೇವಾ ಮನೋಭಾವ ಬೆಳವಣಿಗೆಗೆ ಎನ್‌ಎಸ್‌ಎಸ್ ಸಹಕಾರಿ

ಶಾಸಕ ಜಿ.ಡಿ.ಹರೀಶ್‌ಗೌಡ



ಮೋದೂರಲ್ಲಿ ನಡೆದ ಎನ್‌ಎಸ್‌ಎಸ್ ಶಿಬಿರದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.

ಹುಣಸೂರು, ಮಾ.3– ವಿದ್ಯಾರ್ಥಿಗಳು ಜೀವನದಲ್ಲಿ ಸೇವಾ ಮನೋಭಾವ ಬೆಳೆಸಿಕೊಳ್ಳಲು ಎನ್‌ಎಸ್‌ಎಸ್ ಶಿಬಿರ ಸಹಕಾರಿಯಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಮೋದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹುಣಸೂರು ಸರ್ಕಾರಿ ಮಹಿಳಾ ಕಾಲೇಜು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ನಡೆದ ಶಿಬಿರದಲ್ಲಿ ಮಾತನಾಡಿದ ಅವರು, ಪ್ರತಿವರ್ಷ ವಾರಗಳ ಕಾಲ ಮನೆ, ಕಾಲೇಜು ಬಿಟ್ಟು ಗ್ರಾಮೀಣ ಭಾಗದಲ್ಲಿ ಸ್ವಚ್ಛತೆಗೆ ಮುಂದಾಗುವಂತೆ ಪ್ರೇರೇಪಿಸುವ ಈ ಶಿಬಿರ ನಿಮ್ಮ ಮನೋವಿಕಾಸಕ್ಕೆ ಕನ್ನಡಿ ಎಂದರೆ ತಪ್ಪಾಗಲಾರದು ಎಂದರು.

ಕಾಲೇಜು ದಿನಗಳಲ್ಲಿ ಪಾಠ ಕಲಿಸುವ ಗುರುಗಳು ನಿಮ್ಮ ಭವಿಷ್ಯದ ಗುರಿಗೆ ಆದ್ಯತೆ ನೀಡಿದರೇ ಯಾವುದೇ ಸಾಧನೆ ಅಸಾಧ್ಯವಲ್ಲ. ಅಲ್ಲದೇ ಪಠ್ಯ ಓದಿದರೆ ಸಾಲದು. ಡಿ.ದೇವರಾಜ ಅರಸು ಅವರಂತಹ ಸಾಧಕರ ಜೀವನ ಚರಿತ್ರೆ ಓದಿ ಮನನ ಮಾಡಿಕೊಳ್ಳುವ ಮೂಲಕ ನಿಮ್ಮನ್ನು ನೀವು ಪರಿಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದರು. ಬಿಡುವಿನ ವೇಳೆ ವಿದ್ಯಾರ್ಥಿಗಳು ಕಥೆ, ಕವನ, ಕಾದಂಬರಿಯಂತಹ ಪುಸ್ತಕಗಳನ್ನು ತಿರುವು ಹಾಕಬೇಕು. ಆಗ ಹೊರಗಿನ ಸಾಮಾನ್ಯ ಜ್ಞಾನ ನಿಮ್ಮದಾಗುತ್ತದೆ. ಅಷ್ಟೇ ಅಲ್ಲದೆ ನೀವು ಉನ್ನತ ಸ್ಥಾನಕ್ಕೇರಲು ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಪ್ರಾಂಶುಪಾಲ ಪುಟ್ಟಶೆಟ್ಟಿ, ಎನ್‌ಎಸ್‌ಎಸ್ ಯೋಜನೆಯ ಡಾ.ಪ್ರಸನ್ನ, ಗ್ರಾಪಂ ಅಧ್ಯಕ್ಷ ರಾಮಚಂದ್ರ, ವಿಶ್ರಾಂತ ಪ್ರಾಂಶುಪಾಲ ಮಹೇಶಾರಾಧ್ಯ, ಉದ್ಯಮಿ ಶ್ರೀಧರ್, ಗ್ರಾಮಸ್ಥರಾದ ಬಸವಣ್ಣ, ಸಣ್ಣನಿಂಗೇಗೌಡ, ಕಾಳೇಗೌಡ, ಪತ್ರಕರ್ತ ನಾರಾಯಣ್, ಶಿವಕುಮಾರ್ ವಿ.ರಾವ್, ರೋಟರಿ ಅಧ್ಯಕ್ಷ ಚನ್ನಕೇಶವ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಇದ್ದರು.


ಬಿ.ಜೆ.ಪಿ ಯುವ ಮೋರ್ಚಾ ಮೈಸೂರು ನಗರ ಅಧ್ಯಕ್ಷರಾದ ಶ್ರೀಯುತ
ಆರ್.ರಾಕೇಶ್‌ಗೌಡ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶ್ರೀಯುತ
ಆರ್. ರಾಕೇಶ್ ಗೌಡ
ಅಧ್ಯಕ್ಷರು ಮೈಸೂರು ನಗರ
ಬಿ.ಜೆ.ಪಿ ಯುವ ಮೋರ್ಚಾ
ಕನ್ನೇಗೌಡ ಟೈಗರ್ಸ್
ಕೆ.ಜಿ.ಕೊಪ್ಪಲ್, ಜಯನಗರ, ಮೈಸೂರು